ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 15 | ಏಪ್ರಿಲ್ 6–12, 2020 | ಪುಟ 16 | ರೂ. 10

web: www.janashakthi.co.in e-mail : js_weekly@yahoo.com



ವಲಸೆ ಕಾರ್ಮಿಕರ ಅವಿಶ್ವಾಸ ಮತ



ಲಾಕ್‌ಡೌನ್‌ನ ಒಂದು ವಾರ



ಮಹಾಮಾರಿಯಿಂದ ರಕ್ಷಣೆಗೆ ಪಡಿತರ ವ್ಯವಸ್ಥೆಯ ವಿಸ್ತರಣೆ




ಕೊರೊನಾ ಮತ್ತು ಪಿತೂರಿ ಎರಡು ವೈರಸ್‌ಗಳ ಜಂಟಿ ದಾಳಿ



ಪಿಎಂ ಕೇರ್ಸ್ ಏಕೆ?

ಆರ್ಥಿಕ ಲಾಕ್‌ಡೌನ್... ಹೊರಬರುವುದು ಹೇಗೆ?



ಟಾರ್ಚ್ ಹಾಕಿ ಕೊರೊನಾ ಓಡಿಸಿ!

ಪಿ.ಎಂ.ಎನ್.ಆರ್.ಎಫ್.'ನ್ನು ಬದಿಗೊತ್ತಿ ಹೊಸದೊಂದು ನಿಧಿ ರಚನೆ ಅನಗತ್ಯ



ಕೋವಿಡ್-19 ಮಹಾಮಾರಿಯನ್ನು ಎದುರಿಸಲು "ಪಿಎಂ ಕೇರ್ಸ್' ಎಂಬ ಬೇರೊಂದು ನಿಧಿಯನ್ನು ರಚಿಸುವ ಅಗತ್ಯವಿರಲಿಲ್ಲ. ಇದರಲ್ಲಿ ಲೆಕ್ಕಪತ್ರಗಳನ್ನು ಇಡುವ, ಅವುಗಳ ಪರಿಶೋಧನೆಯ, ಅಥವ ನಾಲ್ಕು ಟ್ರಸ್ಟಿಗಳ ಉತ್ತರದಾಯಿತ್ವದ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಸಂಕ್ಷಿಪ್ತವಾಗಿ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಎಂಬುದಿಲ್ಲ ಎಂದು ಎಪ್ರಿಲ್ 1ರಂದು ನೀಡಿರುವ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಮೊದಲು 'ಭಾರತ್ ಕೇ ವೀರ್' ಎಂಬ ನಿಧಿಯನ್ನು ರಚಿಸಲಾಗಿದ್ದು, ಅದನ್ನು ಹೇಗೆ ಬಳಸಲಾಗಿದೆ ಎಂಬ ಬಗ್ಗೆ ಉತ್ತರದಾಯಿತ್ವ ಇದುವರೆಗೆ ಕಂಡು ಬಂದಿಲ್ಲ. ಈ ಹಿನ್ನೆಲೆಯಲ್ಲಿ 'ಪಿಎಂ ಕೇರ್ಸ್' ಬಹಳಷ್ಟು ಕಳವಳಕಾರೀ ಪ್ರಶ್ನೆಗಳನ್ನು ಎತ್ತುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಈ ಹೊಸ ನಿಧಿಯಲ್ಲಿ ಸಂಗ್ರಹವಾದ ಮೊತ್ತಗಳನ್ನು ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಬೇಕು, ಮತ್ತು ಅದರ ಮೂಲಕ ರಾಜ್ಯಸರಕಾರಗಳಿಗೆ ಈ ಮಹಾಮಾರಿಯ ಸವಾಲುಗಳನ್ನು ಎದುರಿಸಲು ಮತ್ತು ಜನಗಳ ಜೀವಗಳನ್ನು ಉಳಿಸಲು ಸಿಗುವಂತಾಗಬೇಕು ಎಂದು ಆಗ್ರಹಿಸಿದೆ.

'ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ'(ಪಿ.ಎಂ.ಎನ್.ಆರ್.ಎಫ್.) 1948ರಿಂದ ಅಸ್ತಿತ್ವದಲ್ಲಿ ಇದೆ. ಇದರಲ್ಲಿ ವೆಚ್ಚಮಾಡದೇ ಉಳಿದಿರುವ 3800 ಕೋಟಿ ರೂ. ಇದೆ ಎಂದು ವರದಿಯಾಗಿದೆ. ಈ ನಿಧಿಯ ಲೆಕ್ಕಪತ್ರಗಳು ಪಾರದರ್ಶಕವಾಗಿವೆ, ಸಿ,ಎ,ಜಿ, ಇದರ ಪರಿಶೋಧನೆ ನಡೆಸುತ್ತದೆ; ಮತ್ತು ದಾನಿಗಳಿಗ ಸ್ವಯಂ-ಉಂಟಾಗುವ ರಸೀತಿಗಳನ್ನು ಕೊಡಲಾಗುತ್ತದೆ. ಹೀಗಿರುವಾಗ ಹೊಸದೊಂದು ನಿಧಿಯನ್ನು ಏಕೆ ಸೃಷ್ಟಿಸಲಾಗಿದೆ ಎಂಬ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಲಾಗುತ್ತಿದೆ. ಈ ಹೊಸ ನಿಧಿಗೆ ಪ್ರಧಾನ ಮಂತ್ರಿಗಳು ಮತ್ತು ಮೂವರು ಇತರ ಮಂತ್ರಿಗಳು ಟ್ರಸ್ಟಿಗಳಾಗಿದ್ದಾರೆ, ಯಾವುದ ಪ್ರತಿಪಕ್ಷದ ಅಥವ ನಾಗರಿಕ ಸಮಾಜದ ಮುಖಂಡರುಗಳನ್ನು ಸದಸ್ಯರಾಗಿ ಮಾಡಿಲ್ಲ. ವಂತಿಗೆ ಪುಟವನ್ನು ಪ್ರಧಾನ ಮಂತ್ರಿಗಳ ಅಧಿಕೃತ ವೆಬ್‌ಪುಟದಲ್ಲಿ ಇಡಲಾಗಿದೆ.

ಪ್ರಧಾನ ಮಂತ್ರಿಗಳು ಬಹಿರಂಗವಾಗಿಯೇ ಸಾಮಾಜಿಕ ಮಾಧ್ಯಮಗಳ ಮೂಲಕ ದೇಣಿಗೆಗಳಿಗೆ ಮನವಿ ಮಾಡಿದ್ದಾ.ರೆ

ಕಾರ್ಪೊರೇಟ್ ಜಗತ್ತಿನಿಂದ, ಪ್ರಸಿದ್ಧ ವ್ಯಕ್ತಿಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಮುಂತಾದವುಗಳಿಂದ ಗಮನಾರ್ಹ ಪ್ರಮಾಣದಲ್ಲಿ ದೇಣಿಗೆಗಳ ಬಂದು ಸುರಿಯುತ್ತಿವೆ. ಸರಕಾರೀ ನೌಕರರು ಮತ್ತು ವೃತ್ತಿಪರರು, ಸಶಸ್ತ್ರ ಮತ್ತು ಅರೆ-ಮಿಲಿಟರಿ ಪಡೆಗಳಿಂದ ಒಂದು ದಿನದ ವೇತನವನ್ನು ನಿಧಿಗೆ ಮುರಿದುಕೊಳ್ಳಲಾಗುತ್ತಿದೆ ಎಂಬ ವರದಿಗಳಿವೆ. ಅಲ್ಲದೆ ಕಾರ್ಪೊರೇಟ್‌ಗಳು ಇದಕ್ಕೆ ದೇಣಿಗೆ ನೀಡಿದರೆ ಸಾಕು, ಅದನ್ನೇ ಅವರ ಸಿ.ಎಸ್.ಆರ್.(ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ಬಾಧ್ಯತೆಯನ್ನು ಈಡೇರಿಸಿದಂತೆ ಎಂದು ಪರಿಗಣಿಸಲಾಗುವುದಂತೆ. ಲೆಕ್ಕಪತ್ರಗಳನ್ನು ಇಡುವ, ಅವುಗಳ ಪರಿಶೋಧನೆಯ, ಅಥವ ನಾಲ್ಕು ಟ್ರಸ್ಟಿಗಳ ಉತ್ತರದಾಯಿತ್ವದ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಸಂಕ್ಷಿಪ್ತವಾಗಿ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಎಂಬುದಿಲ್ಲ.

ಪುಲ್ವಾಮ ಭಯೋತ್ಪಾದಕ ದಾಳಿಯ ನಂತರ ಇಂತಹುದೇ 'ಭಾರತ್ ಕೇ ವೀರ್' ಎಂಬ ನಿಧಿಯನ್ನು ಈ ದುರಂತಕ್ಕೆ ಬಲಿಯಾದವರ ನೆರವಿಗೆಂದು ರಚಿಸಲಾಯಿತು. ಆದರೆ ಈ ಬಗ್ಗೆ ಯಾವುದೇ ಪಾರದರ್ಶಕತೆ, ಅಥವ ಈ ನಿಧಿಯನ್ನು ಹೇಗೆ ಬಳಸಲಾಗಿದೆ ಎಂಬ ಬಗ್ಗೆ ಉತ್ತರದಾಯಿತ್ವ ಕಂಡು ಬಂದಿಲ್ಲ. ಈ ಹಿನ್ನೆಲೆಯಲ್ಲಿ 'ಪಿಎಂ ಕೇರ್ಸ್' ಬಹಳಷ್ಟು ಕಳವಳಕಾರೀ ಪ್ರಶ್ನೆಗಳನ್ನು ಎತ್ತುತ್ತದೆ.

ಅಲ್ಲದೆ, ಆರೋಗ್ಯ ಸಮವರ್ತಿ ಪಟ್ಟಿಯಲ್ಲಿರುವ ವಿಷಯ, ರಾಜ್ಯಸರಕಾರಗಳಿಗೆ ಇದರಲ್ಲಿ ಒಂದು ಪ್ರಮುಖ ಪಾತ್ರವಿದೆ. ಈಗಾಗಲೇ ರಾಜ್ಯಸರಕಾರಗಳು ತೀವ್ರ ಒತ್ತಡಗಳಿಗೆ ಒಳಗಾಗಿವೆ, ಜಿ.ಎಸ್.ಟಿ. ಪಾವತಿ ಬಾಕಿಯೂ ಸೇರಿದಂತೆ ಅವುಗಳ ಸಂಪನ್ಮೂಲಗಳು ಕುಗ್ಗಿವೆ. ಇಂತಹ ಸನ್ನಿವೇಶದಲ್ಲಿ, ನಮ್ಮ ಸಂವಿಧಾನದ ಒಕ್ಕೂಟ ನೀತಿಗಳ ಪ್ರಕಾರ, ಹೊಸ ನಿಧಿಯಲ್ಲಿ ಸಂಗ್ರಹವಾದ ಮೊತ್ತಗಳನ್ನು ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಬೇಕು, ಮತ್ತು ಅದರ ಮೂಲಕ ರಾಜ್ಯಸರಕಾರಗಳಿಗೆ ಈ ಮಹಾಮಾರಿಯ ಸವಾಲುಗಳನ್ನು ಎದುರಿಸಲು ಮತ್ತು ಜನಗಳ ಜೀವಗಳನ್ನು ಉಳಿಸಲು ಸಿಗುವಂತಾಗಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಈ ಹೊಸ ನಿಧಿಯನ್ನು ರಚಿಸಿರುವುದರ ಹಿಂದಿರುವ ಉದ್ದೇಶವಂತೂ ಸಂದೇಹಾಸ್ಪದವಾಗಿಯೇ ಉಳಿದಿದೆ. ಅದೇನೇ ಇರಲಿ, ಇದಕ್ಕೆ 'ಇಂಡಿಯ ಕೇರ್ಸ್' ಎಂದ ಹೆಸರಿಸಬೇಕಾಗಿತ್ತೇ ವಿನಹ 'ಪಿಎಂ ಕೇರ್ಸ್' ಎಂದಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಕೊವಿಡ್-19ರ ವಿರುದ್ಧ ಭಾರತದ ಸಮರವನ್ನು ಕೋಮುಗ್ರಸ್ತಗೊಳಿಸುವುದನ್ನು ನಿಲ್ಲಿಸಿ

ದಿಲ್ಲಿಯಲ್ಲಿ ತಬ್ಲೀಘಿ ಜಮಾತ್‌ನ ಒಂದು ಸಭೆಯಲ್ಲಿ ಹಾಜರಿದ್ದ ಬಹಳಷ್ಟು ಜನಗಳು ದೇಶದ ವಿವಿಧ ಭಾಗಗಳಿಗೆ ಹೋಗಿದ್ದು ಅವರಲ್ಲಿ ಹಲವರಿಗೆ ಕೊರೊನ ಸೋಂಕು ತಗಲಿದೆ ಎಂದು ಪತ್ತೆಯಾಗಿರುವುದು ಒಂದು ಗಂಭೀರ ಆತಂಕದ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಮಾರ್ಚ್ ಮಧ್ಯಭಾಗದಲ್ಲಿ ಸಭೆ-ಸಮಾರಂಭಗಳ ಸಂಖ್ಯೆಯ ಮೇಲೆ ನಿರ್ಬಂಧಗಳಿದ್ದಾಗ ಇಂತಹ ಒಂದು ಸಭೆಯನ್ನು ನಡೆಸುವುದು ಜಮಾತ್ ಮುಖಂಡತ್ವದ ಬೇಜವಾಬ್ದಾರಿತನ. ಆದರೆ ಮಾರ್ಚ್ 20-21 ರಂದು ಮತ್ತೊಂದು ಸಮಾರಂಭಕ್ಕೆ ಅಧಿಕಾರಿಗಳು ಅವಕಾಶ ಹೇಗೆ ನೀಡಿದರು ಎಂಬುದು ಅರ್ಥವಾಗದ ಸಂಗತಿ ಎಂದು ಪೊಲಿಟ್ ಬ್ಯುರೊ ಟಿಪ್ಪಣಿ ಮಾಡಿದೆ.

ಇದಕ್ಕೆ ಒಂದು ಕೋಮುವಾದಿ ಬಣ್ಣ ಕೊಡಲು ಮತ್ತು ಒಂದು ನಿರ್ದಿಷ್ಟ ಸಮುದಾಯವನ್ನು ಗುರಿ ಮಾಡುವ ಪ್ರಯತ್ನಗಳನ್ನು, ಸಾಮಾಜಿಕ ಮಾಧ್ಯಮಗಳಲ್ಲಿ ಇಂತಹ ಪ್ರಚಾರವನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ. ಕೊರೊನ ವೈರಸ್ ಧರ್ಮದ ಆಧಾರದಲ್ಲಿ ಭೇದ ಮಾಡುವುದಿಲ್ಲ. ಈ ಪ್ರಶ್ನೆಯನ್ನು ಕೋಮುಗ್ರಸ್ತಗೊಳಿಸುವ ಎಲ್ಲ ಪ್ರಯತ್ನಗಳಿಗೆ ತಕ್ಕ ಪ್ರತ್ಯುತ್ತರ ನೀಡಬೇಕು. ಮಾರ್ಚ್ 13 ರಂದು 200ಕ್ಕಿಂತ ಹೆಚ್ಚು ಜನಗಳಿರುವ ಸಾಮಾಜಿಕ, ಧಾರ್ಮಿಕ, ರಾಜಕೀಯ ಸಭೆ ಸಮಾರಂಭಗಳನ್ನು ನಿಷೇಧಿಸಿದ ನಂತರ ದೇಶದ ಹಲವು ಭಾಗಗಳಲ್ಲಿ ನಡೆದಿರುವ ಎಲ್ಲ ದೊಡ್ಡ ಸಮಾರಂಭಗಳ ಆಮೂಲಾಗ್ರ ತನಿಖೆ ನಡೆಸಬೇಕು. ಅವುಗಳಲ್ಲಿ ಭಾಗವಹಿಸಿದವರನ್ನು ಪತ್ತೆ ಹಚ್ಚಿ ತಪಾಸಣೆಗೆ ಒಳಪಡಿಸಬೇಕು. ದಕ್ಷಿಣ ಕೊರಿಯ ಮತ್ತು ಸಿಂಗಾಪುರದಲ್ಲಿ ದೊಡ್ಡ ಗೋಷ್ಠಿಗಳಲ್ಲಿ ಭಾಗವಹಿಸಿದ ಎಲ್ಲರನ್ನೂ ಅತ್ಯಂತ ಜಾಗರೂಕತೆಯಿಂದ ಪತ್ತೆ ಹಚ್ಚಿ, ತೀವ್ರ ತಪಾಸಣೆಯ ನಂತರ ಅವರನ್ನು ಪ್ರತ್ಯೇಕಗೊಳಿಸಿ ಕೋವಿಡ್-19ರ ಸಾಮುದಾಯಿಕ ಪ್ರಸರಣ ನಡೆಯದಂತೆ ತಡೆದಿವೆ. ಅದರಿಂದ ನಾವು ಪಾಠ ಕಲಿಯಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ. ಭಾರತದ ತಪಾಸಣಾ ದರ ತುಂಬಾ ಕೆಳಗಿದೆ, ದಕ್ಷಿಣ ಕೊರಿಯಾದ್ದು ನಮ್ಮ ದರದ 241 ಪಟ್ಟು. ಇದನ್ನು ತುರ್ತಾಗಿ ಸರಿಪಡಿಸಬೇಕು ಎಂದೂ ಅದು ಹೇಳಿದೆ.

ಇದು ಕೋವಿಡ್-19ರ ವಿರುದ್ಧ ಭಾರತದ ಸಮರ. ಇದನ್ನು ಕೋಮುಗ್ರಸ್ತಗೊಳಿಸುವ ಎಲ್ಲ ಪ್ರಯತ್ನಗಳೂ ಈ ವೈರಸ್ಸನ್ನು ತಡೆಗಟ್ಟುವಲ್ಲಿ ನಮ್ಮ ವಿಜಯವನ್ನು ಶಿಥಿಲಗೊಳಿಸುತ್ತವೆ. ಇದು ನಮ್ಮನ್ನು ನಾವೇ ಸೋಲಿಸುವ ಒಂದು ಕೆಲಸವಾಗುತ್ತದೆ. ಸರಕಾರ ಇಂತಹ ಅಪಾಯಕಾರೀ ಕೋಮುವಾದಿ ಧ್ರುವೀಕರಣ ಹರಡುವುದನ್ನು ನಿಲ್ಲಿಸಲು ಸರ್ವ ಪ್ರಯತ್ನಗಳನ್ನು ನಡೆಸಬೇಕು ಎಂದು ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಪ್ರಚೋದನೆಗಳಿಗೆ ಬಲಿ ಬೀಳಬಾರದು, ಈ ಮಹಾಮಾರಿಯ ವಿರುದ್ಧ ನಮ್ಮ ಐಕ್ಯ ಪ್ರಯತ್ನಗಳನ್ನು ಬಲಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಎಲ್ಲರಿಗೂ ಮನವಿ ಮಾಡಿದೆ.

ಅತಿ ದೊಡ್ಡ ಮಾನವ ದುರಂತವನ್ನು ತಪ್ಪಿಸಲು ಸರಕಾರ ತಕ್ಷಣವೇ ಕಾರ್ಯರತವಾಗಬೇಕು

ಕೇಂದ್ರ ಕಾರ್ಮಿಕ ಮಂತ್ರಿಗಳು ತಕ್ಷಣ ಮಧ್ಯಪ್ರವೇಶಿಸಬೇಕು: ಕೇಂದ್ರ ಕಾರ್ಮಿಕ ಸಂಘಟನೆಗಳ ಆಗ್ರಹ

ಕಾರ್ಮಿಕ ಸಂಘಟನೆಗಳೊಡನೆ ಸಂಪರ್ಕ ಸಂಯೋಜನೆಯನ್ನು ಏರ್ಪಡಿಸಲು ಸರಕಾರಕ್ಕೆ ಮನವಿ

ಕೇಂದ್ರ ಸರಕಾರ ದೇಶವ್ಯಾಪಿ ಲಾಕ್‌ಡೌನ್ ಹಾಕಿದಾಗ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಬಾರದು, ಸಂಬಳ ಕಡಿತ ಮಾಡಬಾರದು ಎಂದೆಲ್ಲ 'ಸಲಹಾ ಆದೇಶ'(ಅಡ್ವೈಸರಿ)ಗಳನ್ನು ನೀಡಿರುವದಾಗಿ, ವಿನಂತಿ ಮಾಡಿರುವುದಾಗಿ ಹೇಳಲಾಗಿತ್ತು. ಆದರೆ ಅವುಗಳ ಪಾಲನೆಯಾಗುತ್ತಿಲ್ಲ, ಇದರಿಂಧ ಕಾರ್ಮಿಕರು ತೀವ್ರವಾದ ಬವಣೆಗಳಿಗೆ ಒಳಗಾಗಿದ್ದಾರೆ ಎಂದು ದೇಶದೆಲ್ಲೆಡೆಗಳಿಂದ ದೂರುಗಳು ಬರುತ್ತಿವೆ, ಈ ಕುರಿತಂತೆ ಕಾರ್ಮಿಕ ಸಂಘಟನೆಗಳ ಪ್ರಯತ್ನಗಳಿಗೆ ವಿವಿಧ ಮಟ್ಟಗಳಲ್ಲಿ ಆಡಳಿತಗಳು, ಇಲಾಖೆಗಳು, ಉದ್ದಿಮೆಗಳು ಸ್ಪಂದಿಸುತ್ತಿಲ್ಲ, ಆದ್ದರಿಂದ ಕೇಂದ್ರ ಕಾರ್ಮಿಕ ಮಂತ್ರಿಗಳು ಈ ವಿಷಯದಲ್ಲಿ ತಕ್ಷಣವೇ ಮಧ್ಯಪ್ರವೇಶಿಸಬೇಕೆಂದು ಕತ್ತು ಕೇಂದ್ರೀಐ ಕಾರ್ಮಿಕ ಸಂಘಟನೆಗಳು ಎಪ್ರಿಲ್ 1ರಂದು ಒಂದು ಜಂಟಿ ಪತ್ರ ಬರೆದು ಆಗ್ರಹಿಸಿವೆ.

ಲಾಕ್‌ಡೌನ್ ಜಾರಿಯಾದ ನಂತರ ಮಾರ್ಚ್ 26ರಂದು ಈ ಕೇಂದ್ರ ಕಾರ್ಮಿಕ ಸಂಘನೆಗಳು ಪ್ರಧಾನ ಮಂತ್ರಿಗಳಿಗ ಬರೆದ ಪತ್ರದಲ್ಲಿ ಹಲವು ಪ್ರಶ್ನೆಗಳನ್ನು ಎತ್ತಿದ್ದವು. ಸರಕಾರದ ಅಪೀಲುಗಳು ಮತ್ತು ಅಡ್ವೈಸರಿಗಳಿಂದ ಬುಡಮಟ್ಟದಲ್ಲಿ ಏನೂ ಆಗುವುದಿಲ್ಲ, ಸರಕಾರ ಕೂಡಲೇ ಬಲವಾದ ಕಾನೂನು ಪ್ರಕಾರ ಜಾರಿ ಮಾಡಲು ಸಾಧ್ಯವಿರುವ ಕ್ರಮಗಳನ್ನು ಪ್ರಕಟಿಸಬೇಕು. ಕೊರೊನ ಭೀತಿಯ ಹಿನ್ನೆಲೆಯಲ್ಲಿ ಮಾಲಕರು ನಡೆಸುತ್ತಿರುವ ರಿಟ್ರೆಂಚ್‌ಮೆಂಟ್‌ಗಳು, ಸಂಬಳ ಕಡಿತಗಳು, ಸಂಬಳರಹಿತ ಬಲವಂತದ ರಜಾಗಳು ಮುಂತಾದ ಕ್ರಮಗಳನ್ನು, ನಿರ್ದಿಷ್ಟವಾಗಿ ಕ್ಯಾಶುವಲ್, ಕಾಂಟ್ರಾಕ್ಟ್ , ತಾತ್ಕಾಲಿಕ ಕಾರ್ಮಿಕರ ವಿರುದ್ಧ ನಡೆಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಆ ಪತ್ರದಲ್ಲಿ ಕೇಳಿಕೊಳ್ಳಲಾಗಿತ್ತು. ಆದರೆ ಹಾಗೇನೂ ಮಾಢಿಲ್ಲ. ಆದರೆ ಲಾಕ್‌ಡೌನ್‌ನ ಒಂದು ವಾರದಲ್ಲಿ ಕಾರ್ಮಿಕ ಸಂಘಟನೆಗಳು ಎತ್ತಿದ್ದ ಅನುಮಾನಗಳು ನಿಜವಾಗಿವೆ. ಸರಕಾರದ, ಕಾರ್ಮಿಕ ಇಲಾಖೆಯ ಮತ್ತು ಗೃಹ ಇಲಾಖೆಯ ಮನವಿಗಳು, ಅಡ್ವೈಸರಿಗಳು ಬುಡಮಟ್ಟದಲ್ಲಿ ಏನೂ ಕೆಲಸ ಮಾಡುತ್ತಿಲ್ಲ, ಈ ಬಗ್ಗೆ ದೂರುಗಳಿಗೆ ಸಂಭಂಧಪಟ್ಟ ಇಲಾಖೆಗಳು, ಅಧಿಕಾರಿಗಳು ಸ್ಪಂದಿಸುತ್ತಲೂ ಇಲ್ಲ ಎಂದು ಕೇಂದ್ರ ಕಾರ್ಮಿಕ ಸಂಘಟನೆಳು ಕಾರ್ಮಿಕ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಕೆಲಸ ಕಳಕೊಂಡ, ಹಣವಿಲ್ಲದ, ಸೂರೂ ಇಲ್ಲದೆ, ಆಹಾರವಿಲ್ಲದೆ ಹತಾಶರಾಗಿ ತಂತಮ್ಮ ಊರುಗಳಿಗೆ ಮರಳಲು ಸಾರಿಗೆ ವ್ಯವಸ್ಥೆ ಇಲ್ಲದೆ ಕಾಲ್ನಡಿಗೆಯಲ್ಲೇ ಸಾಗಿರುವ, ಅದರಿಂದಾಗಿ ಪೋಲೀಸರ ಕಿರುಕುಳ, ರಾಜ್ಯಸರಕಾರಗಳ ಆದೇಶಗಳಿಂದಾಗಿ ಮಧ್ಯದಲ್ಲೇ ದಾರಿಗಾಣದೆ ನಿಂತಿರುವ ಕಾರ್ಮಿಕರ ಬವಣೆಗಳನ್ನು ಕಾರ್ಮಿಕ ಮಂತ್ರಿಗಳ ಗಮನಕ್ಕೆ ತಂದಿರುವ ಜಂಟಿ ಪತ್ರ ಕೂಡಲೇ ಸರಕಾರಗಳು ಅವರ ನೆರವಿಗೆ ಧಾವಿಸಬೇಕು, ಈ ಕುರಿತ ಗೃಹ ಮಂತ್ರಾಲಯದ ಸಲಹಾ ಆದೇಶಗಳನ್ನು ಜಾರಿಗೊಳಿಸುವಂತಾಗಬೇಕು ಎಂದು ಆಗ್ರಹಿಸಿದೆ.

ಎಲ್ಲ ಅಸಂಘಟಿತ ದುಡಿಮೆಗಾರರಿಗೆ, ದಿನಗೂಲಿ, ಕ್ಯಾಶುವಲ್, ಕಾಂಟ್ರಾಕ್ಟ್, ಹೊರಗುತ್ತಿಗೆ, ಪೀಸ್ ರೇಟ್, ಗೃಹಾಧಾರಿತ ಕಾರ್ಮಿಕರು, ಕೃಷಿ ಕೂಲಿಕಾರರು, ಮನರೇಗ ಕೂಲಿಕಾರರು ಹಾಗೂ ಅಂಗನವಾಡಿ, ಆಶಾ ಮುಂತಾದ ಸ್ಕೀಮ್ ಕಾರ್ಮಿಕರು, ಟ್ರಕ್ ಡ್ರೈವರ್‌ಗಳು, ಹೆಲ್ಪರುಗಳು, ಕೂಲಿಗಳು, ಹಮಾಲಿಗಳು, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ರಿಕ್ಷಾ ನಡೆಸುವವರು, ಮನೆ ಕೆಲಸಗಾರರು, ಬೀದಿ ವ್ಯಾಪಾರಿಗಳು, ಹೀಗೆ ಎಲ್ಲರಿಗೂ, ಅವರು ರಿಜಿಸ್ಟರ್ ಆಗಿರಲಿ, ಅಥವ ಆಗಿರದಿರಲಿ, ನಗದು ವರ್ಗಾವಣೆ ಮತ್ತು ರೇಶನ್ ಪರಿಹಾರಗಳನ್ನು ಖಾತ್ರಿಪಡಿಸಬೇಕು; ಈ ಎಲ್ಲ ಜನಗಳಿಗೆ ಆಹಾರ ಒದಗಿಸಲು ರೇಶನ್ ವ್ಯವಸ್ಥೆಯನ್ನು ಮತ್ತು ಆಹಾರಧಾನ್ಯಗಳ ಹೆಚ್ಚುವರಿ ದಾಸ್ತಾನನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು;

ಪುಟ 14 ನೋಡಿ

ಆವಶ್ಯಕ ಸರಕುಗಳಿಗೆ ಅನಿರ್ಬಂಧಿತ ಅಂತರ-ರಾಜ್ಯ ಸರಕು ಸಾಗಾಣಿಕೆ-ಕೇರಳದ ಆಗ್ರಹ

ಎಪ್ರಿಲ್ 2 ರಂದು ಪ್ರಧಾನ ಮಂತ್ರಿಗಳೊಂದಿಗೆ ಮುಖ್ಯಮಂತ್ರಿಗಳ ವೀಡಿಯೋ ಕಾನ್ಫರೆನ್ಸ್‌ನಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಂತರ-ರಾಜ್ಯ ಗಡಿಗಳಲ್ಲಿ ಆವಶ್ಯಕ ಸರಕುಗಳ ಅನಿರ್ಬಂಧಿತ ಸಾಗಾಣಿಕೆ ಇರಬೇಕು ಎಂದು ಕೇಳಿದರು ಹಾಗೂ ಲಾಕ್‌ಡೌನ್‌ನಿಂದ ಅಂತರ-ರಾಜ್ಯ ಸರಕು ಸಾಗಾಣಿಕೆಗೆ ಅಡ್ಡಿಯಾಗುವುದಿಲ್ಲ ಎಂದು ಪ್ರಧಾನಿಗಳು ಆಶ್ವಾಸನೆ ಕೊಡಬೇಕು ಎಂದರು. ಎಲ್ಲ ರಾಜ್ಯಗಳು ಒಂದಾಗಿ ಮಹಾಮಾರಿಯ ವಿರುದ್ಧ ಹೋರಾಟ ನಡೆಸಬೇಕು, ನೆರೆ ರಾಜ್ಯಗಳು ಸರಕು ಸಾಗಾಣಿಕೆಗೆ ಅಡ್ಡಿ ಉಂಟು ಮಾಡಬಾರದು ಎಂದು ಕೇಳಿದರು.

ವಿದೇಶಗಳಲ್ಲಿ ದುಡಿಯುತ್ತಿರುವ ಭಾರತೀಯರಿಗೆ ಆಯಾಯ ದೇಶಗಳಲ್ಲಿ ಭಾರತದ ರಾಯಭಾರಿ ಕಚೇರಿಗಳು ಕ್ವಾರಂಟೈನ್ ಕೇಂದ್ರ ಗಳನ್ನು ತೆರೆಯಬೇಕು ಎಂದೂ ಅವರು ಕೇಳಿದರು.

ರಾಜ್ಯದ ಸಾಲ ಪಡೆಯುವ ಸಾಮರ್ಥ್ಯಕ್ಕೆ ಹಾಕಿರುವ 3% ಮಿತಿಯನ್ನು ಈ ಬಿಕ್ಕಟ್ಟಿನ ಸಮಯದಲ್ಲಿ 5%ಕ್ಕೆ ಏರಿಸಬೇಕು ಎಂದೂ ಕೇರಳ ಆಗ್ರಹಿಸಿದೆ.

ಈ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಕೇಂದ್ರ ಆರೋಗ್ಯ ಕಾರ್ಯದರ್ಶಿಗಳು ರಾಜ್ಯದಲ್ಲಿ ಕೊರೊನ ವೈರಸ್‌ನಿಂದ ಸಾವು ಮತ್ತು ಸೋಂಕು ಹರಡದಂತೆ ಮಿತಗೊಳಿಸಲು ಮಾಡಿರುವ ಪ್ರಯತ್ನಗಳನ್ನು ಮೆಚ್ಚಿಕೊಂಡರು.

ಈಗ ರಾಜ್ಯದಲ್ಲಿ 256 ಮಂದಿ ಕೊವಿಡೊ-19 ಶುಶ್ರೂಷೆ ಪಡೆಯುತ್ತಿದ್ದಾರೆ. 1,65,934 ಮಂದಿ ವೀಕ್ಷಣೆಗೆ ಒಳಪಟ್ಟಿದ್ದಾರೆ.

ಕೊರೊನ ವೈರಸ್ ವಿರುದ್ಧ ಸಮರದ ಭಾಗವಾಗಿ ರಾಜ್ಯದಲ್ಲಿ ಪ್ರಕಟಿಸಿದ್ದ ಉಚಿತ ರೇಷನ್ ಕಾರ್ಯಾರಂಭ ಮಾಡಿದೆ. ಮೊದಲ ಎರಡು ದಿನಗಳಲ್ಲಿ ಒಟ್ಟು 28.36 ಲಕ್ಷ ಕಾರ್ಡುದಾರರಿಗೆ ಇದನ್ನು ಹಂಚಲಾಗಿದೆ. ಎಪ್ರಿಲ್ 30 ರ ವರೆಗೆ ಎಲ್ಲರಿಗೂ ಇದನ್ನು ಹಂಚಲಾಗುವುದು. ಕಡಿಮೆ ಆದಾಯದ ಕುಟುಂಬಗಳಿಗೆ 35 ಕೆ.ಜಿ ಮತ್ತು ಹೆಚ್ಚಿನ ಆದಾಯದ ಕುಟುಂಬಗಳಿಗೆ 15 ಕೆ.ಜಿ. ಆಹಾರಧಾನ್ಯಗಳನ್ನು ಕೊಡಲಾಗುತ್ತಿದೆ. 17 ಐಟಂಗಳಿರುವ 87 ಲಕ್ಷ ಕಿರಾಣಿ ಕಿಟ್‌ಗಳನ್ನು ರೇಶನ್ ಅಂಗಡಿಗಳ ಮೂಲಕ ಹಂಚಲಾಗುತ್ತಿದೆ.

ಸಂಪಾದಕೀಯ

ದೀಪ ಹಚ್ಚಿ ಕೊರೊನಾ ಓಡಿಸಲು ಮೋದಿ ಸಂದೇಶ!

ಬರುವ ಎಪ್ರಿಲ್ 5 ರಂದು ಭಾನುವಾರ ರಾತ್ರಿ 9 ಗಂಟೆಗೆ ಸರಿಯಾಗಿ ಮನೆಯೊಳಗೆ ಎಲ್ಲಾ ದೀಪಗಳನ್ನು ಆರಿಸಿ ಮನೆಯಲ್ಲಿ ಕತ್ತಲೆ ಕವಿಯುವಂತೆ ಮಾಡಿ ಮನೆಯ ಮಂದಿಯಲ್ಲಾ ಮನೆಯ ಎದುರಿನ ಬಾಲ್ಕನಿಯಲ್ಲಿ ಅಥವ ಹೊರ ಆವರಣಕ್ಕೆ ಬಂದು ಸರಿಯಾಗಿ ಒಂಬತ್ತು ನಿಮಿಷಗಳ ವರೆಗೆ ದೀಪಗಳನ್ನು ಅಥವ ಮೇಣದ ಬತ್ತಿಗಳನ್ನು ಅಥವ ಟಾರ್ಚ್ ಲೈಟ್‌ಗಳನ್ನು ಅಥವ ನಿಮ್ಮ ಮೊಬೈಲ್‌ಗಳ ಲೈಟ್‌ಗಳನ್ನು ಹಚ್ಚಿಕೊಂಡು ನಾವೆಲ್ಲರೂ ಒಂದಾಗಿದ್ದೇವೆ ಎಂದು ತೋರಿಸಬೇಕು ಎಂದು ಕೊರೊನಾ ವೈರಾಣುವನ್ನು ಭಾರತದ ಗಡಿಗಳಿಂದ ಆಚೆಗೆ ಓಡಿಸಲು ಹೊಸ ತಂತ್ರವನ್ನು ಭೋಧಿಸಿದ್ದಾರೆ! ನಮ್ಮ ದೇಶದ ಎಲ್ಲ ಪ್ರಜೆಗಳು, ಅವರು ಜಾತಿ ಮತ ಪಂಥಕ್ಕೆ ಸೇರಿದವರಾಗಿದ್ದರೂ ಎಲ್ಲರೂ ಒಂದಾಗಿ ತಪ್ಪದೆ ಎಪ್ರಿಲ್ 5 ರ ರಾತ್ರಿ ದೀಪಗಳನ್ನು ಹಚ್ಚುವ ಕಾರ್ಯದಲ್ಲಿ ಭಾಗವಹಿಸಬೇಕೆಂದು ಪ್ರಧಾನಿ ಮೋದಿಯವರು ಎಲ್ಲ ದೇಶವಾಸಿಗಳಿಗೆ ಆದೇಶ ನೀಡಿದ್ದಾರೆ!

ಯಾವ ಸರಿಯಾದ ಪೂರ್ವಯೊಜನೆ ಏಕಾಏಕಿಯಾಗಿ ದೇಶದ ಜನತೆಯ ಮೇಲೆ ಹೇರಲಾದ ಲಾಕ್‌ಡೌನ್‌ದಿಂದ ಕೊರೊನಾ ಹರಡುವುದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಲು ಸಾಧ್ಯವಾಗಿದೆ. ಈ ಅಲ್ಪ ಸಾಧನೆಗೆ ಜನತೆಯ, ಆರೋಗ್ಯ ಕಾರ್ಯಕರ್ತರ, ಪೊಲೀಸರ, ಅಪಾರ ತ್ಯಾಗ, ಸಹನೆ ಮತ್ತು ಶ್ರಮವೇ ಕಾರಣ. ಇದರಿಂದಾಗಿ ನಮ್ಮ ನೇಗಿಲ ಯೋಗಿಗಳು ಕಷ್ಟ ಪಟ್ಟು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲಾಗದೆ ನಷ್ಟ ಅನುಭವಿಸಿದ್ದಾರೆ. ಆತ್ಮಹತ್ಯೆಗೆ ಬಲಿಯಾಗಿದ್ದಾರೆ. ನಗರಗಳನ್ನು ಕಟ್ಟಲು, ಅವುಗಳನ್ನು ಸುಂದರಗೊಳಿಸಲು ದೂರದೂರದ ರಾಜ್ಯಗಳಿಂದ ವಲಸೆ ಬಂದು ತಮ್ಮ ಜೀವನವನ್ನು ತೇಯುತ್ತಿದ್ದ ಅಸಂಘಟಿತ ವಲಯದ ಶ್ರಮಜೀವಿಗಳು ಇಲ್ಲಿ ಒಪ್ಪತ್ತಿನ ಗಂಜಿಗೂ ಗತಿಯಿಲ್ಲದೆ, ವಾಪಸ್ ತಮ್ಮ ಊರಿಗೂ ಹೋಗಲಾಗದೆ ನೂರಾರು ಕಿ.ಮೀ. ನಡೆದು ಹೋದವರೂ, ನಿತ್ಯವೂ ಬೆವರು ಸುರಿಸಿ ತಮ್ಮ ಅನ್ನವನ್ನು ಸಂಪಾದಿಸುವವರು, ಮಹಾತ್ಮ ಗಾಂಧಿ ಹೆಸರಿನ ಗ್ರಾಮೀಣ ಉದ್ಯೋಗವನ್ನು ನಂಬಿ ದಿನದೂಡುತ್ತಿದ್ದ ಕೂಲಿಕಾರರು, ಸೋಂಕಿತರೆಂದು ಶಂಖಿತರಾದವರ ಸೇವೆಯಲ್ಲಿ ತೊಡಗಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಜೀವದ ಹಂಗು ತೊರೆದ ನಿಜ ದೇಶ ಪ್ರೇಮಿಗಳು ಮೊದಲಾದವರ ತ್ಯಾಗ ಬಲಿದಾನಗಳಿಂದ ಕೊರೊನಾ ಹೆಮ್ಮಾರಿಯನ್ನು ಸ್ವಲ್ಪ ಮಟ್ಟಿಗಾದರೂ ದೂರ ಮಾಡಲು ಸಾಧ್ಯವಾಗಿದೆ.

ಆದರೆ ಇದರ ಕೀರ್ತಿಯನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಹೊರಟಿದ್ದಾರೆ ಮೋದಿ ಶಾ ರವರ ಜೋಡಿ! ದೀಪ ಹಚ್ಚಿದರೆ ಕತ್ತಲೆ ಓಡುತ್ತದೆ. ಹಾಗೆಯೇ ಎಪ್ರಿಲ್ 5 ರ ರಾತ್ರಿ ದೀಪ ಹಚ್ಚಿದ್ದರೆ ಕೊರೊನಾ ಎಂಬ ಕಗ್ಗತ್ತಲು ಓಡಿಹೋಗಲಿದೆ ಎಂಬ ಮೌಢ್ಯವನ್ನು ಪ್ರಧಾನಿ ಸ್ಥಾನದಿಂದ ಭಿತ್ತರಿಸಲಾಗಿದೆ. ಸಂಕಷ್ಟಕ್ಕೆ ಗುರಿಯಾದ ವ್ಯಕ್ತಿ ಸಹಜವಾಗಿ ಮೌಢ್ಯಕ್ಕೆ ಶರಣಾಗುವುದನ್ನು ನಾವು ನೋಡುತ್ತಿರುತ್ತೇವೆ. ಇವರು ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವ ಸನಾತನ ಧರ್ಮಕ್ಕೆ ಕೊರೊನಾ ನಿರ್ಮೂಲನೆ ಮಾಡಲಿದೆ ಎಂಬ ಮೌಢ್ಯಕ್ಕೆ ಶರಣಾಗುವಂತೆ ಮಾಡಲು ಹೊರಟಿದ್ದಾರೆ. ಇಂತಹ ಮೌಢ್ಯ ಎಲ್ಲಾ ಮತಧರ್ಮಗಳಲ್ಲಿ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇದ್ದೇ ಇರುತ್ತದೆ. ಮೈಮೇಲೆ ಬಂದಿದೆ ಎನ್ನಲಾದ ದೆವ್ವ ಬಿಡಿಸಲು ಇಂತಹವರಿಗೆ ಶರಣಾಗುತ್ತಾರೆ. ಕಾಯಿಲೆ ಗುಣ ಮಾಡಲು ಮಂತ್ರಿಸಿದ ದಾರವನ್ನು, ತಾಯಿತವನ್ನು ಕಟ್ಟಿಕೊಳ್ಳುತ್ತಾರೆ. ರೋಗವನ್ನು ಗುಣಪಡಿಸಿಕೊಳ್ಳಲು ತೀರ್ಥಗಳಲ್ಲಿ ಮುಳುಗಿ ಏಳುತ್ತಾರೆ. ಚುನಾವಣೆಗಳಲ್ಲಿ ಗೆಲ್ಲಲು ಯಜ್ಞಯಾಗಗಳನ್ನು ಮಾಡಿಸುತ್ತಾರೆ. ಮಂತ್ರ ವಾದಿಗಳೆನ್ನುವವರು ಇಂತಹ ನೂರಾರು ವಿಧಾನಗಳನ್ನು ಹೇಳಿಕೊಟ್ಟು ಹಣ ಮಾಡುತ್ತಾರೆ.

ಕೊರೊನಾ ಎಂಬ ಲಕ್ಷಾಂತರ ಜೀವಿಗಳ ನಡುವೆ ಹಬ್ಬಿ ಹರಡುವ ಈ ಕ್ರೂರ ಸಾಂಕ್ರಾಮಿಕ ರೋಗಕ್ಕೆ ಪರಿಹಾರವಾಗಬಲ್ಲ ವೈಜ್ಞಾನಿಕ ಕ್ರಮವನ್ನು ಸಂಶೋಧಿಸಲು ಆದ್ಯತೆ ನೀಡಬೇಕಾದ ಮೋದಿ ಸರ್ಕಾರ ದೀಪಹಚ್ಚಿ ಕೊರೊನಾವನ್ನು ಓಡಿಸಲು ಹೊರಟಿರುವುದು ನಾಚಿಕೆಗೇಡು!

ಕರ್ನಾಟಕ ಲಾಕ್ ಡೌನ್ ವಿಚಾರದಲ್ಲಿನ ಆತಂಕಗಳ ನಿವಾರಣೆಗೆ ಈ ಕೆಳಕಂಡ ಕ್ರಮಗಳನ್ನು ವಹಿಸಲು ಕೋರಿ ಮುಖ್ಯಮಂತ್ರಿಗಳಿಗೆ ಮನವಿ

ಕರ್ನಾಟಕ ರಾಜ್ಯ ಬಹುತೇಕ ಲಾಕ್ ಡೌನ್ ಆಗಿ ಒಂದು ವಾರವನ್ನು ಪೂರೈಸಿದೆ. ಕಲಬುರಗಿಯಂತೂ ಎರಡು ವಾರಗಳನ್ನು ಪೂರೈಸಿದೆ. ರಾಜ್ಯದ ಬಹುತೇಕ ಜನತೆ ಕೋವಿಡ್–19 ನ್ನು ಎದುರಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜೊತೆ ಕೈ ಜೋಡಿಸಿ ಲಾಕ್ ಡೌನ್ ಆಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕೋವಿಡ್–19 ರ ಮುಂದುವರಿಕೆಯ ಸರಪಳಿಯನ್ನು ತುಂಡರಿಸುವಲ್ಲಿ ಮಗ್ನವಾಗಿದೆ. ಪರಿಸ್ಥಿತಿ ಹೀಗೆ ಮುಂದುವರೆದಿರುವಾಗಲೇ ಕೆಲವು ಆತಂಕಕಾರಿ ಅಂಶಗಳು ಕಂಡುಬಂದಿವೆ.

ರಾಜ್ಯದಲ್ಲಿ ವಲಸೆ ಕಾರ್ಮಿಕರು ಉದ್ಯೋಗ ಹೀನರಾಗಿ, ಅನಾರೊಗ್ಯದ ಭಯದಿಂದ ರಾಜ್ಯ ಬಿಟ್ಟು ತಮ್ಮ ರಾಜ್ಯಗಳಿಗೆ ಮತ್ತು ರಾಜ್ಯದೊಳಗಿನ ವಲಸೆ ಕಾರ್ಮಿಕರು ತಮ್ಮ ಗ್ರಾಮಗಳಿಗೆ ತೆರಳುವ ಆತುರದಲ್ಲಿದ್ದಾರೆ. ಅವರಿಗೀಗ ತಮ್ಮ ಗ್ರಾಮಗಳಿಗೆ ತೆರಳಲು ಸಾರಿಗೆ ಸೌಕರ್ಯಗಳಿಲ್ಲದೇ ತೊಂದರೆಯಾಗಿ ನೂರಾರು ಕಿ.ಮೀ ಪಾದಯಾತ್ರೆಯಲ್ಲಿ ತೊಡಗಿರುವುದು ಕಂಡುಬಂದಿದೆ.

ಅದೇ ರೀತಿ, ಕೆಲವು ದೊಡ್ಡ ಕೈಗಾರಿಕೆಗಳು ದೇಶವೇ ಲಾಕ್ಡೌನ್ ಆದರೂ ಅವುಗಳು ಉತ್ಪಾದನೆಯನ್ನು ನಿಲ್ಲಿಸಿಲ್ಲ. ಸಾವಿರಾರು ಜನ, ಕೆಲವೆಡೆ ದಶ ಸಾವಿರ ಗಟ್ಟಲೇ ಕಾರ್ಮಿಕರು ಉತ್ಪಾದನೆಯಲ್ಲಿ ತೊಡಗಿದ್ದಾರೆ.

ಈ ಕಾರ್ಮಿಕರು ಹಾಗೂ ಅವರ ಕುಟುಂಬಗಳು ಮತ್ತು ಅವರು ವಾಸಿಸುವ ಪ್ರದೇಶಗಳು ಗಂಭೀರ ಆತಂಕಕ್ಕೊಳಗಾಗಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಠಿಣ ಕ್ರಮ ವಹಿಸಿ ಅವುಗಳನ್ನು ತಡೆಯಲು ಮುಂದಾಗದಿರುವ ದ್ವಂದ್ವ ನಿಲುಮೆಯ ಕುರಿತು ಅನುಮಾನ ಪಡುವಂತಾಗಿದೆ.

ಸರಕಾರಗಳ ಮತ್ತು ಕೈಗಾರಿಕಾ ಮಾಲೀಕರ ಜವಾಬ್ದಾರಿ ರಹಿತ ವರ್ತನೆಯಿಂದಾಗಿ ಮತ್ತು ಇಂತಹ ಅಪಾಯಕಾರಿ ಸನ್ನಿವೇಶದಲ್ಲೂ ಲಾಭಕೋರ ನೀತಿಯಿಂದಾಗಿ, ಇದೀಗ ನಂಜನಗೂಡು ತಾಲೂಕಿನ ಜನತೆ ಅಪಾಯಕ್ಕೀಡಾಗಿದೆ. ಕೈಗಾರಿಕೆಯಲ್ಲಿನ ವೈರಸ್ ಸೋಂಕಿತರೊಬ್ಬರಿಂದ ಇಡೀ ಕೈಗಾರಿಕೆಯ ಕಾರ್ಮಿಕರೆಲ್ಲರೂ ಸೋಂಕಿಗೊಳಗಾಗುವಂತಾಗಿದೆ. ಅವರ ಕುಟುಂಬಗಳೆಲ್ಲಾ ಸೋಂಕಿಗೊಳಗಾಗುವ ಪರಿಸ್ಥಿತಿ ಮತ್ತು ಆ ಪ್ರದೇಶದ ದಶ ಸಾವಿರ ಗಟ್ಟಲೆಯ ಕುಟುಂಬಗಳು ಸೋಂಕಿನ ಭೀತಿಗೊಳಗಾಗುವಂತಾಗಿದೆ. ಈ ಕುರಿತ ರಾಜ್ಯ ಸರಕಾರದ ತೀವ್ರ ಮಧ್ಯ ಪ್ರವೇಶ ಮತ್ತು ಕಠಿಣ ಕ್ರಮಗಳು ಅಗತ್ಯವಾಗಿವೆ.

ಈಗಲೂ ತೋರಣಗಲ್ಲುನ ಜಿಂದಾಲ್ ಕಂಪನಿಯಲ್ಲಿ 15,000 ಕ್ಕೂ ಅಧಿಕ ಕಾರ್ಮಿಕರು ಈಗಲೂ ದುಡಿಯುತ್ತಿರುವುದನ್ನು ತಡೆಯಬೇಕಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶದ ಕೃಷಿಕೂಲಿಕಾರರು, ಬಡರೈತರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಸ್ವಯಂ ವೃತ್ತಿಯಲ್ಲಿದ್ದ ಸಾರಿಗೆ ಮತ್ತಿತರೆ ಕಾರ್ಮಿಕರು, ಕ್ಷೌರಿಕರು, ಮಂಗಳ ವಾದ್ಯ ಕಲಾವಿದರು ಮುಂತಾಗಿ, ಲಾಕ್ ಡೌನ್ ನಿಂದಾಗಿ ಉದ್ಯೋಗ ಹೀನರಾಗಿದ್ದಾರೆ. ಇವರಾರಿಗೂ ನಿರುದ್ಯೋಗ ಭತ್ಯೆ, ಉಪ ಜೀವನದಯಾದಿಯು, ಆರೋಗ್ಯ ಸುರಕ್ಷೆಯು ಇನ್ನು ದೊರೆಯದಾಗಿದೆ. ಇದನ್ನೆಲ್ಲಾ ನಿವಾರಿಸಲು ಅಗತ್ಯ ಕ್ರಮಗಳಾಗಬೇಕು.

ರೈತರ ಕೃಷಿ ಉತ್ಪನ್ನಗಳ ಖರೀದಿಗೆ ಮತ್ತು ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಮತ್ತು ಕ್ರಮಗಳಾಗದೇ ರೈತರು ತೊಂದರೆಗೀಡಾಗಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರಕಾರಗಳು ಇದುವರೆಗೆ ಪ್ರಕಟಿಸಿದ ಕ್ರಮಗಳು ಸ್ವಾಗತಾರ್ಹವಾದರೂ ಅವುಗಳು ಬೆಳೆಯುತ್ತಿರುವ ಪರಿಸ್ಥಿತಿಯನ್ನೆದುರಿಸಲು ಸಾಲದಾಗಿವೆ.

ಅದೇ ರೀತಿ, ಪೋಲೀಸ್ ಇಲಾಖೆಯ ಕ್ರಮ ಈ ವಿಚಾರದಲ್ಲಿ ಒಟ್ಟಾರೆ ಸ್ವಾಗಾತಾರ್ಹವಾಗಿದ್ದರೂ, ಕೆಲವೆಡೆ ಅತಿರೇಕದ ಕ್ರಮಗಳಿಂದ ಜನತೆ ಅಸಮಾಧಾನಗೊಳ್ಳುವಂತಾಗಿದೆ. ಅದನ್ನು ಸರಿಪಡಿಸಲು ಕ್ರಮಗಳಾಗಬೇಕಾಗಿದೆ.

ಅದೇ ರೀತಿ, ಪ್ರಮುಖ ರಾಜಕೀಯ ಪಕ್ಷಗಳ ಕಾರ್ಯಕರ್ತರು ಸಂಕಷ್ಟದಲ್ಲಿರುವ ಜನತೆಗೆ ನೆರವಾಗಲೂ ಸಾದ್ಯವಾಗುವಂತೆ ಅಗತ್ಯ ಕ್ರಮಗಳನ್ನು ಸರಕಾರ ಕ್ರಮವಹಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸಿಪಿಐಎಂ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

1) ನಂಜನಗೂಡಿನ ಜ್ಯುಬಿಲಿಯೆಂಟ್ ಆರ್ಗನೈಜೇಸನ್ ಕೈಗಾರಿಕೆ ಕಾರ್ಮಿಕರಲ್ಲುಂಟಾದ ಸೋಂಕಿನಿಂದುಂಟಾದ ಪರಿಸ್ಥಿತಿಯಾಧಾರದಲ್ಲಿ ನಂಜನಗೂಡು ತಾಲೂಕನ್ನು ವಿಶೇಷ ಲಾಕ್ ಡೌನ್ ಪ್ರದೇಶವಾಗಿ ಪರಿಗಣಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಕ್ರಮವಹಿಸಬೇಕು. ಕಾರ್ಮಿಕರು ಹಾಗೂ ಅವರ ಕುಟುಂಬಗಳ ಸೋಂಕು ನಿಯಂತ್ರಣಕ್ಕೆ ಆ ಪ್ರದೇಶದ ಸುರಕ್ಷತೆಗೆ ವಿಶೇಷ ಕ್ರಮಗಳನ್ನು ಅಗತ್ಯ ಆರೋಗ್ಯ ಸೌಲಭ್ಯ ಮತ್ತು ಬಂಡವಾಳವನ್ನು ಒದಗಿಸಬೇಕು. ಈ ವಿಚಾರದಲ್ಲಿ ಜವಾಬ್ದಾರಿ ರಹಿತವಾಗಿ ವರ್ತಿಸಿದ ಕೈಗಾರಿಕಾ ಮಾಲೀಕನ ಮೇಲೆ ಕ್ರಿಮಿನಲ್ ಧಾವೆ ಹೂಡಬೇಕು.
2) ಬಳ್ಳಾರಿ ಜಿಲ್ಲೆಯ ಸಂರಕ್ಷಣೆಗಾಗಿ, ತೋರಣಗಲ್ಲು ಪ್ರದೇಶದ ಜಿಂದಾಲ್ ಸ್ಟೀಲ್ಸ್ ಕೈಗಾರಿಕೆಯ ಉತ್ಪಾದನೆ ಸ್ಥಗಿತಗೊಳಿಸುವಂತೆ ತಕ್ಷಣ ಆದೇಶಿಸಿ, ನಿಲ್ಲಿಸಬೇಕು. ಕಾರ್ಮಿಕರಿಗೆ ವೇತನ ಸಹಿತ ರಜೆಯನ್ನು ಘೋಷಿಸುವಂತೆ ಮತ್ತು ಅವರ ಆರೋಗ್ಯ ತಪಾಸಣೆಗೆ ಕ್ರಮವಹಿಸಿ ಅವರ ಸ್ವಗ್ರಾಮಗಳಿಗೆ ತೆರಳುವಂತೆ ಕ್ರಮ ವಹಿಸಬೇಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ವಿಚಾರದಲ್ಲಿ ಜವಾಬ್ದಾರಿಯನ್ನು ಮೆರೆಯಬೇಕು ಬಳ್ಳಾರಿ ಜಿಲ್ಲೆಯ ಜನತೆಯ ಆತಂಕವನ್ನು ತಡೆಯಬೇಕು.
3) ವಲಸೆ ಕಾರ್ಮಿಕರ ಪರಿಸ್ಥಿತಿಯನ್ನು ಗಮನಿಸಿ ಹೊರ ರಾಜ್ಯಗಳಿಂದ ರಾಜ್ಯಕ್ಕೆ ವಲಸೆ ಬಂದು ದುಡಿಯುತ್ತಿರುವ ಕಾರ್ಮಿಕರನ್ನು, ಅತಿಥಿ ಕಾರ್ಮಿಕರೆಂದು ಪರಿಗಣಿಸಿ, ಅವರ ವಾಸಕ್ಕೆ ಮತ್ತು ಅವರ ಆಹಾರ, ಆರೋಗ್ಯ ಮತ್ತಿತರೆ ಅಂಶಗಳಿಗೆ ಅಗತ್ಯ ಸೌಲಭ್ಯಗಳನ್ನು ರಾಜ್ಯ ಸರಕಾರ ಒದಗಿಸಬೇಕು. ಅವರ ಆರೋಗ್ಯ ಪರಿಸ್ಥಿತಿಯ ಆಧಾರದಲ್ಲಿ, ಅವರು ಆರೋಗ್ಯವಾಗಿದ್ದು ಅವರು ತಮ್ಮ ಸ್ವಗ್ರಾಮಗಳಿಗೆ ತೆರಳಲು ಇಚ್ಛೆಸಿದಲ್ಲಿ ಅಂತಹವರನ್ನು ವಿಶೇಷ ಬಸ್ ಹಾಗೂ ರೈಲುಗಳ ಮೂಲಕ ಕಳುಹಿಸಲು ವ್ಯವಸ್ಥೆ ಮಾಡಬೇಕು. ಇದಕ್ಕೆ ಕೇಂದ್ರ ಸರಕಾರದ ನೆರವನ್ನು ಪಡೆಯಬೇಕು. ಅದೇ ರೀತಿ, ಆರೋಗ್ಯ ಸಮಸ್ಯೆ ಇರುವವರನ್ನು ಇಲ್ಲಿಯೇ ಉಳಿಸಿಕೊಂಡು ಶೂಶ್ರೃಷೆ ನೀಡಬೇಕು. ಅವರ ಆರೋಗ್ಯ ಸುಧಾರಣೆಯ ನಂತರ ಅವರ ಸ್ವಗ್ರಾಮಗಳಿಗೆ ಕಳುಹಿಸಲು ಕ್ರಮ ವಹಿಸಬೇಕು.
4) ರಾಜ್ಯದ ವಲಸೆ ಕಾರ್ಮಿಕರಿಗೂ ಮೇಲಿನಂತೆಯೇ ಕ್ರಮ ವಹಿಸಬೇಕು. ಅದಾಗಲೇ ಸಾವಿರಾರು ಕಾರ್ಮಿಕರು ಸುತ್ತ– ಮುತ್ತಲ ರಾಜ್ಯಗಳಿಂದ ನಮ್ಮದೇ ರಾಜ್ಯದ ವಿವಿಧ ನಗರ ಹಾಗೂ ಪಟ್ಟಣಗಳಿಂದ ಸ್ವಗ್ರಾಮಗಳಿಗೆ ಪಾದ ಯಾತ್ರೆಯಲ್ಲಿ ತೆರಳುತ್ತಿದ್ದಾರೆ. ಅವರುಗಳನ್ನು ಅಯಾ ತಾಲೂಕಾ ಕೇಂದ್ರಗಳಲ್ಲಿ ತಡೆದು ಅವರಿಗೆ ಅಗತ್ಯ ಉಟೋಪಚಾರ ಮತ್ತು ವಸತಿ ಸೌಲಭ್ಯವನ್ನು ಒದಗಿಸಬೇಕು ಅಲ್ಲದೇ ಅವರ ಆರೋಗ್ಯ ತಪಾಸಣೆ ಗೈದು, ಆರೋಗ್ಯವಂತರನ್ನು ವಿಶೇಷ ಬಸ್ ಹಾಗೂ ರೈಲು ವ್ಯವಸ್ಥೆ ಮಾಡಿ ಸ್ವಗ್ರಾಮಗಳಿಗೆ ತಲುಪಿಸಬೇಕು. ಉಳಿದವರಿಗೆ ಶೂಶ್ರೃಷೆ ನೀಡಿ ಕಳುಹಿಸಬೇಕು. ಅಲ್ಲಿಯವರೆಗೆ ಎಲ್ಲ ರೀತಿಯ ನೆರವು ನೀಡಬೇಕು.
5) ಗ್ರಾಮೀಣ ಹಾಗೂ ನಗರ ಪ್ರದೇಶದ ಕೃಷಿ ಕೂಲಿಕಾರರು ಮತ್ತು ಬಡರೈತರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಸ್ವಯಂ ವೃತ್ತಿ ನಿರತರು (ಉದಾ : ಕ್ಷೌರಿಕ ವೃತ್ತಿ ನಿರತರು, ಮಂಗಳ ವಾದ್ಯ ಕಲಾವಿದರು, ಸಾರಿಗೆ ಸೇವೆಯ ಸಣಗಣ ವೃತ್ತಿ ನಿರತರು ಮುಂತಾಗಿ) ಲಾಕ್

ಪುಟ 4 ಕ್ಕೆ

ಲಾಕ್‌ಡೌನ್‌ನಿಂದ ಕೃಷಿ ವಿನಾಯಿತಿಗೆ ಸಂಬಂಧಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಸೂಚನೆಗಳು

ಲಾಕ್‌ಡೌನ್‌ನಿಂದ ಕೃಷಿ ಚಟುವಟಿಕೆಗಳು ಮತ್ತು ಕೃಷಿ ಉತ್ಪನ್ನಗಳ ಸಾಗಾಣಿಕೆ, ಮಾರಾಟ, ಖರೀದಿ ಇತ್ಯಾದಿಗಳನ್ನು ವಿನಾಯಿತಿ ನೀಡುವುದರ ಮೂಲಕ ಸಂಕಷ್ಟದಲ್ಲಿರುವ ರೈತರು ಹಾಗೂ ಕೃಷಿ ಉತ್ಪನ್ನಗಳ ವಿಪರೀತ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಸಾಮಾನ್ಯ ಗ್ರಾಹಕರನ್ನು ರಕ್ಷಿಸಲಾಗುವುದೆಂಬ ರಾಜ್ಯ ಸರ್ಕಾರದ ನಿರ್ಧಾರ ಸಮಸ್ಯೆಯ ಆಳಕ್ಕೆ ಇಳಿಯದ ತೋರಿಕೆಯ ಕ್ರಮಗಳಾಗಿವೆ ಮಾತ್ರವಲ್ಲ ಇಂತಹ ಸಂಕಷ್ಟದ ಸಂದರ್ಭದಲ್ಲಿಯು ಜವಾಬ್ದಾರಿಯಿಂದ ನುಸಿಳಿಕೊಳ್ಳುವ ಕ್ರಮಗಳಾಗಿವೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಅಭಿಪ್ರಾಯ ಪಡುತ್ತದೆ.

ಕೆ.ಎಂ.ಎಫ್. ನಿಂದ ಹೆಚ್ಚುವರಿ ಹಾಲನ್ನು ಖರೀದಿಸಿ ಬಡವರಿಗೆ ಹಂಚುವ ನಿರ್ಧಾರದಂತೆಯೇ, ಕೃಷಿ ಉತ್ಪಾದನೆ, ಸಾಗಾಣಿಕೆ, ಮಾರಾಟ, ಖರೀದಿ ನಡುವೆ ಇರುವ 'ಚೈನ್ ಲಿಂಕ್' ಗಳು ಲಾಕ್‌ಡೌನ್‌ನಿಂದ ಸಂಪೂರ್ಣ ಕಳಚಿರುವ ಹಿನ್ನೆಲೆಯಲ್ಲಿ ಈಗ ಕೈಗೊಂಡಿರುವ ಕ್ರಮಗಳ ಜೊತೆಗೆ, ಕೃಷಿ, ತೋಟಗಾರಿಕೆ ಇಲಾಖೆಗಳು, ಸ್ಥಳೀಯ ಗ್ರಾಮ ಪಂಚಾಯಿತಿಗಳ ಮೂಲಕ ತರಕಾರಿ, ಹಣ್ಣು ಇತ್ಯಾದಿಗಳನ್ನು ರೈತರ ಹೊಲದಲ್ಲಿಯೇ ಖರೀದಿ ಮಾಡಿ, ಸರ್ಕಾರದ ವಿವಿಧ ಇಲಾಖೆ, ಸಂಸ್ಥೆಗಳಲ್ಲಿ ಕೆಲಸವಿಲ್ಲದೆ ಇರುವ ವಾಹನಗಳನ್ನು ಬಳಸಿ ಸ್ಥಳೀಯ ಹಾಗೂ ಹೊರ ರಾಜ್ಯಗಳ ಮಾರುಕಟ್ಟೆಗಳಿಗೆ ಉಚಿತವಾಗಿ ಸಾಗಾಣಿಕೆಯನ್ನು ಮಾಡಲು ಕ್ರಮಗಳನ್ನು ಕೈಗೊಳ್ಳಬೇಕೆಂದು ರೈತ ಸಂಘವು ಆಗ್ರಹಿಸುತ್ತದೆ.

ಇದೇ ರೀತಿಯಲ್ಲಿ ಈಗಾಗಲೇ ಇರುವ ಹಾಪ್‌ಕಾಮ್ಸ್, 'ನಂದಿನಿ' ಹಾಲು ಡೈರಿಗಳ ಜೊತೆಗೆ ಕೆಎಸ್‌ಆರ್‌ಟಿಸಿ, ಬಿಟಿಎಸ್ ಬಸ್‌ಗಳನ್ನು ಉಪಯೋಗಿಸಿ ನಗರಗಳಲ್ಲಿ ಸಂಚಾರಿ ತರಕಾರಿ, ಹಣ್ಣುಗಳ ಮಾರಾಟದ ವ್ಯವಸ್ಥೆಯನ್ನು ಮಾಡಬೇಕೆಂದು ಕೋರುತ್ತೇವೆ.

ಬೆಳೆ ಕಟಾವಿಗೆ – 'ಉದ್ಯೋಗ ಖಾತರಿ ಯೋಜನೆ' ಯನ್ನು ಜೋಡಿಸಲು ಆಗ್ರಹ :–


ಬೆಳೆ ಕಟಾವಿಗೆ ಸಂಬಂಧಿಸಿ ರಾಜ್ಯ ಸರ್ಕಾರ ಮಾಡಿರುವ ನಿರ್ಣಯಗಳ ಜೊತೆಗೆ ಬತ್ತ, ತರಕಾರಿ ಇತ್ಯಾದಿ ಬೆಳೆ ಕಟಾವಿಗೆ ಉದ್ಯೋಗ ಖಾತರಿ ಯೋಜನೆಯನ್ನು ಜೋಡಿಸಲು ಅಗತ್ಯ ತೀರ್ಮಾನಗಳನ್ನು ಸರ್ಕಾರಗಳು ಮಾಡಬೇಕೆಂದು ರೈತ ಸಂಘವೂ ಆಗ್ರಹಿಸುತ್ತದೆ.


ಇದರಿಂದ ಸಂಕಷ್ಟದಲ್ಲಿರುವ ರೈತರು ಮತ್ತು ಕೆಲಸವಿಲ್ಲದೆ ನರಳಾಡುತ್ತಿರುವ ಕೃಷಿ ಕೂಲಿಕಾರರು ಇಬ್ಬರಿಗೂ ಅನುಕೂಲವಾಗಲಿದೆ. ಈ ಗಂಭೀರ ಸ್ಥಿತಿಯಲ್ಲಿಯಾದರೂ ಉದ್ಯೋಗ ಖಾತರಿಯ ಕೂಲಿಯನ್ನು 700–00 ರೂ. ಗಳಿಗೆ ಏರಿಕೆ ಮಾಡಬೇಕೆಂದು ಒತ್ತಾಯಿಸುತ್ತೇವೆ.

ಲಾಕ್ ಡೌನ್ – ಮುನ್ನೆಚ್ಚರಿಕೆಯ ಕ್ರಮಗಳು :–

ಸರ್ಕಾರಗಳ ಕ್ರಮಗಳು ಹಾಗು ಜನರ ಜಾಗ್ರತಿಯಿಂದ ಕೊರೊನಾಗೆ ಸಂಬಂಧಿಸಿದ ಲಾಕ್‌ಡೌನ್ ಆದಷ್ಟು ಬೇಗ ಮುಕ್ತಯವಾಗಬೇಕೆನ್ನುವುದು ನಮ್ಮೆಲ್ಲರ ಆಶಯ. ಆದರೆ ಇದಕ್ಕೆ ವ್ಯತಿರಕ್ತವಾಗಿ ಲಾಕ್‌ಡೌನ್ ಮುಂದುವರಿಯುವ ಸನ್ನಿವೇಶ ಉಂಟಾದರೆ ಇದಕ್ಕೂ ಸರ್ಕಾರ ಈಗಲೇ ಸಿದ್ದತೆ ಮಾಡಿಕೊಳ್ಳುವುದು ಉತ್ತಮ, ವಿಶೇಷವಾಗಿ ಲಾಕ್‌ಡೌನ್‌ನಿಂದ ಉಂಟಾಗಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆ, ಮುಖ್ಯವಾಗಿ ತರಕಾರಿ ಬೆಳೆಯುವುದರ ಬಗ್ಗೆ ರೈತರು ಹಿಂದೆ ಮುಂದೆ ನೋಡುವ ಸ್ಥಿತಿ ಉಂಟಾಗಿದೆ. ಇಂತಹ ಸ್ಥಿತಿಯಿಂದ ತರಕಾರಿ ತೀವ್ರತರ ಅಭಾವ ಉಂಟಾಗಬಹುದು. ಈ ಬಗ್ಗೆಯು ಸರ್ಕಾರಗಳು ಗಂಭೀರವಾಗಿ ಚಿಂತನೆ ಮಾಡಬೇಕೆಂದು ರೈತ ಸಂಘ ವಿನಂತಿಸುತ್ತದೆ.

ಜಿ.ಸಿ.ಬಯ್ಯಾರೆಡ್ಡಿ–ಅಧ್ಯಕ್ಷರು,
ಯು. ಬಸವರಾಜ–ಪ್ರಧಾನ ಕಾರ್ಯದರ್ಶಿ





ಕೊರೊನಾ ಎದುರಿಸಲು ಸೂರ್ಯನ ಬೆಳಕು ಬೇಕು, ಕತ್ತಲೆಯ ದೀಪಗಳಲ್ಲ

ವಿಟಮಿನ್ ಡಿ ನಮ್ಮ ದೇಹದಲ್ಲಿ ನಡೆಯುವ ಹಲವು ಜೈವಿಕ ಪ್ರಕ್ರಿಯೆಗಳಿಗೆ ಗೇರ್ ಇದ್ದಂತೆ; ಈ ಪ್ರಕ್ರಿಯೆಗಳನ್ನು ಸರಿಯಾದ ರೀತಿಯಲ್ಲಿ ಆರಂಭಿಸಿ, ಸರಿಯಾದ ಗತಿಯಲ್ಲಿ ನಡೆಸುವ ಗೇರ್ ಅದು. ಸೂರ್ಯನ ಬೆಳಕು ಈ ಗೇರ್ ಮೇಲಿರುವ ಕೈ; ಸೂರ್ಯನ ಬೆಳಕಿನಿಂದ ನಮ್ಮ ಚರ್ಮದಲ್ಲಿ ವಿಟಮಿನ್ ಡಿ ತಯಾರಾಗುತ್ತದೆ, ಈ ಜೈವಿಕ ಪ್ರಕ್ರಿಯೆಗಳನ್ನು ಸುಸೂತ್ರವಾಗಿ ನಡೆಸುತ್ತದೆ.

ವಿಟಮಿನ್ ಡಿ ಸಾಕಷ್ಟಿದ್ದರೆ ಶ್ವಾಸಾಂಗದ ಜೀವಕಣಗಳು ಆರೋಗ್ಯವಂತವಾಗಿರುತ್ತವೆ, ವೈರಾಣುಗಳನ್ನು ನಾಶ ಪಡಿಸುವ ಕೆಥೆಲಿಸಿಡಿನ್ ಮತ್ತು ಡಿಫೆನ್ಸಿನ್ ನಂತಹ ಸಂಯುಕ್ತಗಳ ಉತ್ಪಾದನೆಯು ಚುರುಕಾಗುತ್ತದೆ, ಮತ್ತು ವಿಪರೀತ ಉರಿಯೂತಕ್ಕೆ, ಹಾಗೂ ಅದರಿಂದ ಶ್ವಾಸಾಂಗ ಮತ್ತಿತರ ಅಂಗಗಳ ಹಾನಿಗೆ, ಕಾರಣವಾಗುವ ಸೈಟೋಕೈನ್ ಸಂಯುಕ್ತಗಳ ಉತ್ಪಾದನೆಯು ನಿಯಂತ್ರಿಸಲ್ಪಡುತ್ತದೆ.

ಆದ್ದರಿಂದ ನಮ್ಮ ದೇಹದಲ್ಲಿ ವಿಟಮಿನ್ ಡಿ ಉತ್ಪಾದನೆ ಹೆಚ್ಚಿಸಿಕೊಳ್ಳಲು ಬೆಳಗ್ಗೆ 11 ರಿಂದ ಅಪರಾಹ್ನ 3 ರ ನಡುವೆ ಒಂದಷ್ಟು ಹೊತ್ತು ಸೂರ್ಯನಿಗೆ ಮೈ ಒಡ್ಡಿದರೆ ಒಳ್ಳೆಯದು. ಮೀನು (ಬೂತಾಯಿ, ಬಂಗುಡೆ), ಮೊಟ್ಟೆ, ಮಾಂಸಗಳಲ್ಲೂ ವಿಟಮಿನ್ ಡಿ ದೊರೆಯುತ್ತದೆ.

– ಡಾ. ಶ್ರೀನಿವಾಸ ಕಕ್ಕಿಲ್ಲಾಯ

ಹಲಸೂರು ಪೊಲೀಸ್ ಇನ್ಸಪೆಕ್ಟರ್ ಶಿವಪ್ರಸಾದ್ ಮೇಲೆ ಕ್ರಮಕ್ಕೆ ಸಿಪಿಐ(ಎಂ) ಆಗ್ರಹ

ಕಾರ್ಮಿಕ ಮುಖಂಡರ ಮೇಲೆ ಪೊಲೀಸ್ ಠಾಣೆಯಲ್ಲಿ ಹಲ್ಲೆ ನಡೆಸಿ ಅನುಚಿತವಾಗಿ ವರ್ತಿಸಿರುವ ಬೆಂಗಳೂರಿನ ಹಲಸೂರು ಠಾಣೆ ಇನ್ಸಪೆಕ್ಟರ್ ಶಿವಪ್ರಸಾದ್ ಮೇಲೆ ಕೂಡಲೆ ಕ್ರಮ ವಹಿಸಬೇಕೆಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಕಾರ್ಮಿಕ ಇಲಾಖೆಯು ಹಮ್ಮಿಕೊಂಡಿರುವ ಕಾರ್ಮಿಕರಿಗೆ ಪರಿಹಾರವನ್ನು ಸಮರ್ಪಕವಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆಯ ಕಾಯದರ್ಶಿಗಳು ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆ ಸಭೆ ನಡೆಸಿ ಬೆಂಗಳೂರಿನ ಡಿಸಿಪಿ ವಲಯವಾರು ಕಾರ್ಮಿಕ ಸಂಘಟನೆಗೆ ಸಂಯೋಜನೆಯ ಜವಾಬ್ದಾರಿ ನೀಡಿ ಸಂಯೋಜಕರನ್ನು ಗುರುತಿಸಲಾಗಿದೆ.

ಅದರಂತೆ 2 ಏಪ್ರಿಲ್ 2020 ರಂದು ವಿವಿಧ ವಲಯದ ಕಾರ್ಮಿಕ ಸಂಘಟನೆಗಳು ಸಂತ್ರಸ್ಥರ ಪಟ್ಟಿ ಮಾಡಿ ಮುಂದಿನ ಕ್ರಮ ಚರ್ಚೆ ಮಾಡಲು ವಲಯವಾರು ಸಭೆ ಕರೆಯಲಾಗಿತ್ತು.

ಪ್ರತಿ ವಲಯದ ಡಿಸಿಪಿ ಮತ್ತು ಬಿಬಿಎಂಪಿ ಜಂಟಿ ಆಯುಕ್ತರ ಜೊತೆಗೆ ಜವಾಬ್ದಾರಿ ನೀಡಲಾಗಿರುವ ಕಾರ್ಮಿಕ ಅಧಿಕಾರಿಗಳನ್ನು ಒಳಗೊಂಡು ಚರ್ಚಿಸಲು ಈ ಸಭೆ ಕರೆಯಲಾಗಿತ್ತು.

ಈ ಪ್ರಯತ್ನದ ಭಾಗವಾಗಿ ಪೂರ್ವ ವಲಯದ ಕಾರ್ಮಿಕ ಕಾರ್ಮಿಕ ಸಂಘಟನೆಗಳ ಸಂಯೋಜಕರಾದ ಎಐಸಿಸಿಟಿಯು ಅಪ್ಪಣ್ಣಜೊತೆ ಸಿಐಟಿಯು ರಾಜ್ಯ ನಾಯಕರಾದ ಹೆಚ್.ಎನ್. ಗೋಪಾಲಗೌಡ, ಎನ್. ಪ್ರತಾಪ್ ಸಿಂಹ ಹಾಗು ಕಾರ್ಮಿಕ ಅಧಿಕಾರಿ, ಹಲಸೂರು ಪೊಲೀಸ್ ಠಾಣೆಗೆ ಬೆಂಗಳೂರು ಪೂರ್ವ ವಲಯ ಡಿಸಿಪಿಯವರ ಸಮಯಾವಕಾಶ ಕೋರಿ ಅವರು ನೀಡಿದ ಸಮಯಕ್ಕೆ ಅವರನ್ನು ಬೇಟಿ ಮಾಡಲು ತೆರಳಿದ್ದರು. ಅಲ್ಲಿಯ ಠಾಣಾಧಿಕಾರಿಗಳಾದ ಶಿವಪ್ರಸಾದ್ ರವರು ಕಾರ್ಮಿಕ ಅಧಿಕಾರಿಗಳನ್ನು ಮಾತನಾಡಲು ಬಿಡದೆ, ಡಿಸಿಪಿಯವರು ಠಾಣೆಗೆ ಬರುವ ಮುನ್ನ ಕಾರ್ಮಿಕ ಸಂಘಟನೆಗಳ ನಾಯಕರ ಜೊತೆ ವಿಪರೀತವಾಗಿ ವರ್ತಿಸಿದ್ದಾರೆ.

ಎರಡೇ ದಿನಗಳ ಹಿಂದೆ ನಗರದ ಪೊಲೀಸ್ ಕಮಿಷನರ್ ರವರ ತಮ್ಮ ಸಿಬ್ಬಂದಿ ಸಾರ್ವಜನಿಕರ ಜೊತೆ ಸೌಜನ್ಯದಿಂದ ವರ್ತಿಸಬೇಕು ಎಂದು ಹದಿನಾಲ್ಕು ಅಂಶಗಳುಳ್ಳ ಆಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಬಿತ್ತರವಾಗಿದೆ.

ಸಾರ್ವಜನಿಕರಿರಲಿ, ಕಾರ್ಮಿಕ ಇಲಾಖೆಯ ಸಹಯೋಗದಲ್ಲಿ ಸರಕಾರದ ಜೊತೆ ಕೆಲಸ ಮಾಡಲು ಮುಂದಾದ ರಾಜ್ಯ ಮಟ್ಟದ ಕಾರ್ಮಿಕ ನಾಯಕರ ಜೊತೆ ಇನ್ಸಪೆಕ್ಟರ್ ಶಿವಪ್ರಸಾದ್ ಹೀನಾಯವಾಗಿ ನಡೆದುಕೊಂಡಿದ್ದಾರೆ. ಇಂತಹ ನಡೆ ಅಕ್ಷಮ್ಯ ಎಂದು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಖಂಡಿಸುತ್ತದೆ.ಇವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇವೆ.

ಕೆ. ಎನ್. ಉಮೇಶ್
ಜಿಲ್ಲಾ ಕಾರ್ಯದರ್ಶಿ

ಕೊಲ್ಲೂರು: ಅವಶ್ಯಕ ವಸ್ತುಗಳ ಖರೀದಿಗೆ ಪರದಾಟ ಜಿಲ್ಲಾಧಿಕಾರಿಗೆ ಮನವಿ

ಉಡುಪಿ ಜಿಲ್ಲೆ, ಬೈಂದೂರು ತಾಲೂಕು ಪ್ರಸಿದ್ಧ ತೀರ್ಥಕ್ಷೇತ್ರ ಕೊಲ್ಲೂರಿನಲ್ಲಿ ಲಾಕ್ ಡೌನ್ ವಿಧಿಸಿರುವ ಹಿನ್ನೆಲೆಯಲ್ಲಿ ಕಟ್ಟಡ ಕಾರ್ಮಿಕರು ಮತ್ತು ಬಡ ಕೃಷಿಕೂಲಿಕಾರರಿಗೆ ದಿನ ಬಳಕೆ ಅಹಾರ ವಸ್ತುಗಳು, ತರಕಾರಿ ಸರಬರಾಜಿನಲ್ಲಿ ವ್ಯೆಪಲ್ಯ ಎದ್ದು ಕಾಣುತ್ತಿದೆ. ಇದು ಜನ ಸಾಮಾನ್ಯರಲ್ಲಿ ಹತಾಶೆಗೆ ಕಾರಣವಾಗಿದೆ. ಲಾಕ್ ಡೌನ್ ನಿಂದಾಗಿ ಕೊಲ್ಲೂರಿನಲ್ಲಿ ಹೆಚ್ಚು ತೊಂದರೆಗೆ ಸಿಲುಕಿರುವುದು ಕಟ್ಟಡ ಮತ್ತು ಬಡ ಕೃಷಿ ಕೂಲಿ ಕಾರ್ಮಿಕರು. ಕೆಲವು ವ್ಯಾಪಾರಿಗಳು ಶಿವಮೊಗ್ಗ, ಸಾಲಿಗ್ರಾಮ ಮೊದಲಾದ ಕಡೆಗಳಿಂದ ಸರಕು ಸಾಗಾಟ ವಾಹನಗಳಲ್ಲಿ ತರಕಾರಿ ತಂದು ಮಾರಾಟ ಮಾಡಲು ಬರುವ ವಾಹನಗಳನ್ನು ತಡೆದ ಕಾರಣ ಈ ರೀತಿಯ ಸಮಸ್ಯೆಯಾಗಿದೆ.

ತರಕಾರಿ, ಹಣ್ಣು ದಿನಸಿ ಅಂಗಡಿಗಳು ತೆರೆದಿದ್ದರೆ ಸಮಸ್ಯೆ ಬಗೆ ಹರಿಸಬಹುದು. ಗ್ರಾಮಾಂತರ ಪ್ರದೇಶದವರಿಗೆ ನಗರ ಪ್ರದೇಶದಿಂದ ಅಹಾರ ಸಾಮಾಗ್ರಿಗಳನ್ನು ಕೊಂಡೊಯ್ಯುವುದು ಅತ್ಯಂತ ದುಸ್ತರವಾಗಿದೆ. ತರಕಾರಿ ಅಹಾರ ಸಾಮಾಗ್ರಿ ಖರೀದಿಗೆ ದರದಲ್ಲಿ ದುಪ್ಪಟ್ಟಾಗಿದೆ. ಎಲ್ಲಾ ಕಡೆ ಸುಲಿಗೆ ಮಾಡುತ್ತಿದ್ದಾರೆ. ಎಲ್ಲಾ ದಿನಸಿ ಅಂಗಡಿ, ತರಕಾರಿ, ಹಣ್ಣಿನ ಅಂಗಡಿಗಳು ಪ್ರತಿದಿನ 6 ಗಂಟೆಗಳ ಕಾಲ ತೆರೆದಿಡಬೇಕು ಎಂದು ಒತ್ತಾಯಿಸಿ, ಉಡುಪಿ ಜಿಲ್ಲಾಧಿಕಾರಿಗೆ ಮನವಿ ಮಾಡಲಾಗಿದೆ.

ವರದಿ: ವೆಂಕಟೇಶ ಕೋಣಿ

ಕರ್ನಾಟಕ ಲಾಕ್ ಡೌನ್ ಆತಂಕಗಳ ನಿವಾರಣೆಗೆ... ಪುಟ 3 ರಿಂದ

ಡೌನ್ ಅವಧಿಯಲ್ಲಿ ನಿರುದ್ಯೋಗಿಗಳಾಗಿದ್ದು ಈ ಎಲ್ಲರನ್ನು ಗುರುತಿಸಿ ಪ್ರತಿ ದಿನ ತಲಾ 500 ರೂಗಳಂತೆ ನಿರುದ್ಯೋಗ ಭತ್ಯೆ ನೀಡಬೇಕು. ಈ ಎಲ್ಲಾ ಕುಟುಂಬಗಳಿಗೆ ಕೇರಳ ಸರಕಾರದ ಮಾದರಿಯಲ್ಲಿ ಕನಿಷ್ಠ ಮೂರು ತಿಂಗಳಿಗಾಗುವಷ್ಟು ಸಮಗ್ರ ಪಡಿತರವನ್ನು ಮನೆ ಮನೆಗೆ ಒದಗಿಸಬೇಕು. ಅದೇ ರೀತಿ, ಆರೋಗ್ಯ ಸುರಕ್ಷಾ ಕ್ರಮಗಳನ್ನು ಒದಗಿಸಬೇಕು. ಎಲ್ಲಾ ಬಿಪಿಎಲ್ ಕುಟುಂಬಗಳ ಜನಾಧನ ಖಾತೆಗೆ ತಕ್ಷಣ 5,000 ರೂಗಳು ಜಮಾ ಮಾಡಬೇಕು.

6) ರೈತರ ಕೃಷಿ ಉತ್ಪನ್ನಗಳ ಮಾರಾಟವು ಲಾಕ್ ಡೌನ್ ಕಾರಣದಿಂದ ಸಂಕಷ್ಟಕ್ಕೊಳಗಾಗಿದೆ. ಚಿಕ್ಕ ಬಳ್ಳಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ರಕ್ಷಣೆಗೆ ತುರ್ತುಕ್ರಮಗಳಾಗಬೇಕು. ಅದೇ ರೀತಿ ಇತರೇ ಕೃಷಿ ಉತ್ಪನ್ನಗಳ ಖರೀದಿಗೆ ರಾಜ್ಯ ಸರಕಾರದ ಖರೀದಿ ಏಜೆನ್ಸಿಗಳ ಮೂಲಕ ಖರೀದಿಗೆ ಮತ್ತು ಮಾರಾಟಕ್ಕೆ ಹಾಗೂ ಸಾಗಾಟದ ಸಾರಿಗೆಗೆ ತಕ್ಷಣ ಕ್ರಮವಹಿಸಬೇಕು.

ಮಾರಾಟದ ಹಾಗೂ ಸುಗ್ಗಿ ಕೃಷಿ ಕೆಲಸದಲ್ಲಿ ತೊಡಗುವ, ಹಮಾಲರು, ಕೃಷಿಕೂಲಿಕಾರರು, ಬಡ ರೈತರುಗಳಿಗೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಒದಗಿಸಬೇಕು.

7) ರಾಜ್ಯದ ಕೆಲವೆಡೆ ಆರೋಗ್ಯ ಕಾರ್ಯಕರ್ತರಿಗೆ ಭೀತಿಗೊಂಡ ಜನತೆ ಅವರು ವಾಸ ಸ್ಥಳಕ್ಕೆ ಬರದಂತೆ ಕಿರುಕುಳ ಹಾಗೂ ತೊಂದರೆ ನೀಡುತ್ತಿರುವರೆನ್ನಲಾಗಿದೆ. ಅಂತಹ ತೊಂದರೆ ನಿವಾರಣೆಗೆ ಅಗತ್ಯ ಕ್ರಮವಹಿಸಬೇಕು ಮತ್ತು ಜನಗಳ ಆತಂಕದ ನಿವಾರಣೆಗೆ ಅಗತ್ಯ ಕ್ರಮವಹಿಸಬೇಕು.

8) ಪ್ರಮುಖ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಅಥವಾ ಕೊನೆಯ ಪಕ್ಷ ರಾಷ್ಟ್ರೀಯ ರಾಜಕೀಯ ಪಕ್ಷಗಳ ಕಾರ್ಯಕರ್ತರು ಪರಿಹಾರ ಕಾರ್ಯದಲ್ಲಿ ತೊಡಗಲು ಕನಿಷ್ಠ ತಾಲೂಕಿಗೊಬ್ಬ ಕಾರ್ಯಕರ್ತನಿಗೆ ಅನುಮತಿ ನೀಡಿ, ಪಾಸ್ ಒದಗಿಸಬೇಕು.

9) ಕೆಲವೆಡೆ ಪೊಲೀಸರ ಅತಿರೇಕದ ಕ್ರಮಗಳು ಕಂಡು ಬಂದಿದ್ದು ಅವುಗಳನ್ನು ತಡೆಯಬೇಕು.

ಯು. ಬಸವರಾಜ
ಕಾರ್ಯದರ್ಶಿ



ಕೋವಿಡ್–19 : ಬದಲಾಗಬೇಕಾದ ಸರಕಾರದ ದೃಷ್ಠಿ

ಡಾ. ಎ. ಅನಿಲ್ ಕುಮಾರ್
ಎಂ.ಬಿ.ಬಿಎಸ್, ಡಿ.ಎನ್.ಬಿ (ಜಿ.ಎಸ್)

31 ಡಿಸೆಂಬರ್ 2019 ರಂದು ಚೈನಾ ದೇಶದ ವುಹಾನ್ ಪ್ರಾಂತದಲ್ಲಿ ಮನುಷ್ಯರಿಗೆ ಈ ಕರೋನ ವೈರಾಣುವಿನ ಸೋಂಕು ತಗುಲಿತು. ನಂತರ ಮನುಷ್ಯರಿಂದ ಮನುಷ್ಯರಿಗೆ ಹರಡಿ ಈಗ ವಿಶ್ವಾದ್ಯಂತ ಸಂಕ್ರಮಿಸಿ ತಲ್ಲಣ ಸೃಷ್ಟಿಸಿದೆ. ಈ ರೋಗಾಣುವಿಂದ ಸೋಂಕಿತಗೊಂಡವರಲ್ಲಿ ಗಂಟಲು ನೋವು, ಜ್ವರ, ಕೆಮ್ಮು, ನೆಗಡಿ, ಘ್ರಾಣ ಹೀನತೆ, ತಲೆನೋವು, ಮೈ ಕೈಕಾಲು ನೋವು ಇತ್ಯಾದಿ ಲಕ್ಷಣಗಳು ಇರುತ್ತವೆ. ಈ ಲಕ್ಷಣಗಳು ಸಾಮಾನ್ಯ ಲಕ್ಷಣಗಳು. ಹಾಗಾಗಿ ಇವು ಈ ವೈರಾಣುವಿನ ಸೋಂಕಿತರಿಗೇ ಬರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಅಂದರೆ ವೈದ್ಯರು ಸಾಮಾನ್ಯ ತಪಾಸಣೆಯನ್ನು ಮಾಡಿ ಈ ರೋಗವನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಇದನ್ನು ಕಂಡುಕೊಳ್ಳಬೇಕೆಂದರೆ ಉನ್ನತ ಪ್ರಯೋಗಾಲಯದಲ್ಲಿ ಪರೀಕ್ಷೆಯನ್ನು ಮಾಡಿದಾಗ ಮಾತ್ರ ಸಾಧ್ಯ. ಆದರೆ ಈ ಪರೀಕ್ಷೆಗೆ ಬೇಕಾಗಿರುವ ಸಲಕರಣೆಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯ ಇಲ್ಲ. ಅಲ್ಲದೆ ವಿಶ್ವಾದ್ಯಂತ ಇದು ಹರಡಿರುವುದರಿಂದ ಬೇರೆ ದೇಶಗಳಿಂದ ಈ ಪರೀಕ್ಷೆಯ ಕಿಟ್‌ಗಳನ್ನು ಆಮದು ಮಾಡಲೂ ಸಾಧ್ಯವಿಲ್ಲ. ಆದ್ದರಿಂದ ಸೋಂಕಿತರೆಲ್ಲರನ್ನೂ ಕಂಡು ಹಿಡಿಯಲು ಕಷ್ಟವಿದೆ. ಇಂತಹ ಸಂದರ್ಭದಲ್ಲಿ ವೈದ್ಯಕೀಯ ವಿಜ್ಞಾನ ಮತ್ತು ಶಿಕ್ಷಣದ ಅಡಿಯಲ್ಲಿ ಯೋಚಿಸಿದರೆ ನಾವು ಮೇಲೆ ಸೂಚಿಸಿರುವ ಲಕ್ಷಣಗಳುಳ್ಳ ಎಲ್ಲಾ ಜನರನ್ನು ಕೋವಿಡ್–19ರ ಸೋಂಕಿತರೆಂದು ಭಾವಿಸಿ ಅವರಿಗೆ ಚಿಕಿತ್ಸೆ ಕೊಡಬೇಕಾಗುತ್ತದೆ. ಬಹು ಮುಖ್ಯ ಅಂಶವೆಂದರೆ ಆ ಎಲ್ಲಾ ರೋಗಿಗಳನ್ನು ಪ್ರತ್ಯೇಕಿಸಿ ಅವರನ್ನು ಐಸೋಲೇಷನ್ ಸೆಂಟರ್‌ಗಳಲ್ಲಿಟ್ಟು ಚಿಕಿತ್ಸೆಯನ್ನು ಕೊಡಬೇಕಾಗುತ್ತದೆ.

ಆದರೆ ನಮ್ಮ ಸರ್ಕಾರ ಪೂರ್ವಭಾವಿಯಾಗಿ ಯಾವುದೇ ಸಿದ್ಧತೆಗಳನ್ನು ಮಾಡುವ ಬದಲು ದೇಶದ ಜನರನ್ನೆಲ್ಲಾ ಗೃಹ ದಿಗ್ಬಂಧನದಲ್ಲಿಟ್ಟಿದೆ. ಹಾಗೂ ದೇಶವನ್ನು ಸ್ಥಗಿತಗೊಳಿಸಿದೆ. ಈ ಪಿಡುಗಿನ ಸುಳಿವು ಸಿಕ್ಕ ಬಳಿಕ ನಮಗೆ ದೊರೆತಿದ್ದ ಅಮೂಲ್ಯ ಸಮಯಾವಕಾಶವೂ ಜಾರಿ ಹೋಗಿದೆ. ಇದು ಒಂದು ದುರಂತ. ಈ ರೀತಿಯಾದ ಲಾಕ್‌ಡೌನ್ ದೇಶದ ಆರ್ಥಿಕತೆ ಮೇಲೆ ತೀವ್ರ ದುಷ್ಪರಿಣಾಮ ಬೀರಿ ರೈತರು, ಸಣ್ಣವ್ಯಾಪಾರಿಗಳು. ಕೂಲಿಕಾರ್ಮಿಕರು, ಕಾರ್ಮಿಕರು, ಸಣ್ಣ ಉದ್ಯಮಿಗಳು ದಿವಾಳಿಯಾಗಿವ ಸಂಭವ ಇದೆ. ಇಷ್ಟಕ್ಕೂ ಈ ಕೋವಿಡ್–19 ಅಂತಹ ಅತೀ ಆತಂಕಕಾರಿ ವೈರಾಣು ವೇನಲ್ಲ. ಏಕೆಂದರೆ ಇದರ ಸೋಂಕು ತಗುಲಿರುವವರಲ್ಲಿ ಶೇ.80% ರಷ್ಟು ಸ್ವಯಂ ನಿವಾರಣೆಗೊಳ್ಳುವರು. ಅಂದರೆ ಅವರಿಗೆ ಯಾವುದೇ ಚಿಕಿತ್ಸೆ ಬೇಕಾಗಿರುವುದಿಲ್ಲ, ದೇಹದಲ್ಲಿನ ಪ್ರತಿರೋಧದ ಶಕ್ತಿಯೇ ಸಾಕಾಗುತ್ತದೆ. ಇನ್ನುಳಿದ ಶೇ.15ರಷ್ಟು ಜನರಿಗೆ ಲಘು ಪ್ರಮಾಣದಲ್ಲಿ ರೋಗ ಲಕ್ಷಣಗಳು ಇರುವುದರಿಂದ ಅವರಿಗೆ ಸಹಾಯಕಾರಿ ಚಿಕಿತ್ಸೆ ಕೊಟ್ಟರೆ ಸಾಕು. ಇನ್ನುಳಿದ ಶೇ.5% ರಷ್ಟು ಜನರಿಗೆ ಆಸ್ಪತ್ರೆ ಬೇಕಾಗುವುದು. ಅದರಲ್ಲಿ ಶೇ.2–3ರಷ್ಟು ಜನರು ಸಾವನ್ನಪ್ಪುವ ಸಂಭವವೇ ಹೆಚ್ಚು. ನಾವು ರೋಗ ಲಕ್ಷಣಗಳುಳ್ಳವರನ್ನು ಪ್ರತ್ಯೇಕಿಸಿ, ಅವರಿಗೆ ಚಿಕಿತ್ಸೆ ನೀಡಿ ಆರೈಕೆ ಮಾಡಿದರೆ ಆಸ್ಪತ್ರೆಗೆ ಸೇರಬೇಕಾದವರ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಆದರೆ ಈ ವೈರಸ್ 65 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಿಗೆ, ವೃದ್ಧರಿಗೆ ಅಪಾಯಕಾರಿ. ಆದ್ದರಿಂದ, ನಮ್ಮ ವೃದ್ದರನ್ನು ಪ್ರತ್ಯೇಕಿಸಿ ಆರೈಕೆಯನ್ನು ನೀಡಿದರೆ ಸಾಕು.

ಇಷ್ಟಕ್ಕೂ, ಇದೇ ಮೊದಲ ಬಾರಿ ಈ ರೀತಿಯಾದ ಸಾಂಕ್ರಾಮಿಕ ರೋಗವನ್ನು ದೇಶ ಕಂಡಿದ್ದೇನಲ್ಲ, ಇದಕ್ಕೂ ಮುನ್ನ 1918ರಲ್ಲಿ ವಿಶ್ವಕ್ಕೆ ಇದೇ ರೀತಿಯ ಸೋಂಕು ವೈರಾಣು ತಗುಲಿತ್ತು. ಹಾಗೂ ಅಂದು ವಿಶ್ವದಾದ್ಯಂತ ಸುಮಾರು 5 ರಿಂದ 7 ಕೋಟಿ ಜನರು ಸಾವನ್ನಪ್ಪಿದರೆಂದು ವರದಿಗಳಿವೆ. 1918ಕ್ಕೂ ಮುಂಚೆ ಪ್ಲೇಗ್–ಕಾಲರಾ, ಸಿಡುಬುರೋಗ ಇತ್ಯಾದಿ ಸಾಂಕ್ರಾಮಿಕ ರೋಗಗಳು ವಿಶ್ವಾದ್ಯಾಂತ ಬಹುತೇಕ ದೇಶಗಳಲ್ಲಿ ಹರಡಿತ್ತು. ಕೋಟ್ಯಾಂತರ ಜನರನ್ನು ಬಲಿ ತೆಗೆದುಕೊಂಡಿತ್ತು. ಇಂತಹವೆಲ್ಲಾ ಘಟಿಸಿದಾಗ ವಿಶ್ವದ ಬಹುತೇಕ ದೇಶದ ನಾಯಕರುಗಳು, ವೈದ್ಯರು ಹಾಗೂ ವಿಜ್ಞಾನಿಗಳು 1858 ರಿಂದ 1938ರ ವರೆಗೆ 14 ಸಮ್ಮೇಳನಗಳನ್ನು ಸೇರಿದ್ದಾರೆ. ಈ ಸಮ್ಮೇಳನಗಳಲ್ಲಿ ಇಂತಹ ಸಾಂಕ್ರಾಮಿಕ ರೋಗಗಳು ಒಂದು ದೇಶದಲ್ಲಿ ಕಂಡಾಗ ಬೇರೆ ದೇಶಗಳಿಗೆ ಹರಡದಂತೆ ಏನ್ನೆಲ್ಲಾ ನಿಯಮಗಳನ್ನು ಪಾಲಿಸಬೇಕೆಂದು ಚರ್ಚಿಸಿ ಮೊದಲಿಗೆ 1892ರಲ್ಲಿ ಮೊದಲನೆಯ ಆಂತರಾಷ್ಟ್ರೀಯ ನೈರ್ಮಲ್ಯ ಸಮಾವೇಶದಲ್ಲಿ ನಿಯಮಗಳನ್ನು ತೀರ್ಮಾನಿಸಿದ್ದಾರೆ. ನಂತರ 1948ರಲ್ಲಿ ಈ ಜವಾಬ್ದಾರಿಯನ್ನು 'ವಿಶ್ವ ಆರೋಗ್ಯ ಸಂಸ್ಥೆ'ಗೆ ರವಾನಿಸುತ್ತಾರೆ. 1969ರಲ್ಲಿ ಈ ನಿಯಮಗಳನ್ನು ನವೀಕರಿಸಿ ಅಂತರಾಷ್ಟ್ರೀಯ ಆರೋಗ್ಯ ನಿಯಮಗಳೆಂದು ಪ್ರಕಟಿಸಲ್ಪಟ್ಟಿದೆ. ನಂತರ 2005ರಲ್ಲಿ ಪುನಃ ನವೀಕರಣಗೊಂಡು ಇಂದು ವಿಶ್ವದ ಎಲ್ಲಾ ದೇಶಗಳ ಮೇಲೆ ಈ ನಿಯಮಗಳ ನಿರ್ಭಂಧನ ಇದೆ.

ಈ ನಿಯಮಗಳಲ್ಲಿ ಇಂತಹ ಸಾಂಕ್ರಾಮಿಕ ರೋಗಗಳು ಒಂದು ದೇಶದಲ್ಲಿ ಕಂಡಾಗ ಬೇರೆ ಎಲ್ಲಾ ದೇಶಗಳು ತಮ್ಮ ತಮ್ಮ ದೇಶಗಳಲ್ಲಿ ಈ ಸೋಂಕು ಹರಡುವುದನ್ನು ತಡೆಯಲು ಮೊದಲಿಗೆ ವಿದೇಶಗಳಿಂದ ತಮ್ಮ ದೇಶಗಳಿಗೆ ಬರುವವರನ್ನು ದೇಶದ ವಿಮಾನ, ಆಶ್ರಯ, ಹಡಗು ಬಂದರು ಹಾಗೂ ರಸ್ತೆಯ ಗಡಿಯಲ್ಲಿಯೇ ದಿಗ್ಬಂದಿಸಿ ಅವರನ್ನು ನಿರ್ಧಿಷ್ಟವಾಗಿ ಪರೀಕ್ಷಿಸಿ, ಅಗತ್ಯವಿರುವಷ್ಟು ದಿವಸ ಹಾಗೆಯೆ ದಿಗ್ಬಂಧನದಲ್ಲಿಟ್ಟು ಅವರು ಸೋಂಕಿನಿಂದ ಮುಕ್ತರಾಗಿದ್ದಾರೆಂದು ದೃಢಪಟ್ಟ ಮೇಲೆಯೇ ದೇಶದ ಒಳಗೆ ಬಿಡಬೇಕಾಗಿದೆ. ಆದರೆ ಈ ಕೋವಿಡ್–19 ಸೋಂಕು ಚೀನಾ ದೇಶದಲ್ಲಿ ಬಂದೊಡನೆ, ಭಾರತ ದೇಶವನ್ನು ಒಳಗೊಂಡಂತೆ ಅನೇಕ ದೇಶಗಳು ಈ ನಿಯಮಗಳನ್ನು ಉಲ್ಲಂಘಿಸಿದರ ಪರಿಣಾಮ ಅದೀಗ ಎಲ್ಲಾ ದೇಶಗಳಲ್ಲಿ ಹರಡಿದೆ. ಆದರೆ ಅತೀ ಹೆಚ್ಚು ಜನಸಾಂದ್ರತೆ ಇರುವ ಚೀನಾದಲ್ಲಿ ಬಿಗಿ ಕ್ರಮಗಳಿಂದ ಈ ಸೋಂಕು ಕೇವಲ ಮೂರು ಪ್ರಾಂತ್ಯಗಳಿಗೇ ಸೀಮಿತವಾದುದನ್ನು ಗಮನಿಸಬೇಕು. ಕೋರಿಯಾ, ಕ್ಯೂಬಾ ದೇಶಗಳು ಅನುಸರಿಸಿದ ಕ್ರಮಗಳು ಮತ್ತು ಆರೋಗ್ಯ ವ್ಯವಸ್ಥೆ ಅಧ್ಯಯನ ಯೋಗ್ಯ.

1918ರ ಸಾಂಕ್ರಾಮಿಕ ರೋಗದ ನಂತರ, ನಾವು ಕಲಿತ ಬಹು ಮುಖ್ಯ ಪಾಠವೇನೆಂದರೆ ಮೊದಲಿಗೆ ಆಳುವವರು ಸತ್ಯವನ್ನು ದೇಶದ ಜನರ ಎದುರು ತೆರೆದಿಡಬೇಕು, ಹೇಳಬೇಕು ಎಂಬುದು. ಕೇವಲ ಈ ರೀತಿಯ ಗೃಹ ದಿಗ್ಬಂಧನ (ಐಂಥಿಇಜಂತಿಟ) ಹಾಗೂ ಸಾಮಾಜಿಕ ಅಂತರ (ಖಂಛಿಚಿಟ ಆಿಣಚಿಟಿಛಿಜ) ಗಳಿಂದ ಮಾತ್ರ ಈ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು ಅಸಾಧ್ಯ. ಬದಲಿಗೆ ಸೋಂಕನ್ನು ತಡೆಗಟ್ಟಲು ಸುಭದ್ರವಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ವೈರಾಣುವನ್ನು ನಿಯಂತ್ರಿಸಲು ಔಷಧಿಗಳು, ಚುಚ್ಚುಮದ್ದು, ಜನರ ಪೌಷ್ಠಿಕತೆ, ರೋಗ ನಿರೋಧಕ ಶಕ್ತಿ, ಜನರು ವಾಸಸ್ಥಳದ ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಆಹಾರ, ಶುದ್ಧ ಗಾಳಿ, ಕೈಕಾಲುಗಳನ್ನು ಶುದ್ಧವಾಗಿ ತೊಳೆಯುವುದು ಇವೆಲ್ಲವು ಬೇಕಾಗುತ್ತದೆ.

ಆದ್ದರಿಂದ ಈಗಲಾದರೂ ವಿಳಂಬಿಸದೇ ನಮ್ಮ ಸರ್ಕಾರಗಳು ಪ್ರತಿ ಹಳ್ಳಿಗಳಲ್ಲಿ ಐಸೋಲೇಶನ್ ಸೆಂಟರ್‌ಗಳನ್ನು ಸಿದ್ಧಗೊಳಿಸಬೇಕು. ಅದಕ್ಕಾಗಿ ಸಮುದಾಯ ಭವನಗಳನ್ನೋ, ಶಾಲೆಗಳನ್ನೋ, ಅಕ್ಷರ ದಾಸೋಹದ ಕೇಂದ್ರಗಳನ್ನೋ ಬಳಸಬಹುದು. ಜನರನ್ನು ಜಾಗೃತಗೊಳಿಸಿದರೆ ಸ್ವಯಂ ಸೇವಕ ತಂಡಗಳೂ ಸಿದ್ಧಗೊಳ್ಳಬಹುದು. ಯಾರಿಗೆ ಈ ರೋಗ ಲಕ್ಷಣಗಳಿರುತ್ತಯೋ ಅವರನ್ನು ಅಲ್ಲಿಯೇ ಪ್ರತ್ಯೇಕಿಸಿ ಚಿಕಿತ್ಸೆ ಹಾಗೂ ಆರೈಕೆಯನ್ನು ಮಾಡಬೇಕು. ನಂತರ ಅವರಲ್ಲಿ ಯಾರು ಚಿಕಿತ್ಸೆಗೆ ಸ್ಪಂದಿಸುವುದಿಲ್ಲವೊ ಅಂತಹವರನ್ನು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಕೇಂದ್ರದ ಆಸ್ಪತ್ರೆಗಳಿಗೆ ದಾಖಲು ಮಾಡಿ ಚಿಕಿತ್ಸೆಯನ್ನು ಕೊಡಬಹುದು. ಪ್ರತಿ ಹಳ್ಳಿಯಲ್ಲಿ ಇದನ್ನು ಮಾಡುವುದು ಕಷ್ಟವೇನಲ್ಲ. ಏಕೆಂದರೆ, ನಮ್ಮ ದೇಶದಲ್ಲಿ ಸುಮಾರು 6,50,000 (ಆರು ಲಕ್ಷ ಐವತ್ತು ಸಾವಿರ) ಹಳ್ಳಿಗಳಿವೆ. ಒಬ್ಬ ವೈದ್ಯ 3 ರಿಂದ 4 ಇಂತಹ ಕೇಂದ್ರಗಳಿಗೆ ಭೇಟಿ ಕೊಟ್ಟು ರೋಗಿಗಳನ್ನು ತಪಾಸಣೆ ಮಾಡಬಹುದು ಹಾಗೂ ವೈದ್ಯರು ತಮಗೆ ಈ ಸೋಂಕು ಹರಡದಂತೆ ಎಲ್ಲಾ ಜಾಗ್ರತೆಗಳನ್ನು ಪಾಲಿಸಬಹುದು. ಅಂದರೆ ಸುಮಾರು 1,60,000 ವೈದ್ಯರು ಬೇಕಾಗುತ್ತಾರೆ. ಇಂದು ಭಾರತದಲ್ಲಿ ಸುಮಾರು 8 ಲಕ್ಷಕ್ಕೂ ಹೆಚ್ಚು ವೈದ್ಯರಿದ್ದಾರೆ. ಹಾಗಾಗಿ ಇದನ್ನು ಯಶಸ್ವಿಯಾಗಿ ಜಾರಿ ಮಾಡಬಹುದು ಹಾಗೂ ಈ ಸೋಂಕನ್ನು ತಡೆಗಟ್ಟಬಹುದು. ಇದರಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೂ ಪರಿಷ್ಕೃತಗೊಳ್ಳಬಹುದು. ಮುಖ್ಯ ಪ್ರಶ್ನೆ ನಾವು ನಮ್ಮ ವೃದ್ಧರನ್ನು ರಕ್ಷಿಸದೆ, ಲಕ್ಷಣಗಳುಳ್ಳ ಸೋಂಕಿತರನ್ನು ಪ್ರತ್ಯೇಕಿಸಿ ಚಿಕಿತ್ಸೆಯನ್ನು ಹಾಗೂ ಆರೈಕೆಯನ್ನು ಮಾಡದೇ ಕೇವಲ ಈ ಗೃಹ ದಿಗ್ಬಂಧನದಿಂದ, ಸಾಮಾಜಿಕ ಅಂತರದಿಂದ ಮತ್ತು ಲಾಕ್‌ಡೌನ್ ನಿಂದ ಮಾತ್ರವೇ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಸಾಧ್ಯವಿಲ್ಲ.

ಭಾರತ ದೇಶದಲ್ಲಿ ಗೃಹ ದಿಗ್ಬಂಧನದ ಪ್ರಕಾರ ಒಬ್ಬರಿಂದ ಮತ್ತೊಬ್ಬರು ಕನಿಷ್ಠ ಒಂದು ಮೀಟರ್ ಅಂತರವನ್ನು ಕಾಪಾಡಿಕೊಳ್ಳಬೇಕೆಂದಿದೆ. ಇದು ನಮ್ಮಲ್ಲಿ ಸಾಧ್ಯವೆ? ಇಲ್ಲ. ಇನ್ನೋದು ಅರ್ಥದಲ್ಲಿ ಇದು ಬಡವರನ್ನು ದಂಡಿಸುವ, ಅವಮಾನಿಸುವ ಒಂದು ಕ್ರಮ. ಏಕೆಂದರೆ, ನಮ್ಮ ದೇಶದಲ್ಲಿ ಶೇ.30% ರಷ್ಟು ಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಸುಮಾರು 18 ಲಕ್ಷಕ್ಕೂ ಹೆಚ್ಚು ಜನರು ವಸತಿ ಹೀನರಿದ್ದಾರೆ. ಅಂದರೆ ಅವರಿಗೆ ಮನೆಯೇ ಇಲ್ಲ. ಒಂದು ಕುಟುಂಬದ ಸರಾಸರಿ ಮನೆಯ ಅಳತೆ ಕೇವಲ 422 ಚದರ ಅಡಿಗಳು. ಒಬ್ಬ ವ್ಯಕ್ತಿಯ ಸರಾಸರಿ ವಾಸಸ್ಥಳ ಕೇವಲ 110 ಚದರ ಅಡಿಗಳು. ಸುಮಾರು ಶೇ.50% ರಷ್ಟು ಕುಟುಂಬಗಳು ಒಂದು ರೂಂ ಅಥವಾ ರೂಂ ಇಲ್ಲದ ಮನೆಗಳಲ್ಲಿ ವಾಸವಿದ್ದಾರೆ. ಸುಮಾರು ಶೇ.75% ರಷ್ಟು ಕುಟುಂಬಗಳು ಎರಡು ರೂಂ ಅಥವಾ ಅದಕ್ಕಿಂತ ಕಡಿಮೆ ಇರುವ ಮನೆಗಳಲ್ಲಿದ್ದಾರೆ. ಹಾಗಾಗಿ ಈ ಒಂದು ಮೀಟರ್ ದೂರವನ್ನು ಪಾಲಿಸುವುದು, ಮನೆಯಲ್ಲಿ ಪ್ರತ್ಯೇಕ ಕೊಠಡಿ, ಪ್ರತ್ಯೇಕ ಸ್ನಾನ ಗೃಹ ಹಾಗೂ ಶೌಚಾಲಯ ಇವೆಲ್ಲವನ್ನು ಪಾಲಿಸಲು ನಿರ್ಭಂಧನ ಹೇರುವುದು ಜಾರಿಯ ದೃಷ್ಟಿಯಿಂದಲೂ ಅವಾಸ್ತವಿಕ, ಅಮಾನವೀಯ ಹಾಗೂ ಹಾಸ್ಯಾಸ್ಪದ. ಹೀಗೆ ಬಹುತೇಕ ಕಡೆಗಳಲ್ಲಿ ಅವಾಸ್ತವಿಕ, ಅವೈಜ್ಞಾನಿಕ ಹಾಗೂ ಪಾಲಿಸಲಾಗದ ನಿರ್ಭಂಧಗಳನ್ನು ಹೇರುವುದರ ಮೂಲಕ ಈ ಸಾಂಕ್ರಾಮಿಕ ರೋಗವು ನಮ್ಮ ದೇಶದಲ್ಲಿ ಉಲ್ಬಣವಾಗಲು ಕಾರಣ ಜನರೇ ಎಂದು ದೂಷಿಸಿ ಸರ್ಕಾರಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿವೆ.

ಆದ್ದರಿಂದ ಸರಕಾರ ವಾಸ್ತವಿಕವಾದ ನೀತಿಯೊಂದನ್ನು ಅಳವಡಿಸಿಕೊಂಡು, ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಈ ಪಿಡುಗನ್ನು ಎದುರಿಸಬೇಕು. ಇದಕ್ಕೆ ಬೇಕಾಗಿರುವುದು ಪ್ರಬಲ ರಾಜಕೀಯ, ಆಡಳಿತಾತ್ಮಕ ಇಚ್ಛಾ ಶಕ್ತಿ. ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಸದ್ಬಳಕೆ. ●



ತಬ್ಲೀಗ್ ಜಮಾತ್ ನಡೆಸಿದ ಶತಮೂರ್ಖತನವನ್ನು ಇಡೀ ಭಾರತೀಯ ಮುಸಲ್ಮಾನರ ತಲೆಗೆ ಏಕೆ ಕಟ್ಟುತ್ತೀರಿ?

ನಾನು ಕಂಡಂತೆ ತಬ್ಲೀಗ್ ಜಮಾತ್ ಮುಸ್ಲಿಮೇತರರೊಂದಿಗೆ ಬೆರೆಯುವುದೇ ಇಲ್ಲ. ಮುಸ್ಲಿಮರನ್ನಷ್ಟೇ "ಶುದ್ಧ" ಮುಸ್ಲಿಮರನ್ನಾಗಿಸುವ ಉದ್ದೇಶ ಹೊಂದಿದವರು. ಇತರ ಧರ್ಮದವರಿಗೆ ಇಸ್ಲಾಂ ಪರಿಚಯಿಸುವುದು, ಅವರನ್ನು ಇಸ್ಲಾಂಗೆ ಆಹ್ವಾನಿಸುವುದನ್ನೂ ಪ್ರಜ್ಞಾಪೂರ್ವಕವಾಗಿಯೇ ಅವರು ಮಾಡುವುದಿಲ್ಲ. ಭೂಮಿಯ ಅಡಿಭಾಗದ (ಗೋರಿಯ ಒಳಗಡೆಯ) ಆಕಾಶದ ಮೇಲಿನ (ಸ್ವರ್ಗ, ನರಕ) ಬದುಕಿನ ಕುರಿತು ಮಾತ್ರ ಚಿಂತಿಸುತ್ತಾರೆ. ತೀರಾ ಅವಾಸ್ತವಿಕ, ಕರ್ಮಠ ಮೂಲಭೂತವಾದಿ ಗುಂಪು ಇದು. ಮುಸ್ಲಿಮರಲ್ಲಿನ ಇತರೆ ಗುಂಪುಗಳ ಜೊತೆ ಸಾಮಾನ್ಯವಾಗಿ ಇವರು ಸಂಘಟನಾತ್ಮಕ ಸಂಬಂಧ ಇಟ್ಟುಕೊಳ್ಳುವುದಿಲ್ಲ. ದೇಶದ ರಾಜಕಾರಣದ ಕುರಿತು ತಲೆ ಕೆಡಿಸಿಕೊಳ್ಳುವುದಿಲ್ಲ. ಬಹುಸಂಖ್ಯಾತ ಮುಸ್ಲಿಮರು ಇವರ ಕಾರ್ಯವಿಧಾನ, ಆಲೋಚನೆಗಳನ್ನು ಬಲವಾಗಿ ವಿರೋಧಿಸುತ್ತಾರೆ. ಭಾರತದ ಮುಸ್ಲಿಮರಲ್ಲಿ ಬಹುಸಂಖ್ಯಾತರಾಗಿರುವ ಸುನ್ನಿಗಳ (ಸೂಫಿ) ಮಸೀದಿಗಳಲ್ಲಿ ಇವರ ಚಟುವಟಿಕೆಗಳಿಗೆ ಅವಕಾಶವಿಲ್ಲ.

ಇಷ್ಟೆಲ್ಲಾ ಇದ್ದು,, ತಬ್ಲೀಗ್ ಜಮಾತ್ ನಿಜಾಮುದ್ದೀನ್ ಮರ್ಕಜ್ ನಲ್ಲಿ ಕೊರೋನ ಅಪಾಯದ ನಡುವೆ ಕಾರ್ಯಕ್ರಮ (ಈ ಅವಧಿಯಲ್ಲಿ ಇತರೆ ಧರ್ಮಗಳ ಹಲವು ಸಾರ್ವಜನಿಕ ಕಾರ್ಯಕ್ರಮಗಳು ದೇಶಾದ್ಯಂತ ನಡೆದಿವೆ) ನಡೆಸಿದ ಶತಮೂರ್ಖತನವನ್ನು (ತಬ್ಲೀಗ್ ನ ಈ ನಡೆಯನ್ನು ಗಟ್ಟಿ ಧ್ವನಿಯಲ್ಲೇ ಖಂಡಿಸುತ್ತಾ) ಇಸ್ಲಾಂನ, ಇಡೀ ಭಾರತೀಯ ಮುಸಲ್ಮಾನರ ತಲೆಗೆ ಕಟ್ಟುತ್ತೀರಿ, ಭಾರತದಲ್ಲಿ ಹರಡುತ್ತಿರುವ ಕೊರೋನ ವೈರಸ್ ಹೊಣೆಯನ್ನು ಇಡಿಯಾಗಿ ಮುಸಲ್ಮಾನರ ಕುತ್ತಿಗೆಗೆ ನೇತು ಹಾಕುತ್ತೀರಿ ಅಂತಾದರೆ ನನಗೆ ಹೇಳಲೇನೂ ಇಲ್ಲ.

ಒಂದು ನೆನಪಿಡಿ, ಇಂತಹ ನಡೆಗಳಿಂದ ನೀವು ಮುಸಲ್ಮಾನರಿಗೆ ಮಾತ್ರ ಅಲ್ಲ ಇಡೀ ದೇಶಕ್ಕೆ, ಇಲ್ಲಿನ 130 ಕೋಟಿ ಭಾರತೀಯರಿಗೆ ಅನ್ಯಾಯ ಮಾಡುತ್ತಿದ್ದೀರಿ. ಹಾಗೂ ಇಂತಹ ಅತಿರೇಕಗಳಿಂದ ಭಾರತದ ಬಹುಸಂಖ್ಯಾತ ಮುಸಲ್ಮಾನರು ದೂರ ಇಟ್ಟಿರುವ ತಬ್ಲೀಗ್ ಜಮಾತ್, ಮುಸ್ಲಿಂ ಜನಸಾಮಾನ್ಯರ ಅನುಕಂಪವನ್ನು ಗಿಟ್ಟಿಸಿಕೊಳ್ಳುತ್ತದೆ. ಅವರಿಗೆ ಹತ್ತಿರವಾಗುತ್ತದೆ, ಅವರೊಳಗಡೆ ಮಾನ್ಯತೆಗಳಿಸಿಕೊಳ್ಳುತ್ತದೆ. ಸಮುದಾಯದೊಳಗಡೆ ಗಟ್ಟಿಯಾಗಿ ಬೇರೂರತೊಡಗುತ್ತದೆ. ಮುಸಲ್ಮಾನರು ಹೆಚ್ಚು ಹೆಚ್ಚು ತಮ್ಮದೇ ಗೆಟ್ಟೋಗಳೊಳಗಡೆ ಬಂಧಿಯಾಗುವಂತೆ ಮಾಡುತ್ತದೆ.

– ಮುನೀರ್ ಕಾಟಿಪಳ್ಳ

ಅತಿಥಿ ಅಂಕಣ



ಪ್ರೊ. ಎಂ. ಚಂದ್ರ ಪೂಜಾರಿ



ಲಾಕ್ ಡೌನ್‌ನ ಆರ್ಥಿಕ ಪರಿಣಾಮಗಳು

ಹಿಂದೆ ಬಡವರನ್ನು ವೈರಸ್ ತರಹ ನೋಡುತ್ತಿದ್ದರು. ಇಂದು ಬಡವರನ್ನು ವೈರಸ್ ವಾಹಕದ ರೂಪದಲ್ಲಿ ನೋಡುತ್ತಿದ್ದಾರೆ. ವೈರಸ್ ಬಡವರಿಂದಲೇ ಹರಡುತ್ತಿದೆ, ಅವರ ಚಲನೆಯನ್ನು ಹತ್ತಿಕ್ಕಿದ್ದರೆ ವೈರಸ್ ಚಲನೆಯನ್ನು ಹತೋಟಿಗೆ ತರಬಹುದೆನ್ನುವ ದೃಷ್ಟಿಕೋನ ಲಾಕ್ ಡೌನ್ ನ ಹಿಂದಿದೆ. ಪೂರ್ವ ತಯಾರಿ ಇಲ್ಲದೆ ನೋಟು ರದ್ದತಿ ತರಹ ಒಂದೇ ಉಸಿರಲ್ಲಿ 21 ದಿನಗಳ ಲಾಕ್‌ಡೌನ್ ಘೋಷಿಸಿ ಎಲ್ಲ ಸಾರಿಗೆ ವ್ಯವಸ್ಥೆಯನ್ನು ರದ್ದುಗೊಳಿಸಿದರೆ ಏನಾಗಬಹುದು? ನೋಟು ಚಲಾವಣೆ ಅರ್ಥ ವ್ಯವಸ್ಥೆಯ ರಕ್ತ ಸಂಚಲನದಂತೆ ಕೆಲಸ ಮಾಡುತ್ತದೆ. ಅದನ್ನು ಏಕ್‌ದಂ ನಿಲ್ಲಿಸಿದ ಕಾರಣ ಇಡೀ ಅರ್ಥ ವ್ಯವಸ್ಥೆಯೇ ಕುಸಿದು ಬಿತ್ತು. ಇದಕ್ಕಿಂತಲೂ ಭೀಕರವಾದ ಪರಿಣಾಮವನ್ನು ಪೂರ್ವ ಸೂಚನೆ ಇಲ್ಲದೆ ಘೋಷಿಸಿದ ಲಾಕ್‌ಡೌನ್ ಮಾಡಬಹುದು. ಆದರೆ ಇಂತಹ ಕರಾಳ ಭವಿಷ್ಯ ಅನಿವಾರ್ಯವೆನ್ನಲ್ಲ. ಸರಕಾರ ಮನಸ್ಸು ಮಾಡಿದರೆ ಈ ಸ್ಥಿತಿಯನ್ನು ಸಂಪೂರ್ಣವಲ್ಲದಿದ್ದರೂ ಬಹುತೇಕ ಬದಲಾಯಿಸಬಹುದು. ಸರಕಾರ ತಕ್ಷಣ ಆರು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಕೊರೊನಾ ಹತೋಟಿಗೆ ಲಾಕ್‌ಡೌನ್ ಬಿಟ್ಟರೆ ಬೇರೆ ದಾರಿಯೇ ಇಲ್ಲ ಎಂದು ಸರಕಾರ 21 ದಿನಗಳ ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಿಸಿದೆ. ಲಾಕ್‌ಡೌನ್ ಪರಿಣಾಮದ ಬಗ್ಗೆ ಮಾತಾಡುವ ಮುನ್ನ ಕೊರೊನಾ ಹತೋಟಿಗೆ ಲಾಕ್‌ಡೌನ್ ಬಿಟ್ಟರೆ ಬೇರೆ ದಾರಿಯೇ ಇಲ್ಲ ಎನ್ನುವ ಸರಕಾರದ ನಿರ್ಧಾರದ ಬಗ್ಗೆ ಆಲೋಚಿಸಬೇಕಾಗಿದೆ. ಈ ನಿರ್ಧಾರ ಚೀನಾವನ್ನು ನೋಡಿ ಬಂದ ತೀರ್ಮಾನ. ಚೀನಾ ಕೂಡ ನಮ್ಮ ಹಾಗೆ ದೊಡ್ಡ ದೇಶ. ನಮ್ಮಿಂದಲೂ ಹೆಚ್ಚು ಜನಸಂಖ್ಯೆ ಇರುವ ದೇಶ. ಜೊತೆಗೆ ಅವರು ನಮ್ಮ ನೆರೆ ದೇಶ. ಅಲ್ಲಿನ ಜನಜೀವನ ಮತ್ತು ನಮ್ಮ ಜೀನವದ ನಡುವೆ ಸಾಕಷ್ಟು ಸಾಮ್ಯತೆ ಇದೆ. ಅಲ್ಲಿ ಕೊರೊನಾ ವೈರಸ್ ಸಾಂಕ್ರಾಮಿಕಗೊಂಡ ವೂಹಾನ್ ಮಹಾನಗರ ಮತ್ತು ಅದು ಇರುವ ಹುಬೆ ಪ್ರಾಂತ್ಯವನ್ನು ಎರಡು ಹಂತಗಳಲ್ಲಿ ಸಂಪೂರ್ಣ ಲಾಕ್‌ಡೌನ್ ಮಾಡಿ ವೈರಸ್ ಹಾವಳಿಯನ್ನು ಹತೋಟಿಗೆ ಚೀನಾ ತಂದಿದೆ. ಚೀನಾದ ಈ ಮಾದರಿಯನ್ನು ಅನುಸರಿಸದ ಇಟಲಿ, ಬ್ರಿಟನ್, ಆಮೇರಿಕಾದಂತಹ ದೇಶಗಳು ದೊಡ್ಡ ಮಟ್ಟಿನ ಅನಾಹುತವನ್ನು ಎದರಿಸುತ್ತಿವೆ. ನಮ್ಮಲ್ಲಿ ಚೀನಾದಂತೆ ದೊಡ್ಡ ಸಂಖ್ಯೆಯಲ್ಲಿ ಜನರಿದ್ದಾರೆ. ಜೊತೆಗೆ ಚೀನಾದ ಸಿಟಿಗಳಂತೆಹ ನಮ್ಮ ಸಿಟಿಗಳಲ್ಲು ಕೂಡ ಜನದಟ್ಟಣಿ ಇದೆ. ಇವೆಲ್ಲ ಕಾರಣಗಳಿಂದ ಲಾಕ್‌ಡೌನ್ ಕೊರೊನಾ ವೈರಸ್ ಹತೋಟಿಗೆ ಉತ್ತಮ ಮಾರ್ಗವೆಂದು ಬಗೆಯಲಾಗಿದೆ. ಆದರೆ ಚೀನಾ ಕೇವಲ ಲಾಕ್‌ಡೌನ್‌ನಿಂದ ಕೊರೊನಾ ವಿರುದ್ಧ ಯಶಸ್ಸು ಪಡೆದಿಲ್ಲ. ಲಾಕ್‌ಡೌನ್ ಜೊತೆಗೆ ಅಲ್ಲಿನ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಮಾಹಿತಿ ತಂತ್ರಜ್ಞಾನ ಮತ್ತು ಅವುಗಳ ಬಳಕೆ, ಸರಕಾರದ ಸ್ಪಂದನೆ ಇವೆಲ್ಲವೂ ಚೀನಾದ ಯಶಸ್ಸಿನ ಹಿಂದೆ ಕೆಲಸ ಮಾಡಿವೆ. ಚೀನಾದಲ್ಲಿ ಅತ್ಯುತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಇದೆ. ಇದೇ ಕಾರಣದಿಂದ ಚೀನಾ ಕೆಲವೇ ಕೆಲವು ದಿನಗಳಲ್ಲಿ ಸಾವಿರಾರು ಬೆಡ್‌ಗಳ ಆಸ್ಪತ್ರೆಗಳನ್ನು ನಿರ್ಮಿಸುವುದರ ಜೊತೆಗೆ ದೊಡ್ಡ ಸಂಖ್ಯೆಯಲ್ಲಿ ವೈದ್ಯರನ್ನು, ನರ್ಸ್‌ಗಳನ್ನು, ಆರೋಗ್ಯ ಸಹಾಯಕರನ್ನು, ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರಿಗೆ ರಕ್ಷಣ ಕವಚಗಳನ್ನು, ಔಷಧಿಯನ್ನು ಪೂರೈಕೆ ಮಾಡಿದೆ. ಅಲ್ಲಿನ ಮಾಹಿತಿ ತಂತ್ರಜ್ಞಾನ ಫೇಸ್ ರೀಡಿಂಗ್, ಸಿಸಿ ಟಿವಿಗಳ ಮೂಲಕ ಸಂಗ್ರಹಿಸಿದೆ ಮಾಹಿತಿಯನ್ನು ಆರೋಗ್ಯ ಸವಲತ್ತುಗಳನ್ನು ತಲುಪಿಸಲು ಪರಿಣಾಮಕಾರಿಯಾಗಿ ಬಳಸಿಕೊಂಡಿದೆ.

ಅಲ್ಲಿನ ಸರಕಾರ ವೈರಸ್ ಇರುವಿಕೆಯನ್ನು ಆರಂಭದಲ್ಲಿ ನಿರಾಕರಿಸಿದರೂ ನಂತರ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಕ್ರಮ ಕೈಗೊಂಡಿದೆ. ಚೀನಾದ ಇಂತಹ ವ್ಯವಸ್ಥೆಯನ್ನು ಆಮೇರಿಕಾ, ಇಟಲಿ, ಸ್ಪೇಯಿನ್, ಫ್ರಾನ್ಸ್ ಮುಂತಾದ ಯುರೋಪಿಯನ್ ದೇಶಗಳ ಆರೋಗ್ಯದ ವ್ಯವಸ್ಥೆಗೆ ಹೋಲಿಸಿದರೆ ಲಾಕ್‌ಡೌನ್ ಒಂದೇ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆಮೇರಿಕಾ ಮತ್ತು ಯುರೋಪಿಯನ್ ದೇಶಗಳಲ್ಲಿ ಆರೋಗ್ಯ ವ್ಯವಸ್ಥೆ ಸಂಪೂರ್ಣ ಖಾಸಗಿ ಉದ್ದಿಮೆಗಳ ಹತೋಟಿಯಲ್ಲಿದೆ. ಅಲ್ಲಿನ ಜನರು ಹೆಲ್ತ್ ಇನ್ಸೂರೆನ್ಸ್ ಇದ್ದರೆ ಮಾತ್ರ ಬದುಕು ಉಳಿಯಲು ಸಾಧ್ಯ. ಕೋಟ್ಯಾಂತರ ಅಮೆರಿಕನ್ನರಿಗೆ ಇಂತಹ ಇನ್ಶ್ಯೂರೆನ್ಸ್ ಸಹ ಇಲ್ಲ. ಆಮೇರಿಕಾದಲ್ಲಿ ಒಬಾಮ ಅಧಿಕಾರದಲ್ಲಿ ಇದ್ದಾಗ ಜಾರಿಗೆ ತಂದ ಸೀಮಿತವಾದರೂ ಇನ್ಶ್ಯೂರೆನ್ಸ್ ಕವರೇಜ್ ನ್ನು ವಿಸ್ತರಿಸುವ ‘ಒಬಾಮ ಕೇರ್’ ಟ್ರಂಪ್ ಬಂದ ನಂತರ ಮೊಟಕುಗೊಂಡಿದೆ. ಇಟಲಿ, ಫ್ರಾನ್ಸ್, ಸ್ಪೆಯೀನ್ ದೇಶಗಳಲ್ಲೂ ಇದೇ ಸ್ಥಿತಿ. ಇವೇ ಕಾರಣದಿಂದ ಈ ದೇಶಗಳಲ್ಲಿ ಸೋಂಕು ತಗಲಿದ ಮತ್ತು ಮೃತಪಟ್ಟವರ ಸಂಖ್ಯೆ ಚೀನಾದ ಸಂಖ್ಯೆಯನ್ನು ಮೀರಿಸಿವೆ.

ಇವೆಲ್ಲದರ ಹಿನ್ನೆಲೆಯಲ್ಲಿ ನಮ್ಮ ದೇಶದ ಲಾಕ್‌ಡೌನ್ ಕ್ರಮವನ್ನು ನೋಡಿದರೆ ಪರಿಣಾಮವನ್ನು ಊಹಿಸಬಹುದು. ಪಾಶ್ಚಿಮಾತ್ಯ ದೇಶಗಳಂತೆ ನಮ್ಮ ಆರೋಗ್ಯ ವ್ಯವಸ್ಥೆ ಕೂಡ ಖಾಸಗಿ ಉದ್ದಿಮೆಗಳ ಹಿಡಿತದಲ್ಲಿದೆ. ಸರಕಾರ ಆರೋಗ್ಯ ಕ್ಷೇತ್ರದ ಮೇಲೆ ಅತ್ಯಂತ ಕನಿಷ್ಠ ವಿನಿಯೋಜಿಸುತ್ತಿದೆ. ಶೇ.70 ರಷ್ಟಿರುವ ಖಾಸಗಿ ಸವಲತ್ತುಗಳು ನಮ್ಮ ದೇಶದ ಶೇ.30ರಷ್ಟು ಅನುಕೂಲಸ್ಥರಿಗೆ ಸೇವೆ ನೀಡುತ್ತಿವೆ. ಅತ್ಯಂತ ಕನಿಷ್ಠ ಸವಲತ್ತು ಹೊಂದಿರುವ ಸರಕಾರಿ ವ್ಯವಸ್ಥೆಯನ್ನು ಬಡವರು ಅವಲಂಬಿಸಿದ್ದಾರೆ. ಇದರಿಂದಾಗಿ ಆ ವ್ಯವಸ್ಥೆಯಲ್ಲಿ ಕುಂದುಕೊರತೆ ಬಗ್ಗೆ ಬಡವರ ದೂರುಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸುವುದಿಲ್ಲ. ವೈದ್ಯರ, ಔಷಧಿ, ಇಕ್ವಿಪ್‌ಮೆಂಟ್ ಮತ್ತು ಇತರ ಮೂಲಸೌಕರ್ಯಗಳ ಕೊರತೆ ಅನುಭವಿಸುತ್ತಿರುವ ಸರಕಾರಿ ಆರೋಗ್ಯ ವ್ಯವಸ್ಥೆಯು ಕೊರೊನಾದಂತಹ ಮಹಾಮಾರಿಯನ್ನು ಪರಿಹರಿಸುವುದು ದೂರದ ಮಾತು. ಇಂತಹ ಸಂದರ್ಭದಲ್ಲಿ ಕೊರೊನಾ ವೈರಸ್ ದೇಶವ್ಯಾಪಿ ಹಬ್ಬದಂತೆ ನೋಡಿಕೊಳ್ಳಲು ಲಾಕ್‌ಡೌನ್ ಸುಲಭದ ದಾರಿ. ಆದರೆ ಲಾಕ್ ಡೌನ್ ದೇಶದ ಜನರ ಮೇಲೆ ಅದರಲ್ಲೂ ತಳಸ್ತರದ ಜನರ ಮೇಲೆ ಮಾಡುವ ಪರಿಣಾಮವನ್ನು ಊಹಿಸಲು ಅಸಾಧ್ಯ.

ವಲಸೆ ಕಾರ್ಮಿಕರ ಭೀಕರ ಸ್ಥಿತಿ

ಎಲ್ಲ ವ್ಯವಸ್ಥೆಯಲ್ಲೂ ತಳಸ್ತರದ ಜನರು ಉತ್ಪಾದನೆಯ ಮೂಲವೂ ಹೌದು, ಗ್ರಾಹಕರೂ ಹೌದು. ಕೊರೊನಾ ವೈರಸ್ ಮಾನವ ಸಂಪನ್ಮೂಲದ ಮೇಲೆ ದಾಳಿ ಮಾಡುತ್ತಿದೆ. ಇದನ್ನು ತಡೆಯಲು ಸರಕಾರ ಲಾಕ್ ಡೌನ್ ಘೋಷಿಸಿದೆ. ಆದರೆ ಲಾಕ್ ಡೌನ್‌ನ್ನು ಘೋಷಿಸುವ ಮುನ್ನ ಆರು ಕೋಟಿಯಷ್ಟಿರುವ ಅಲೆಮಾರಿಗಳು, 40 ಕೋಟಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರು, ಸಣ್ಣಪುಟ್ಟ ವ್ಯಾಪಾರಿ, ಸಣ್ಣ ಉದ್ಯಮಿಗಳ ಇರುವಿಕೆಯನ್ನು ಸರಕಾರ ಪರಿಗಣಿಸಿಯೇ ಇಲ್ಲ.

ಎಲ್ಲ ಗ್ರಾಮೀಣ ಪ್ರದೇಶಗಳಿಂದಲೂ ನಗರ ಪ್ರದೇಶಗಳಿಗೆ ಹೊಟ್ಟೆಪಾಡಿಗಾಗಿ ವಲಸೆ ಹೋಗುವುದು ಸಾಮಾನ್ಯ. ಸಣ್ಣಪುಟ್ಟ ನಗರಗಳಿಗೆ ಸಣ್ಣ ಸಂಖ್ಯೆಯಲ್ಲಿ ವಲಸೆ ಹೋದರೆ ದೊಡ್ಡ ನಗರಗಳಿಗೆ ಬರುವ ವಲಸೆ ಕಾರ್ಮಿಕರ ಸಂಖ್ಯೆ ದೊಡ್ಡದಿದೆ. ಕರ್ನಾಟಕದ ಹಲವು ನಗರಗಳಲ್ಲಿ ಇಂದು ಸ್ಥಳೀಯ ಕೆಲಸಗಾರರಿಗಿಂತ ಹೆಚ್ಚು ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ ಹೀಗೆ ಹಲವು ಉತ್ತರ ಭಾರತ ರಾಜ್ಯಗಳ ಕೆಲಸಗಾರರಿದ್ದಾರೆ. ಇದು ಕರ್ನಾಟಕದ ಕತೆ ಮಾತ್ರವಲ್ಲ, ದಕ್ಷಿಣದ ಎಲ್ಲ ರಾಜ್ಯಗಳ ಕತೆಯೂ ಹೆಚ್ಚು ಕಡಿಮೆ ಇದೆ. ಉತ್ತರ ಭಾರತದ ಅಭಿವೃದ್ಧಿ ಹೊಂದಿದ ರಾಜ್ಯಗಳಲ್ಲೂ ಇದೇ ಸ್ಥಿತಿ ಇದೆ. ಲಾಕ್ ಡೌನ್ ಘೋಷಿಸುವ ಮುನ್ನ ವಲಸೆ ಕಾರ್ಮಿಕರಿಗೆ ಎರಡು ಆಯ್ಕೆಗಳನ್ನು ನೀಡಬಹುದಿತ್ತು. ಒಂದು, ಅವರು ವಲಸೆಗೆ ಬಂದ ಸ್ಥಳದಲ್ಲೇ ಮುಂದುವರಿಯಲು ವ್ಯವಸ್ಥೆ ಕಲ್ಪಿಸುವುದು. ಎರಡು, ಮುಂದುವರಿಯಲು ಆಸಕ್ತಿ ಇಲ್ಲದಿದ್ದರೆ ಊರಿಗೆ ಹಿಂತಿರುಗಲು ಅವಕಾಶ ನೀಡುವುದು. ವಲಸೆ ಕಾರ್ಮಿಕರು ಬಂದ ಸ್ಥಳದಲ್ಲೇ ಇರಬೇಕಾದರೆ ಅವರಿಗೆ ವಾಸ ಇರಲು ಅವಶ್ಯವಿರುವ ಸವಲತ್ತುಗಳನ್ನು – ಆಹಾರ, ನೀರು, ವಸತಿ ಮತ್ತು ಇತರ ಮೂಲಸೌಕರ್ಯಗಳನ್ನು ಒದಗಿಸಬೇಕಿತ್ತು. ಒಂದು ವೇಳೆ ಅವರು ಊರಿಗೆ ಹೋಗಲು ಆಸಕ್ತರಾಗಿದ್ದರೆ ಅವರು ಹಿಂತಿರುಗಿ ಹೋಗಲು ಒಂದೆರಡು ದಿನಗಳ ಅವಕಾಶ ಮತ್ತು ಸಾರಿಗೆ ವ್ಯವಸ್ಥೆ ಮಾಡುವುದು.

ಇಂತಹ ಪೂರ್ವ ತಯಾರಿ ಇಲ್ಲದೆ ನೋಟು ರದ್ದತಿ ತರಹ ಒಂದೇ ಉಸಿರಲ್ಲಿ 21 ದಿನಗಳ ಲಾಕ್‌ಡೌನ್ ಘೋಷಿಸಿ ಎಲ್ಲ ಸಾರಿಗೆ ವ್ಯವಸ್ಥೆಯನ್ನು ರದ್ದುಗೊಳಿಸಿದರೆ ಏನಾಗಬಹುದು? ನೋಟು ಚಲಾವಣೆ ಅರ್ಥ ವ್ಯವಸ್ಥೆಯ ರಕ್ತ ಸಂಚಲನದಂತೆ ಕೆಲಸ ಮಾಡುತ್ತದೆ. ಅದನ್ನು ಏಕ್‌ದಂ ನಿಲ್ಲಿಸಿದ ಕಾರಣ ಇಡೀ ಅರ್ಥ ವ್ಯವಸ್ಥೆಯೇ ಕುಸಿದು ಬಿತ್ತು. ಇದಕ್ಕಿಂತಲೂ ಭೀಕರವಾದ ಪರಿಣಾಮವನ್ನು ಪೂರ್ವ ಸೂಚನೆ ಇಲ್ಲದೆ ಘೋಷಿಸಿದ ಲಾಕ್‌ಡೌನ್ ಮಾಡಬಹುದು. ವಲಸೆ ಕಾರ್ಮಿಕರು ಬಂದ ಸ್ಥಳದಲ್ಲಿ ಕೆಲಸವಿಲ್ಲದೆ, ಅನ್ನ ನೀರಿಲ್ಲದೆ ಪರದಾಡುತ್ತಿರುವುನ್ನು ನಾವೆಲ್ಲ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಬಂದ ಸ್ಥಳದಲ್ಲಿ ಆಶ್ರಯವಿಲ್ಲ, ಊರಿಗೆ ಹೋಗುವ ಎಂದರೆ ಎಲ್ಲ ಸಾರಿಗೆಗಳು ಬಂದ್ ಆಗಿವೆ. ಸಣ್ಣಪುಟ್ಟ ಮಕ್ಕಳನ್ನು ನಡೆಸಿಕೊಂಡು, ಹಸು ಕೂಸುಗಳನ್ನು ಕಂಕುಳದಲ್ಲಿ ಎತ್ತಿಕೊಂಡು ಕಿಲೋಮೀಟರ್ ಗಟ್ಟಲೆ ನಡೆದುಕೊಂಡು ಹೋಗುವ ದೃಶ್ಯ ಕಲ್ಲು ಮನಸ್ಸನ್ನು ಕರಗಿಸಬಹುದು. ವಿದೇಶದಲ್ಲಿರುವ ಭಾರತದ ಪ್ರಜೆಗಳನ್ನು ವಿಮಾನದ ಮೂಲಕ ಭಾರತಕ್ಕೆ ತರಬೇಕೆಂದು ತೋಚುವ ಸರಕಾರಕ್ಕೆ ನಮ್ಮದೇ ದೇಶದೊಳಗೆ ದುಡಿಯುವ ಲಕ್ಷಾಂತರ ಕಾರ್ಮಿಕರನ್ನು ಮನೆ ಸೇರಿಸಬೇಕೆನ್ನುವ ಕನಿಷ್ಠ ಯೋಚನೆ ಬರಲಿಲ್ಲ. ಇದೇ ಕಾರ್ಮಿಕರು ಇದ್ದ ಸ್ಥಳದಲ್ಲಿ ಉದ್ಯೋಗ, ಆಹಾರ, ಕುಡಿಯುವ ನೀರು ಇತ್ಯಾದಿಗಳ ಖರೀದಿಗೆ ಬೀದಿಗೆ ಬಂದರೆ ಪೋಲಿಸರ ಹೊಡೆತ. ತಮ್ಮದೇ ವ್ಯವಸ್ಥೆ ಮಾಡಿಕೊಂಡು ಊರಿಗೆ ಹೋಗಲು ಪ್ರಯತ್ನಿಸಿದರೆ ಅಲ್ಲೂ ಪೋಲಿಸ್ ಹೊಡೆತ. ಪೋಲಿಸ್ ಹೊಡೆಯುವುದು ಸರಿಯಲ್ಲ ಎನ್ನುವ ಬದಲು ಇವರೆಲ್ಲ ಯಾಕಾದರೂ ಬೀದಿಗೆ ಬರುತ್ತಾರೆಂದು ಬಡಜನರನ್ನೇ ಜರಿಯುವ ಮಾಧ್ಯಮ. ಇವೆಲ್ಲವನ್ನು ನೋಡಿದರೆ ನಮ್ಮದೊಂದು ನಾಗರಿಕ ಸಮಾಜವೇ ಎನ್ನುವ ಸಂದೇಹ ಕಾಡುತ್ತಿದೆ.

ಬಡವರು ವೈರಸ್ ವಾಹಕರಲ್ಲ

ಹಿಂದೆ ಬಡವರನ್ನು ವೈರಸ್ ತರಹ ➚

ನೋಡುತ್ತಿದ್ದರು. ಇಂದು ಬಡವರನ್ನು ವೈರಸ್ ವಾಹಕದ ರೂಪದಲ್ಲಿ ನೋಡುತ್ತಿದ್ದಾರೆ.

ವೈರಸ್ ಬಡವರಿಂದಲೇ ಹರಡುತ್ತಿದೆ, ಅವರ ಚಲನೆಯನ್ನು ಹತ್ತಿಕ್ಕಿದ್ದರೆ ವೈರಸ್ ಚಲನೆಯನ್ನು ಹತೋಟಿಗೆ ತರಬಹುದೆನ್ನುವ ದೃಷ್ಟಿಕೋನ ಇದು. ವೈರಸ್ ಭಾರತದಲ್ಲಿ ಸೃಷ್ಟಿಯಾಗಿಲ್ಲ, ಹೊರಗಿನಿಂದ ಬಂದಿದೆ ಮತ್ತು ಇದನ್ನು ಬಡವರು ಭಾರತಕ್ಕೆ ತಂದಿಲ್ಲ. ಮಧ್ಯಮ ಮತ್ತು ಶ್ರೀಮಂತ ವರ್ಗ ತಂದಿವೆ. ಭಾರತ ಲಾಕ್‌ಡೌನ್ ಆದಾಗ ಅವರು ಉದ್ಯೋಗಕ್ಕಾಗಿ, ಊಟಕ್ಕಾಗಿ, ಸಹಾಯಕ್ಕಾಗಿ ಹೊರಗೆ ಓಡಾಡುವ ಅಗತ್ಯವಿಲ್ಲ. ಹೊರಗೆ ಹೋಗದಿದ್ದರೂ ಸಂಬಳ, ಪಿಂಚಣಿ, ಡಿವಿಡೆಂಡ್, ಬಡ್ಡಿ, ಬಾಡಿಗೆ ಇತ್ಯಾದಿ ರೂಪಗಳಲ್ಲಿ ಅವರಿಗೆ ಆದಾಯ ಬರುತ್ತದೆ. ಆದರೆ ಹೊರಗೆ ಹೋಗಿ ದುಡಿಯದಿದ್ದರೆ ಜೀವಂತ ಇರಲು ಸಾಧ್ಯವೇ ಇಲ್ಲ ಎನ್ನುವವರು ಏನು ಮಾಡಬೇಕು? ಇಂತಹ ಅಯೋಜಿತ ಲಾಕ್‌ಡೌನ್ ಅಸಂಘಟಿತ ವಲಯದ ದುಡಿಮೆಯನ್ನು ನಂಬಿದ ಎಲ್ಲರ ಬದುಕನ್ನು ನರಕಸದೃಶ್ಯ ಮಾಡುವುದನ್ನು ಈಗಾಗಲೇ ನೋಡುತ್ತಿದ್ದೇವೆ. ದುಡಿಮೆ ಇಲ್ಲದ, ಆದಾಯವಿಲ್ಲದ, ಊಟವಿಲ್ಲದ ಇವರ ರೋಗ ನಿರೋಧಕ ಕ್ಷೀಣಿಸುತ್ತದೆಂದು ಹೇಳಲು ವೈದ್ಯರು ಬೇಕಿಲ್ಲ. ಇವರೆಲ್ಲ ಮಹಾಮಾರಿಗೆ ಬಲುಬೇಗ ತುತ್ತಾಗಬಹುದು. ತುಂಬಾ ತಡವಾಗಿ ಘೋಷಿಸಿದ ಅರೆಬರೆ ಪರಿಹಾರಗಳ ಭರವಸೆ ಸಕಾಲದಲ್ಲಿ ತಲುಪಿದರೆ ಪುಣ್ಯ. ಒಂದು ವೇಳೆ ಸರಕಾರ ಇವರಿಗೆ ನೀಡುವ ಕನಿಷ್ಠ ಸವಲತ್ತನ್ನೂ ಸಕಾಲದಲ್ಲಿ ತಲುಪಿಸದಿದ್ದರೆ ಇವರೆಲ್ಲ ಮಹಾಮಾರಿಯಿಂದ ತಪ್ಪಿಸಿಕೊಂಡರೂ, ಆಹಾರದ ಕೊರತೆಯಿಂದ ಸಾಯುವ ಸಾಧ್ಯತೆ ಹೆಚ್ಚಿದೆ.

ನಮ್ಮ ದುಡಿಮೆಗಾರರ ಶೇ.94 ರಷ್ಟು ಜನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ನಮ್ಮ ಜಿಡಿಪಿಯ ಶೇ.49 ರಷ್ಟು ಇವರ ದುಡಿಮೆಯಿಂದ ಬರುತ್ತಿದೆ. ನೋಟು ರದ್ದತಿ ಸಂದರ್ಭದಲ್ಲೂ ಮೊದಲು ಅಸಂಘಟಿತ ವಲಯದ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡವು. ಆಗ ಅದು ಮಾಧ್ಯಮದಲ್ಲಿ ದೊಡ್ಡ ಸುದ್ದಿಯಾಗಲಿಲ್ಲ. ಸಂಘಟಿತ ಮತ್ತು ಅಸಂಘಟಿತ ವಲಯಗಳು ಪರಸ್ಪರ ಅವಲಂಬಿತ. ಸಂಘಟಿತ ವಲಯದ ಹಲವು ಬಿಡಿಭಾಗಗಳು ಅಸಂಘಟಿತ ವಲಯದಲ್ಲಿ ಉತ್ಪಾದನೆಯಾಗುತ್ತವೆ. ಜೊತೆಗೆ ಸಂಘಟಿತ ವಲಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಸಂಘಟಿತ ಕಾರ್ಮಿಕರಿದ್ದಾರೆ. ಅಷ್ಟು ಮಾತ್ರವಲ್ಲ ಸಂಘಟಿತ ವಲಯದ ಉತ್ಪಾದನೆಯ ಅನುಭೋಗದಲ್ಲಿ ಅಸಂಘಟಿತ ವಲಯದ ದುಡಿಮೆಗಾರರ ಪಾತ್ರವೂ ಇದೆ. ಹೀಗಾಗಿ ಸಂಘಟಿತ ವಲಯದ ಉತ್ಪಾದನೆ ಮತ್ತು ಬೇಡಿಕೆ ಎರಡೂ ಕೂಡ ಅಸಂಘಟಿತ ವಲಯದ ಉತ್ಪಾದನೆ ಮತ್ತು ಬೇಡಿಕೆ ಮೇಲೆ ನಿಂತಿದೆ. ಇದೇ ಕಾರಣದಿಂದ ನೋಟು ರದ್ದತಿಯ ತಕ್ಷಣದ ಪರಿಣಾಮವಾಗಿ ಅಸಂಘಟಿತ ವಲಯದ ಆರ್ಥಿಕ ಚಟುವಟಿಕೆಗಳು ಕುಂಠಿತಗೊಂಡರೆ ನಂತರದ ದಿನಗಳಲ್ಲಿ ಇದರ ಪರಿಣಾಮ ಸಂಘಟಿತ ವಲಯದ ಮೇಲೂ ಕಾಣಲು ಆರಂಭವಾಯಿತು. ಆ ಸಂದರ್ಭದಲ್ಲಿ ಮಾಧ್ಯಮಗಳು ಕಿರುಚಾಡಲು ಆರಂಭಿಸಿದವು. ಸರಕಾರ ಎಚ್ಚೆತ್ತುಕೊಂಡು ಸಂಘಟಿತ ವಲಯದ ಉದ್ಯಮಿಗಳಿಗೆ ಕೋಟಿಗಟ್ಟಲೆ ತೆರಿಗೆ ವಿನಾಯಿತಿ ನೀಡಿದೆ. ಅಸಂಘಟಿರ ವಲಯದಲ್ಲಿ ದುಡಿಯುವವರ ಆದಾಯ ಹೆಚ್ಚಿಸಲು ಏನೇನೂ ಕ್ರಮ ಕೈಗೊಳ್ಳಲಿಲ್ಲ. ಇದರಿಂದ ನಮ್ಮ ದೇಶದ ಜಿಡಿಪಿ ಕುಸಿದು ಪಾತಾಳ ಸೇರಿತು. ಇಂತಹ ಸಂದರ್ಭದಲ್ಲಿ ಈ ಮಹಾಮಾರಿ ವಕ್ಕರಿಸಿದೆ. ಈ ಸಂದರ್ಭದಲ್ಲಾದರೂ ಸರಕಾರ ಎಚ್ಚೆತ್ತುಕೊಂಡು ತಳಸ್ತರದ ಜನರ ಕೈಯಲ್ಲಿ ಅಲ್ಪಸ್ವಲ್ಪ ಹಣ ಇರುವಂತೆ ನೋಡಿಕೊಳ್ಳಬೇಕಿತ್ತು. ಆದರೆ ಅಂತಹ ಕ್ರಮಗಳು ಇನ್ನೂ ಜಾರಿಗೆ ಬಂದಿಲ್ಲ. ಇದರಿಂದಾಗಿ ನೋಟು ರದ್ದತಿ ಪರಿಣಾಮದ ಮತ್ತೊಂದು ಮತ್ತು ಬಹುಶಃ ಇನ್ನಷ್ಟು ಭೀಕರ ರೂಪವನ್ನು ಅಯೋಜಿತ ಲಾಕ್‌ಡೌನ್‌ನಿಂದಲೂ ನಿರೀಕ್ಷಿಸಬಹುದು.

ಕೃಷಿ, ಸಣ್ಣಮಟ್ಟ ವ್ಯಾಪಾರ, ಉದ್ದಿಮೆ, ಅಸಂಘಟಿತ ವಲಯದ ದುಡಿಮೆ ಎಲ್ಲವೂ ಮೊದಲ ಹಂತದಲ್ಲಿ ದೊಡ್ಡ ಮಟ್ಟಿನ ಕುಸಿತ ಕಾಣಲಿವೆ. ಶೇ.70 ರಷ್ಟು ಜನ ಈಗಾಗಲೇ ಅತ್ಯಂತ ಕನಿಷ್ಠ ಆದಾಯದಲ್ಲಿ ಬದುಕುತ್ತಿದ್ದಾರೆ. ಇವರು ಅವಲಂಬಿಸಿದ ಎಲ್ಲ ಕ್ಷೇತ್ರಗಳು ಕುಸಿತ ಕಾಣುವುದರಿಂದ ಇವರು ಅಲ್ಲಿ ಉದ್ಯೋಗ ನಿರೀಕ್ಷಿಸುವುದು ಕಷ್ಟ. ಸಂಘಟಿತ ವಲಯ ಇವರನ್ನು ಹತ್ತಿರ ಸೇರಿಸದಿರುವುದರಿಂದ ಅಸಂಘಟಿತ ವಲಯದಲ್ಲೂ ದೊಡ್ಡ ನಿರುದ್ಯೋಗ ಸೃಷ್ಟಿಯಾಬಹುದು. ಆದಾಯ ಗಳಿಸುವ ದಾರಿಗಳೆಲ್ಲ ಮುಚ್ಚುವುದರಿಂದ ಇವರ ಆರೋಗ್ಯ, ಬದುಕು ಎಲ್ಲವೂ ಕಠಿಣ ಪರೀಕ್ಷೆಗೆ ಒಳಗಾಗಬಹುದು.

ಯಾವ ಕ್ರಮ ಕೈಗೊಳ್ಳಬಹುದು?

ಇಂತಹ ಕರಾಳ ಭವಿಷ್ಯ ಅನಿವಾರ್ಯವೆನ್ನಲ್ಲ. ಸರಕಾರ ಮನಸ್ಸು ಮಾಡಿದರೆ ಈ ಸ್ಥಿತಿಯನ್ನು ಸಂಪೂರ್ಣವಲ್ಲದಿದ್ದರೂ ಬಹುತೇಕ ಬದಲಾಯಿಸಬಹುದು. ಸರಕಾರ ತಕ್ಷಣಈ ಆರು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಒಂದು, ಅಸಂಘಟಿತ ವಲಯದಲ್ಲಿ ದುಡಿಯುವವರನ್ನು ಗುರುತಿಸುವುದು ಮತ್ತು ಅವರಿಗೆ ಕನಿಷ್ಠ ಮೂಲ ಸೌಕರ್ಯಗಳನ್ನು ಪೂರೈಸುವುದು. ಅಸಂಘಟಿತ ವಲಯದಲ್ಲಿರುವವರನ್ನು ಗುರುತಿಸಲು ಸಾಕಷ್ಟು ಸಾಧನಗಳಿವೆ. ಆಧಾರ್, ರೇಶನ್ ಕಾರ್ಡ್, ಬಿಪಿಎಲ್ ಸರ್ವೇ ಇತ್ಯಾದಿ ಮಾಹಿತಿಗಳನ್ನು ಬಳಸಿಕೊಂಡು ಅತೀ ಜರೂರು ಮೂಲ ಸೌಕರ್ಯಗಳ ಅವಶ್ಯಕತೆ ಇರುವವರನ್ನು ಗುರುತಿಸಬಹುದು. ಗುರುತಿಸಿದ ನಂತರ ಪಂಚಾಯಿತಿಗಳ ಮೂಲಕ ಅಥವಾ ಇತರ ವಿಕೇಂದ್ರೀಕೃತ ವ್ಯವಸ್ಥೆ ಮೂಲಕ ಅವರಿಗೆ ಆಹಾರ ಸಾಮಗ್ರಿ ಮತ್ತು ಇತರ ಸವಲತ್ತುಗಳನ್ನು ಕನಿಷ್ಠ ಮೂರು ತಿಂಗಳಾದರೂ ಪೂರೈಕೆ ಮಾಡಬೇಕು. ಮೂಲಸೌಕರ್ಯಗಳಲ್ಲಿ ನೀರು ಪೂರೈಕೆ ಅತೀ ಮುಖ್ಯ. ಸೋಕು ತಗಲದಂತೆ ಇರಲು ಆಗಾಗ್ಗ ಸಾಬೂನು ಹಾಕಿ ಕೈತೊಳೆಯಬೇಕೆನ್ನುತ್ತಾರೆ. ಕುಡಿಯುವ ನೀರಿಗೆ ಪರದಾಡುವ ಜನ ಅಗಾಗ್ಗ ಕೈತೊಳೆಯಬೇಕಾದರೆ ನೀರಿನ ಪೂರೈಕೆ ಅತೀ ಅವಶ್ಯ. ಶುಚಿತ್ವ ಕಾಪಾಡಲು ಕೂಡ ನೀರಿನ ಪೂರೈಕೆ ಮುಖ್ಯ.

ಎರಡು, ಅತ್ಯಂತ ಕನಿಷ್ಠ ರೋಗ ನಿರೋಧಕ ಶಕ್ತಿ ಹೊಂದಿರುವ ಇವರೆಲ್ಲ ಬಹುಬೇಗ ಸೋಂಕಿಗೆ ಬಲಿಯಾಗುವ ಸಾಧ್ಯತೆ ಇದೆ. ಆದುದರಿಂದ ಕೊರೊನಾರೋಗದ ಲಕ್ಷಣ ಇದ್ದವರನ್ನು ಮಾತ್ರ ಪರೀಕ್ಷಿಸುವ ಸರಕಾರದ ಇಂದಿನ ನಿಲುವನ್ನು ಬದಲಾಯಿಸಿಕೊಂಡು ಕೊರೊನಾ ಸೋಂಕಿತರನ್ನು ಪತ್ತೆ ಹಚ್ಚಲು ರ್‍ಯಾಂಡಮ್ ಪರೀಕ್ಷೆಗಳನ್ನು ನಡೆಸಬೇಕು.

ಮೂರು, ಕೊರೊನಾ ರೋಗದ ಶಂಕಿತರನ್ನು ಮನೆಯಲ್ಲೇ ಪ್ರತ್ಯೇಕವಾಗಿ ಇರಬೇಕೆನ್ನುವ ಸರಕಾರದ ಇಂದಿನ ನಿಲುವು ತಳಸ್ತರದ ಜನರಿಗೆ ಅನ್ವಯಿಸುವುದು ಸರಿಯಲ್ಲ. ಏಕೆಂದರೆ ಬಹುತೇಕ ಸಂದರ್ಭದಲ್ಲಿ ಇವರೆಲ್ಲ ಒಂದೆರಡು ಕೊಠಡಿಗಳುಳ್ಳ ಸಣ್ಣಮಟ್ಟ ವಸತಿಯಲ್ಲಿರುತ್ತಾರೆ. ಇಂತಹ ಸಣ್ಣ ಜಾಗದಲ್ಲಿ ಏಳೆಂಟು ಮಂದಿ ವಾಸಿಸುವುದು ಸಾಮಾನ್ಯ. ಇಂತಹ ಸಣ್ಣ ಜಾಗದಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಸಾಧ್ಯವೇ ಇಲ್ಲ. ಅಷ್ಟು ಮಾತ್ರವಲ್ಲ ಮನೆಯ ಎಲ್ಲರಿಗೂ ಸೋಂಕು ತಗಲುವ ಸಾಧ್ಯತೆ ಹೆಚ್ಚಿದೆ. ಆದುದರಿಂದ ತಳಸ್ತರದ ಜನರ ಶಂಕಿತರನ್ನು ಆಸ್ಪತ್ರೆಯಲ್ಲಿ ಸೇರಿಸಿ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ತಕ್ಷಣ ಜಾರಿಗೆ ತರಬೇಕು.

ನಾಲ್ಕು, ದುಡಿಯುವ ಸ್ಥಳದಲ್ಲಿ ಅಥವಾ ಸಣ್ಣಮಟ್ಟ ಫ್ಯಾಕ್ಟರಿಗಳಲ್ಲಿ ಒಬ್ಬ ಕೆಲಸಗಾರರಿಗೆ ಸೋಕು ತಗಲಿದರೆ ಎಲ್ಲ ಕಾರ್ಮಿಕರನ್ನು ಮನೆಯಲ್ಲೇ ಇರಬೇಕೆಂದು ತಾಕೀತು ಮಾಡುವ ಇಂದಿನ ಸರಕಾರದ ನಿಲುವನ್ನು ಬದಲಾಯಿಸಿಕೊಳ್ಳಬೇಕು. ಮೇಲೆ ಹೇಳಿದಂತೆ ಸಣ್ಣಮಟ್ಟ ಫ್ಯಾಕ್ಟರಿಗಳಲ್ಲಿ ದುಡಿಯುವವರೆಲ್ಲ ಮನೆಯಲ್ಲೆ ಉಳಿದರೆ ಫ್ಯಾಕ್ಟರಿ ಬಂದ್ ಆಗುತ್ತದೆ. ಜೊತೆಗೆ ಎಲ್ಲ ಕೆಲಸಗಾರರು ಆದಾಯ ಕಳೆದುಕೊಳ್ಳುತ್ತಾರೆ. ಇಂತಹ ದೂರಾಲೋಚನೆಯಿಲ್ಲದ ಕ್ರಮದ ಬದಲು ಫ್ಯಾಕ್ಟರಿಯ ಎಲ್ಲ ಕಾರ್ಮಿಕರನ್ನು ಪರೀಕ್ಷಿಸಿ ಯಾರೂ ಶಂಕಿತರಿದ್ದಾರೋ ಅವರನ್ನು ಆಸ್ಪತ್ರೆ ಸೇರಿಸುವ ಕ್ರಮ ಕೈಗೊಳ್ಳಬೇಕು.


ಐದು, ದೇಶ, ರಾಜ್ಯ, ಜಿಲ್ಲೆ, ತಾಲ್ಲೂಕು, ಹಳ್ಳಿಗಳೆಲ್ಲ ಬೇಲಿ ಹಾಕಿಕೊಂಡು ಕೂತಿವೆ. ಇಂತಹ ಸ್ಥಿತಿಯಲ್ಲಿ ಜರೂರು ಚಿಕಿತ್ಸೆಗೆ ಪ್ರಯಾಣಿಸುವುದು ಕಷ್ಟವಾಗಿದೆ. ಅವುಗಳ ಜೊತೆಗೆ ಸರಕುಗಳ ಸಾಗಾಟ ಕೂಡ ಸ್ಥಗಿತಗೊಳ್ಳುವ ಸಾಧ್ಯತೆ ಇದೆ. ಸರಕುಗಳ ಸಾಗಾಟ ನಡೆಯದಿದ್ದರೆ ರೈತರು ಬೆಳೆಯುವುದಿಲ್ಲ. ಇದೇ ಚಕ್ರ ಮುಂದುವರಿದರೆ ಆಹಾರ ಕೊರತೆ ಸೃಷ್ಟಿಯಾಗುವುದರಲ್ಲಿ ಸಂದೇಹವೇ ಇಲ್ಲ. ಇದು ದೊಡ್ಡ ಮಟ್ಟಿನ ಸಾಮಾಜಿಕ ಅಶಾಂತಿಗೆ ಕಾರಣವಾಗಬಹುದು. ಆದುದರಿಂದ ಸರಕಾರಗಳು ಈ ಬೇಲಿ ಹಾಕುವ ಕ್ರಮವನ್ನು ಶಿಸ್ತುಬದ್ಧಗೊಳಿಸಿ ಸರಕು ಸಾಗಾಟ ಹಾಗೂ ಎಮರ್ಜನ್ಸಿ ಮೆಡಿಕಲ್ ಸೇವೆಗೆ ಓಡಾಡುವುದನ್ನು ಆದಷ್ಟು ಬೇಗ ಸರಾಗಗೊಳಿಸಬೇಕು.

ಆರು, ಮಾಧ್ಯಮಗಳು ಜನರನ್ನು ಭಯಭೀತರನ್ನಾಗಿಸುವುದನ್ನು ಕಡಿಮೆ ಮಾಡಿ ವೈರಸ್ ಬಗ್ಗೆ ಶಿಕ್ಷಣ ಕೊಡುವುದನ್ನು ಕಲಿಯಬೇಕು. ಜೊತೆಗೆ ಪಂಚಾಯತ್, ತಾಲ್ಲೂಕು, ಜಿಲ್ಲಾ ಸ್ತರದಲ್ಲಿರುವ ಆರೋಗ್ಯ ವ್ಯವಸ್ಥೆ ಎದುರಿಸುತ್ತಿರುವ ಕುಂದುಕೊರತೆಗಳನ್ನು ಸರಕಾರದ ಗಮನಕ್ಕೆ ತರುವ ಅಗತ್ಯವಿದೆ. ಈ ಕುಂದುಕೊರತೆಗಳು ಪರಿಹಾರವಾದರೆ ರೋಗ ಹರಡಿದರೂ ಹತೋಟಿಗೆ ತರಬಹುದು.

ದುಡಿಯುವ ಜನ ದೇಶದ ಆಸ್ತಿ

ಹಿಂದೆ ಮತ್ತು ಇಂದೂ ನಮ್ಮ ಸಂಸ್ಕೃತಿಯಲ್ಲಿ ದೈಹಿಕ ಶ್ರಮ ಪಡುವವರಿಗೆ ಬೆಲೆ ಇರಲಿಲ್ಲ. ಹಿಂದೆ ಕೂಡ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಶ್ರಮದ ಮೇಲೆ ನಮ್ಮ ಕೃಷಿ ಮತ್ತು ಇತರ ಉತ್ಪಾದನೆಗಳು ನಿಂತಿದ್ದವು. ಆದರೆ ಅವರನ್ನು ಊರೊಳಗೆ ಬಿಟ್ಟುಕೊಳ್ಳಲಿಲ್ಲ. ಅವರನ್ನು ಹತ್ತಿರ ಸೇರಿಸಲಿಲ್ಲ. ಅವರನ್ನು ಮುಟ್ಟಿದರೆ ಮಡಿಮೈಲಿಗೆ ಆಗುತ್ತಿತ್ತು. ಇವತ್ತು ನಾವು ಕೊರೊನಾ ವೈರಸನ್ನು ನೋಡುವ ರೀತಿಯಲ್ಲಿ ಹಿಂದೆ ನಮ್ಮದೇ ದುಡಿಯುವ ಜನರನ್ನು ನೋಡುವ ಪಾಠವನ್ನು ನಮ್ಮ ಮಹಾನ್ ಸಂಸ್ಕೃತಿ ಕಲಿಸಿದೆ. ಈ ಪಾಠ ಇಂದೂ ಕೂಡ ಆಚರಣೆಯಲ್ಲಿದೆ. ವಲಸೆ ಕಾರ್ಮಿಕರಿಗೆ, ಬಡವರಿಗೆ, ಸಣ್ಣಮಟ್ಟ ವ್ಯಾಪಾರಿ ಉದ್ಯಮಿಗಳಿಗೆ ಒಂದಿಷ್ಟು ವ್ಯವಸ್ಥೆ ಮಾಡದೆ ಏಕದಂ ಲಾಕ್‌ಡೌನ್ ಮಾಡುವುದು ಇದೇ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ. ಕಾರ್ಮಿಕರು, ಬಡವರು, ಸಾಮಾನ್ಯ ಜನರು ಬೀದಿಗೆ ಬಂದಾಗ ಮನಸ್ಸೋ ಇಚ್ಛೆ ಲಾಠಿ ಬೀಸುವುದು ಪೋಲಿಸರ ಮಾನಸಿಕ ಸ್ಥಿತಿಯನ್ನು ತೋರಿಸುತ್ತಿಲ್ಲ; ಅಧಿಕಾರದಲ್ಲಿರುವವರ ಮಾನಸಿಕ ಸ್ಥಿತಿಯನ್ನು ತೋರಿಸುತ್ತದೆ. ಇಂತಹ ಘಟನೆಯನ್ನು ನಿಂದಿಸುವ ಬದಲು ಸರಕಾರ, ಪೋಲಿಸ್ ಮಾಡುವುದೇ ಸರಿ ಎಂದು ಬಿಂಬಿಸುವ ಮಾಧ್ಯಮ ಕೂಡ ಸೂಕ್ಷ್ಮತೆಯಿಲ್ಲದ ಸರಕಾರದ ಧೋರಣೆಯ ಮುಂದುವರಿಕೆ ಆಗಿದೆ. ಇವೆಲ್ಲ ಬದಲಾಗಬೇಕಾಗಿದೆ.

ಮಸೀದಿ, ಮಂದಿರ, ಗುಡಿಗೋಪುರಗಳಲ್ಲಿ, ಹಳೇ ಧಾರ್ಮಿಕ ಗ್ರಂಥಗಳಲ್ಲಿ ಸಂಸ್ಕೃತಿಯ ದೊಡ್ಡಸ್ತಿಕೆಯನ್ನು ನೋಡುವ ಚಟ ನಮಗೆ ಚರಿತ್ರೆಯಿಂದ ಬಂದಿದೆ. ಕಲ್ಲಲ್ಲಿ, ಮಣ್ಣಲ್ಲಿ, ಮರದಲ್ಲಿ, ನೀರಲ್ಲಿ, ಪ್ರಾಣಿಗಳಲ್ಲಿ ದೇವರನ್ನು ನೋಡುವ ಪಾಠ ಕೂಡ ಸಂಸ್ಕೃತಿಯಿಂದ ಬಂದಿದೆ. ಆದರೆ ನಮ್ಮ ಹಾಗೆ ಇರುವ ಮತ್ತೊಬ್ಬ ಮನುಷ್ಯನಲ್ಲಿ ದೇವರನ್ನು ನೋಡುವ ಪಾಠ ನಮಗೆ ಎಲ್ಲೂ ಸಿಕ್ಕಿಲ್ಲ. ಆದರೆ ಚರಿತ್ರೆಯಿಂದ ಬಂದ ಸಂಸ್ಕೃತಿ ಮತ್ತು ದೇವರ ಕಲ್ಪನೆಗಳು ಇಂದು ಏನೇನೂ ಉಪಯೋಗವಿಲ್ಲ ಎನ್ನುವ ಸತ್ಯ ನಮಗೆಲ್ಲ ಅರ್ಥವಾಗಬೇಕಾಗಿದೆ. ಮಹಾನ್ ಸಂಸ್ಕೃತಿಯ ಲಕ್ಷಣವನ್ನು ನೋಡುವ ಮಾನದಂಡವೇ ಬದಲಾಗಬೇಕಾಗಿದೆ. ಸಮಾಜದ ಕಟ್ಟೆ ಕಡೆಯ ವ್ಯಕ್ತಿಯ ಬದುಕು ಹೇಗಿದೆ ಮತ್ತು ಅವರನ್ನು ಸಮಾಜ ಹೇಗೆ ನೋಡುತ್ತಿದೆ ಎನ್ನುವುದು ಮಹಾನ್ ಸಂಸ್ಕೃತಿಯ ಲಕ್ಷಣವಾಗಬೇಕಾಗಿದೆ. ಮತ್ತೊಬ್ಬರು ಚೆನ್ನಾಗಿದ್ದರೆ ಮಾತ್ರ ನಾವು ಚೆನ್ನಾಗಿರಲಿ ಸಾಧ್ಯ ಎನ್ನುವ ಪಾಠವನ್ನು ಈ ಮಹಾಮಾರಿ ಮಾಡುತ್ತಿದೆ. ಆದುದರಿಂದ ಎಲ್ಲ ವರ್ಗದ ಜನರನ್ನು ದೇಶದ ಆಸ್ತಿಯೆಂದು ಪರಿಗಣಿಸಿ ಅವರನ್ನು ರಕ್ಷಿಸಲು ಎಲ್ಲ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವುದು ಇಂದಿನ ಅನಿವಾರ್ಯತೆ. ●



ಕೃಪೆ: ಪಿ. ಮಹಮ್ಮದ್, ವಾ.ಭಾ.





ಲಾಕ್‌ಡೌನ್‌ನ ಒಂದು ವಾರ

ಇದು ಸಿಪಿಐ(ಎಂ)ನ ಹಿರಿಯ ನೇತಾರರಲ್ಲಿ ಒಬ್ಬರಾದ ಬೃಂದಾ ಕಾರಟ್ ಇಡೀ ದೇಶ ಕೊರೊನ ವೈರಸ್‌ನ ವಿರುದ್ಧ ಸಮರದ ಭಾಗವಾಗಿ ಮೂರು ವಾರಗಳ ಲಾಕ್‌ಡೌನ್ ಅಂದರೆ ದಿಗ್ಬಂಧನದ ಮೊದಲನೇ ವಾರವನ್ನು ಕಳೆದಾಗ ಬರೆದ ಲೇಖನ. ಇದರಲ್ಲಿ ಈ ಒಂದು ವಾರದ ದೇಶದ ಅನುಭವಗಳ ಒಂದು ವಿಶ್ಲೇಷಣೆ ಇದೆ. ಉಳಿದ ಎರಡು ವಾರಗಳಲ್ಲಿ ಏನು ಮಾಬೇಕಾಗಿದೆ ಎಂಬುದಕ್ಕೆ ಸಲಹೆ–ಸೂಚನೆಗಳಿವೆ. ಈ ಮೊದಲ ವಾರ ಕೆಲವು ಉತ್ತೇಜನಕಾರೀ ಅಂಶಗಳನ್ನು, ಜತೆಗೆ ಹಲವು ಕೊರತೆಗಳನ್ನು ತೋರಿಸಿ ಕೊಟ್ಟಿದೆ. ಕೊರತೆಗಳು ಹೆಚ್ಚಾಗಿ ಆಳುವವರ ಕಡೆಯಿಂದ, ಮುಖ್ಯವಾಗಿ ಕೇಂದ್ರದಲ್ಲಿ ಆಳುವವರ ಕಡೆಯಿಂದ ಎಂಬುದು ಗಮನಾರ್ಹ



ಬೃಂದಾ ಕಾರಟ್

ದೇಶಕ್ಕೆ ಲಾಕ್‌ಡೌನ್‌ನ ಒಂದು ವಾರದ ಅನುಭವ ಆಗಿದೆ. ಇದರಲ್ಲಿ ಕೆಲವು ಸಂಗತಿಗಳನ್ನು ಗಮನಿಸಬಹುದು. ಮೊದಲನೆಯದೆಂದರೆ, ಭಾರತದ ನಾಗರಿಕರು ಒಟ್ಟಾರೆಯಾಗಿ ಹೊಣೆಗಾರಿಕೆ ತೋರಿದ್ದಾರೆ, ಇದ್ದಕ್ಕಿದ್ದಂತೆ ಲಾಕ್‌ಡೌನ್ ಪ್ರಕಟಿಸಿದ್ದರಿಂದ ಬಹಳಷ್ಟು ಕಷ್ಟ ಕೋಟಲೆಗಳು ಬಂದರೂ ಸರಕಾರದ ನಿರ್ದೇಶನಗಳನ್ನು ಅನುಸರಿಸಿದ್ದಾರೆ; ಭಾರತ ಮೂರನೇ ಹಂತಕ್ಕೆ, ಅಂದರೆ ಸಮುದಾಯದಲ್ಲಿ ಸೋಂಕು ಪಸರಿಸುವ ಘಟ್ಟಕ್ಕೆ ಹೋಗದಂತೆ ತಡೆಯುವ ಹೆಜ್ಜೆಗಳನ್ನಿಡುವಲ್ಲಿ ಅಗತ್ಯವಾದ ತಮ್ಮ ಪಾತ್ರವನ್ನು ವಹಿಸುವಲ್ಲಿ ಒಂದಾಗಿದ್ದಾರೆ. ದೇಶದೆಲ್ಲೆಡೆಗಳಲ್ಲಿ, ಪ್ರತಿಯೊಂದು ರಾಜ್ಯದಲ್ಲಿ, ಜನಗಳು ಒಂದಾಗಿ ವರ್ತಿಸಿದ್ದಾರೆ. ನಾವು ಮುಂದೆಯೂ ಜವಾಬ್ದಾರಿಯಿಂದ ವರ್ತಿಸಬೇಕು, ನಮ್ಮ ಕ್ರಿಯೆಗಳು ಇತರರ ಆರೋಗ್ಯ ಮತ್ತು ಬದುಕನ್ನು ಅಪಾಯಕ್ಕೀಡು ಮಾಡಬಾರದು.

ನಮಗೆ ಇನ್ನೊಂದು ಉತ್ತೇಜನಕಾರಿ ಅನುಭವವೆಂದರೆ, ಭಾರತದಾದ್ಯಂತ, ಸಾಧ್ಯವಾದ ಎಲ್ಲ ರೀತಿಗಳಲ್ಲಿ ಸಿಪಿಐ(ಎಂ) ಮತ್ತು ಕಾರ್ಮಿಕ ಸಂಘಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳ ಸ್ವಯಂಸೇವಕರು ಜನಗಳ ಸಂಕಟದ ಕ್ಷಣಗಳಲ್ಲಿ, ಅವರಿಗೆ ನೆರವು ಅತ್ಯಗತ್ಯವಾಗಿರುವ ಸಮಯದಲ್ಲಿ ಅವರ ಬೆಂಬಲಕ್ಕೆ ನಿಲ್ಲಲು ಸಾಧ್ಯವಾದುದನ್ನೆಲ್ಲ ಮಾಡಿದ್ದಾರೆ. ನಮ್ಮ ಸಂಗಾತಿಗಳು ರೇಷನ್‌ಗಳನ್ನು ಹಂಚುತ್ತಿದ್ದಾರೆ, ಅಡುಗೆ ಕೇಂದ್ರಗಳನ್ನು ನಡೆಸುತ್ತಿದ್ದಾರೆ, ಕಷ್ಟದಲ್ಲಿರುವವರಿಗೆ ನೆರವಾಗುತ್ತಿದ್ದಾರೆ. ಕೆಂಬಾವುಟ ಸದಾ ಜನಗಳ ಸೇವೆಯ ಒಂದು ಸಂಕೇತವಾಗಿರಬೇಕು, ಆಗಿದೆ ಕೂಡ. ಜನಗಳಿಗೆ ನೆರವಾಗಲು ನಾವು ಏನು ಮಾಡಿದರೂ, ಅವೆಲ್ಲ ಆಯಾಯ ರಾಜ್ಯದಲ್ಲಿ ರೂಪಿಸಿರುವ ನಿಯಮಾವಳಿಗಳು, ನಿಯಂತ್ರಣಗಳ ಒಳಗೇ ಇರಬೇಕು, ಅಗತ್ಯ ಮುನ್ನೆಚ್ಚರಿಕೆಗಳನ್ನು ವಹಿಸಬೇಕು, ಅಗತ್ಯ ದೈಹಿಕ ಅಂತರಗಳನ್ನು ಪಾಲಿಸಬೇಕು. ದಿಲ್ಲಿ ಮತ್ತಿತರ ಕೆಲವು ಸ್ಥಳಗಳಲ್ಲಿ ಬೇರೆ ಸರಕಾರೇತರ ಸಂಘಟನೆಗಳು ಮತ್ತು ಚಳುವಳಿಗಳು ಕೂಡ ಪರಿಹಾರ ಕೆಲಸಗಳನ್ನು ಮಾಡುತ್ತಿವೆ ಎಂಬುದು ಒಳ್ಳೆಯ ಸಂಗತಿ.

ವಾರದ ನಕಾರಾತ್ಮಕ ಅಂಶ– ಕೇಂದ್ರ ಸರಕಾರದ ಹೊಣೆಗೇಡಿತನ

ಆದರೆ ಕಳೆದ ವಾರದ ನಕಾರಾತ್ಮಕ ಅನುಭವ ಕೇಂದ್ರ ಸರಕಾರ, ನಮ್ಮ ನಾಗರಿಕರಂತೆ ವರ್ತಿಸದೆ ತನ್ನ ಜವಾಬ್ದಾರಿಗಳನ್ನು ನಿಭಾಯಿಸದೇ ಹೋಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಬೇರೆ ದೇಶಗಳೂ ಲಾಕ್‌ಡೌನ್ ಘೋಷಿಸಿವೆ. ಆದರೆ ಮುಂದಿನ ಕಷ್ಟಗಳನ್ನು ಎದುರಿಸಲು ಸಿದ್ಧಗೊಳ್ಳುವ ಜನಗಳ ಹಕ್ಕನ್ನು ಗೌರವಿಸುತ್ತ, ಇಂತಹ ಲಾಕ್‌ಡೌನ್ ಸಾರುವ ಮೊದಲು ಒಂದರಿಂದ ಮೂರು ದಿನಗಳ ಸಮಯಾವಕಾಶ ನೀಡಿವೆ. 130 ಕೋಟಿ ಜನಗಳಿರುವ ಭಾರತದಂತಹ ದೇಶದಲ್ಲಿ ಸರಕಾರ ಕೇವಲ ನಾಲ್ಕು ಗಂಟೆಗಳ ಸಮಯಾವಕಾಶ ನೀಡಿತು. ಏಕೆ? ಇದು ನೋಟುರದ್ಧತಿಯಂತಹ ಗುಟ್ಟಾಗಿ ಇಡಬೇಕಾದ ನಿರ್ಣಯವೇನೂ ಆಗಿರಲಿಲ್ಲ. ಬದಲಾಗಿ ಒಂದು ರಾಷ್ಟ್ರೀಯ ಬೀಗಮುದ್ರೆಗೆ ಸಾರ್ವಜನಿಕರ ಸಂಪೂರ್ಣ ಸಹಕಾರ ಬೇಕಾಗುತ್ತದೆ. ಇದಕ್ಕೆ ಕೊಡಬಹುದಾದ ಏಕೈಕ ವಿವರಣೆ, **ಈ ಸರಕಾರ ಒಂದು ಸರ್ವಾಧಿಕಾರಶಾಹಿ ಆಳ್ವಿಕೆಯ ಮಾದರಿಗೆ ಎಷ್ಟೊಂದು ಬದ್ಧವಾಗಿದೆಯೆಂದರೆ, ರಾಷ್ಟ್ರೀಯ ಹಿತಾಸಕ್ತಿಯಿಂದ ಜನಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬ ಕಲ್ಪನೆಯೂ ಅದಕ್ಕೆ ಬಾರದು.**

ಇನ್ನೊಂದು ಸಂಗತಿಯೆಂದರೆ, ಕೇಂದ್ರ ಸರಕಾರ ಲಾಕ್‌ಡೌನ್‌ನಿಂದ ಉಂಟಾದ ಬಿಕ್ಕಟ್ಟಿನಲ್ಲಿ ಜನರಿಗೆ ನೆರವಾಗುತ್ತೇವೆ ಎಂಬ ಆಶ್ವಾಸನೆಯನ್ನು ಜನಗಳಿಗೆ ಕೊಡುವಲ್ಲಿ ವಿಫಲವಾಗಿದೆ. ಪ್ರಮುಖ ಬಂಡವಾಳಶಾಹಿ ದೇಶಗಳು ಕೂಡ ಲಾಕ್‌ಡೌನ್ ಪ್ರಕಟಿಸುವ ಮೊದಲು ಜನಗಳಲ್ಲಿ ಭೀತಿ ಉಂಟಾಗದಿರಲಿ ಎಂದು ಪರಿಹಾರ ಪ್ಯಾಕೇಜುಗಳನ್ನು ಪ್ರಕಟಿಸಿದವು. ನಿಜ, ಈ ಪ್ಯಾಕೇಜಿನ ಹೆಚ್ಚಿನ ಅಂಶಗಳು ತಥಾಕಥಿತ 'ಆರ್ಥಿಕ ಉತ್ತೇಜನೆ' ಗೆಂದೇ ರೂಪಿಸಿದವುಗಳು. ಇದರ ನಿಜಾರ್ಥ ವ್ಯಾಪಾರಕ್ಕೆ ನೆರವು ಎಂದೇ. ಆದರೂ ಇವುಗಳಲ್ಲಿ ಜನಸಾಮಾನ್ಯರಿಗೆ ನೇರ ನಗದು ವರ್ಗಾವಣೆಗಳೂ ಇದ್ದವು. ಜರ್ಮನಿ ಮತ್ತು ಯು.ಕೆ. ರಿಟ್ರೆಂಚ್‌ಮೆಂಟ್ ಮತ್ತು ಲೇ–ಆಫ್‌ಗಳನ್ನು ತಡೆಯಲು ಖಾಸಗಿ ವಲಯದ ಕಾರ್ಮಿಕರ ಸಂಬಳದ 70ರಿಂದ 80 ಶೇ.ದ ವರೆಗೆ ಸರಕಾರ ಕೊಡುವುದಾಗಿ ಪ್ರಕಟಿಸಿದವು. **ಆದರೆ ಭಾರತದ ಸರಕಾರ ಲಾಕ್‌ಡೌನ್ ಮೊದಲು ಜನಗಳಿಗೆ ನೆರವಾಗುವ ಒಂದೇ ಒಂದು ಕ್ರಮವನ್ನೂ ಪ್ರಕಟಿಸಲಿಲ್ಲ.**

ಮೋದಿ ಸರಕಾರಕ್ಕೆ ಕೋಟ್ಯಂತರ ಭಾರತೀಯರ ಸಾಮಾಜಿಕ–ಆರ್ಥಿಕ ವಾಸ್ತವತೆಗಳ ತುಸುವಾದರೂ ಸುಳಿವೇ ಇಲ್ಲವೇ? ಒಂದು ಲಾಕ್‌ಡೌನ್ ಸಾರಿ, ನಾಲ್ಕು ಗಂಟೆಗಳೊಳಗೇ ಅದನ್ನು ಜಾರಿಗೊಳಿಸಬಹುದು, ಜನಗಳು ಪ್ರಧಾನ ಮಂತ್ರಿಗಳು ಪ್ರತಿ ಮನೆಯ ಎದುರು ಎಳೆದ ಲಕ್ಷ್ಮಣ ರೇಖೆಯ ಒಳಗೇ ಇದ್ದು ಬಿಡಬಹುದು ಎಂದು ಹೇಗೆ ತಾನೇ ಈ ಸರಕಾರ ಯೋಚಿಸಿತು? ಮನೆಯೆಂದರೆ ಏನು? ದಿಲ್ಲಿಯಲ್ಲಿನ ಲಕಾಂತರ ವಲಸೆ ಕಾರ್ಮಿಕರಿಗೆ ಅದು ರಾಜಧಾನಿಯಲ್ಲಿ ಎಲ್ಲೆಡೆ ಇರುವ ಕೊಳೆಗೇರಿಗಳಲ್ಲಿ ಇತರ ತಮ್ಮ ಸಹಯೋಗಿ ವಲಸೆ ಕಾರ್ಮಿಕರೊಂದಿಗೆ ಬಾಡಿಗೆದಾರರಾಗಿ ಹಂಚಿಕೊಳ್ಳಬೇಕಾದ ಕೋಣೆಗಳು, ಅಥವ ತಾವು ಕೆಲಸ ಮಾಡುವ ಕಟ್ಟಡ ಕಟ್ಟುವ ಸ್ಥಳಗಳು ಅಥವ ಸಣ್ಣ ಧಾಬಾಗಳಲ್ಲಿನ ಜಾಗಗಳು ಅಥವ ಬಾಗಿಲೆಳೆದ ಅಂಗಡಿಗಳು ಕೂಡ ಆಗಿರಬಹುದು. ಈ ವಾಸಸ್ಥಳಗಳೆಲ್ಲವೂ ಮುಚ್ಚಿದವೆಂದರೆ ಇವರಿಗೆ **ಬೇರೆ ದಾರಿಯೇ ಇಲ್ಲ, ಹಸಿವಿನ ವಾಸ್ತವಿಕ ಭಯದಿಂದ ಪಾರಾಗಲೆಂದು ಪ್ರಧಾನ ಮಂತ್ರಿಗಳು ಎಳೆದ ಲಕ್ಷ್ಮಣ ರೇಖೆಯನ್ನು ದಾಟಿ ಊರಿನತ್ತ ಹೆಜ್ಜೆ ಹಾಕಲೇ ಬೇಕಾಗಿತ್ತು.**

ಭಾರತವೇ ನಾಚುವಂತಹ ಅಮಾನವೀಯ ವರ್ತನೆ

ದಿಲ್ಲಿಯ ಆರ್ಥಿಕ ಸರ್ವೇಕ್ಷಣೆಯ ಪ್ರಕಾರ ವಲಸೆ ಕಾರ್ಮಿಕರ ಸಂಖ್ಯೆ ಸುಮಾರು 12ಲಕ್ಷ. ಆದರೆ ಇದು ನಿಜಸಂಖ್ಯೆಯೇ ಎಂದು ಯಾರೂ ಖಂಡಿತವಾಗಿ ಹೇಳಲಾರರು. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಸರಿಯಾದ ಸರ್ವೆಯೇ ಆಗಿಲ್ಲ. ಇದು ಬಹಳಷ್ಟು ಹೆಚ್ಚಿರಬಹುದು. ಜನಗಣತಿಯಲ್ಲಿ ಕೂಡ ಸರಿಯಾದ ಅಂದಾಜುಗಳಿಲ್ಲ. ಇಡೀ ರಾಷ್ಟ್ರೀಯ ರಾಜಧಾನಿ ಪ್ರದೇಶವನ್ನು ಗಮನಕ್ಕೆ ತಗೊಂಡರೆ ಇನ್ನೂ ಹತ್ತು ಲಕ್ಷ ಸೇರಿಸಬೇಕಾದೀತು. ಮುಂಬೈಯಲ್ಲಿ ವಲಸೆ ಕಾರ್ಮಿಕರ ಸಂಖ್ಯೆ ಇನ್ನೂ ಹೆಚ್ಚು. ದೇಶದಾದ್ಯಂತ ಅವರಿಗೆ ಸಿಕ್ಕ ಏಕೈಕ ಸಂದೇಶ ಎಂದರೆ ತಾವು ಮನೆಗೆ ಹೋಗಬೇಕಾಗುತ್ತದೆ. ಆದ್ದರಿಂದ ಹೊರಟರು ಕಾಲ್ನಡಿಗೆಯಲ್ಲಿ. ಎರಡೇ ದಿನಗಳಲ್ಲಿ ಹೆದ್ದಾರಿಗಳಲ್ಲೆಲ್ಲಾ ಕೇಂದ್ರ ಸರಕಾರದಿಂದ ಮತ್ತು ಪ್ರಧಾನಿಗಳ ಎರಡು ಪ್ರಸಾರ ಭಾಷಣಗಳಲ್ಲಿ ಯಾವುದೇ ಆಶ್ವಸನೆಗಳಿಲ್ಲದ್ದರಿಂದ ತಮ್ಮೂರ ಮನೆಗಳಲ್ಲಾದರೂ ಸುರಕ್ಷಿತವಾಗಿರಬಹುದೇನೋ ಎಂಬ ಪ್ರಯತ್ನದಲ್ಲಿ ಹೊರಟ ಸಾವಿರ–ಸಾವಿರ ವಲಸೆ ಕಾರ್ಮಿಕರು, ಗಂಡಸರು, ಹೆಂಗಸರು ಮತ್ತು ಮಕ್ಕಳು. **ಸರಕಾರ ಅವರನ್ನು ನೋಡಿಕೊಳ್ಳುತ್ತದೆ ಎಂಬ ಬಗ್ಗೆ ಒಂದೇ ಒಂದು ಮಾತಿಲ್ಲ. ರಾಷ್ಟೀಯ ಟಿವಿಯಲ್ಲಿನ ಹೌಹಾರುವಂತಹ ದೃಶ್ಯಗಳು ಎಲ್ಲ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ವಲಸೆ ಕಾರ್ಮಿಕರ ಬಗ್ಗೆ ತೋರಿದ ಕ್ರೌರ್ಯವನ್ನು ಪ್ರತೀ ಮನೆಗೆ ತಂದವು.**

ಉತ್ತರಪ್ರದೇಶದಲ್ಲಿ ಮಾಡಿದಂತೆ ವಲಸೆ ಕಾರ್ಮಿಕರನ್ನು ಶುಚಿಗೊಳಿಸಲು ರಾಸಾಯನಿಕಗಳ ಸಿಂಪಡಿಕೆ; ಬಿಹಾರಿನಲ್ಲಿ ಕಂಡಂತೆ ಒಂದು ಶೆಡ್‌ನಲ್ಲಿ ಕೂಡಹಾಕಿ ಬೀಗ ಜಡಿದದ್ದು; ಹರ್ಯಾಣದಲ್ಲಿ ಮಾಡಿದಂತೆ ಅವರಿಗಾಗಿ ತಾತ್ಕಾಲಿಕ ಜೈಲುಗಳು; ರಾಷ್ಟ್ರೀಯ ಹೆದ್ದಾರಿಗುಂಟ ಯಾವ ವ್ಯವಸ್ಥೆಗಳೂ ಇಲ್ಲದ ಕ್ವಾರಂಟೈನ್‌ಗಳಲ್ಲಿ ಕೂಡಹಾಕಿದ್ದು; ಹೀಗೆ ತಪ್ಪಿದವರನ್ನು ಜೈಲುಗಳಲ್ಲಿ ಹಾಕಲು ಅನಾಹುತ ನಿರ್ವಹಣೆ ಕಾಯ್ದೆಯ ಶಿಕ್ಷಾ ಕ್ರಮಗಳನ್ನು ಉದ್ಧರಿಸಿದ ಗೃಹ ಮಂತ್ರಾಲಯದ ಒಂದು ಸುತ್ತೋಲೆ.

ಕೆಲಸ ಕಳಕೊಂಡ, ಹಸಿವಿನಿಂದ ನರಳುವ, ತಲೆಯ ಮೇಲೆ ಸೂರಿಲ್ಲದ, ಇದ್ದಕ್ಕಿದಂತೆ ಹಾಕಿದ ಲಾಕ್‌ಡೌನಿನಿಂದಾಗಿ ಬದುಕು ಮೂರಾಬಟ್ಟೆಯಾಗಿ ಹೇಗಾದರೂ ಮನೆ ತಲುಪಲೆಂದು ಹೊರಟ ವಲಸೆ ಕಾರ್ಮಿಕರೊಂದಿಗೆ ಇಂತಹ ಅತ್ಯಂತ ಅಮಾನವೀಯ ವರ್ತನೆ ಭಾರತ ನಾಚಿ ಮುದುರಿಕೊಳ್ಳುವಂತೆ **ಮಾಡಿದೆ. ಹರ್ಯಾಣದಿಂದ ದೀರ್ಘ ನಡಿಗೆಯಿಂದ ಸುಸ್ತಾದ ಒಬ್ಬ ಕಾರ್ಮಿಕ ಉದ್ಗರಿಸಿದ–"ನಮಗೇಕೆ ಗುಂಡಿಕ್ಕುವುದಿಲ್ಲ, ಅಷ್ಟೇ ಈಗ ಉಳಿದಿರೋದು."**

ಈ ಧೋರಣೆಗಳು, ನಿಲುವುಗಳು ಕ್ರಿಮಿನಲ್‌ಗಳಂತೆ ಕಾಣಲಾಗುವ ಲಕ್ಷಾಂತರ ಕಾರ್ಮಿಕರನ್ನಷ್ಟೇ ಬಾಧಿಸುವಂತವುಗಳಲ್ಲ, ಸರಿಯಾದ ಮುನ್ನೆಚ್ಚರಿಕೆಗಳಿಲ್ಲದ್ದರಿಂದ ಕೊರೊನ ವೈರಸ್ ಹರಡುವ ಅಪಾಯವನ್ನೂ ಒಳಗೊಂಡಿರುವಂತವುಗಳು. ಇಂತಹ ಅಮಾನವೀಯ ವರ್ತನೆಗಳನ್ನು ಕಂಡ ನಂತರ ಕಾರ್ಮಿಕರು ಜ್ವರ ಅಥವ ಬೇರೆ ಯಾವುದೇ ಲಕ್ಷಣಗಳಿಂದ ನರಳುತ್ತಿದ್ದರೆ ಅದನ್ನು ತಿಳಿಸುವ ಧೈರ್ಯ ಮಾಡಿಯಾರೇ? ತಪಾಸಣೆಗಳ ಅತೀ ಕಡಿಮೆ ಸಂಖ್ಯೆ ಮತ್ತು ತಪಾಸಣೆ ಬಹಳ ಕಡಿಮೆಯಿರಬೇಕು ಎಂಬ ಸರಕಾರದ ನಿಲುವಿನ ಅರ್ಥವೆಂದರೆ, ಇನ್ನೇನು

ಪುಟ 12 ನೋಡಿ



ಬೆಂಗಳೂರು–ಲಾಕ್‌ಡೌನ್ ಪೀಡಿತರಿಗೆ ನೆರವು



ಕೇರಳದಲ್ಲಿ ಸಾಮೂಹಿಕ ಅಡುಗೆ ಕೇಂದ್ರ

ಒಕ್ಕೂಟ ತತ್ವ ಮತ್ತು ರಾಷ್ಟ್ರೀಯ ಆದಾಯಗಳಲ್ಲಿ ರಾಜ್ಯಗಳಿಗೆ ನ್ಯಾಯಯುತ ಪಾಲು ಒಂದು ಪ್ರಮುಖ ಕುರಿತಾದ ಸಂವಿಧಾನಿಕ ಅಂಶ. ಪ್ರಜಾಪ್ರಭುತ್ವ ಮತ್ತು ಎಲ್ಲ ನಾಗರಿಕರ ಸಮಾನ ಸ್ಥಾನಮಾನ ಇನ್ನೊಂದು ಅಂಶ. ಭಾರತದ ಜನಗಳನ್ನು ಈ ಕೊರೊನ ವೈರಸ್ಸಿನಿಂದ ಕಾಪಾಡುವ ಸಮರದಲ್ಲಿ ಭಾರತದ ಐಕ್ಯತೆ ನಿರ್ಣಾಯಕ. ಇಡೀ ದೇಶವನ್ನು ತಟ್ಟುವ ನಿರ್ಧಾರಗಳನ್ನು ಕೈಗೊಳ್ಳುವಾಗ ಭಾರತ ಸರಕಾರ ನಮ್ಮ ಸಂವಿಧಾನಿಕ ಚೌಕಟ್ಟಿನ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ಸ್ವರೂಪವನ್ನು ಮನಸ್ಸಿನಲಿ ಇಟ್ಟುಕೊಳ್ಳುವುದು ಈ ಐಕ್ಯತೆಯನ್ನು ಬಲಪಡಿಸುತ್ತದೆ.

‘ಕೊರೊನಾ’ ಮತ್ತು ‘ಪಿತೂರಿ’: ಎರಡು ವೈರಸುಗಳ ಜಂಟಿ ದಾಳಿ

ಈ ಪಿತೂರಿ ‘ಸಿದ್ಧಾಂತ’ವನ್ನು ಸುಳ್ಳು ಮಾಹಿತಿಗಳು, ಸುಳ್ಳು ಸುದ್ದಿಗಳು, ಸುಳ್ಳು ಕತೆಗಳು, ಕೃತಕವಾಗಿ ಸೃಷ್ಟಿಸಿದ ದತ್ತಾಂಶಗಳು, ಕಾಲ್ಪನಿಕ ಮೂಲಗಳನ್ನೆಲ್ಲಾ ಬಳಸಿ ಕುಶಲತೆಯಿಂದ ಹೆಣೆದು ಕಟ್ಟಲಾಗಿದೆ ಎಂಬುದು ಸ್ಪಷ್ಟ. ಇಂತಹ ಪಿತೂರಿ ಕತೆಗಳು ಬರಿಯ ಭೋಳೆತನದಿಂದ ಹುಟ್ಟಿದವೇನಲ್ಲ. ಇವು ಉಗ್ರ ಬಲಪಂಥೀಯ ‘ಪ್ರಚಾರ ಉತ್ಪಾದನಾ ಫ್ಯಾಕ್ಟರಿ’ಗಳಲ್ಲಿ ಸೃಷ್ಟಿಯಾದವು. ಅವಕ್ಕೆ ಸ್ಪಷ್ಟವಾದ ಅಜೆಂಡಾ ಮತ್ತು ಗುರಿಗಳಿವೆ. ಅಮೆರಿಕದ ಟ್ರಂಪ್ ಆಡಳಿತ ಮತ್ತು ಆಳುವ ರಿಪಬ್ಲಿಕನ್ ಪಕ್ಷಕ್ಕೆ, ಆಳುವ ವಲಯಗಳಿಗೆ, ಪ್ರತಿಷ್ಟಿತರಿಗೆ, ಯುರೋಪಿನ ಬಂಡವಾಳಶಾಹಿ ಪಕ್ಷ/ಶಕ್ತಿಗಳಿಗೂ, ಜಾಗತಿಕ ನವ-ಉದಾರವಾದಿ ಬಂಡವಾಳಶಾಹಿಗೂ ಮತ್ತು ಅದರ ಬಾಲಬಡುಕ ಬೆಂಬಲಿಗರಿಗೂ ಅವರದೇ ಆದ ಕಾರಣಗಳಿಗೆ ಒಂದು ‘ಬಲಿಪಶು’ ಬೇಕು. ಇವರೆಲ್ಲರ ಭೀಕರ ಅಮಾನವೀಯ ಮುಖವನ್ನು ಕೊವಿದ್-19 ಹಿಂದೆಂದೂ ಕಾಣದ ರೀತಿಯಲ್ಲಿ ಬಯಲಿಗೆಳೆದಿದೆ. ಇವರೆಲ್ಲರಿಗೆ ಈ ‘ಚೀನೀ ಪಿತೂರಿ ಸಿದ್ಧಾಂತ’ ವರದಾನವಾಗಿದೆ. ಆದ್ದರಿಂದ ಇದು ಜಾಗತಿಕವಾಗಿ ಇಷ್ಟು ವ್ಯಾಪಕವಾಗಿ ಹರಡಿದೆ.

ಭಾರತದಲ್ಲೂ ಕೊರೊನಾ ಬಿಕ್ಕಟ್ಟನ್ನು ನಿಭಾಯಿಸುವುದರಲ್ಲಿ ಮೋದಿ ಸರಕಾರ ತೋರಿರುವ ಬೇಜವಾಬ್ದಾರಿ, ನಿರ್ಲಕ್ಷ, ಅದಕ್ಷತೆ, ಅಮಾನವೀಯತೆ ಗಳನ್ನು ಮುಚ್ಚಿಕೊಂಡು ಜನರ ಗಮನ ಬೇರೆಡೆ ಸೆಳೆಯಲು ಸಹ ಈ ‘ಪಿತೂರಿ ಸಿದ್ಧಾಂತ’ ಬಹಳ ಆಪ್ಯಾಯಮಾನವಾಗಿದೆ. ಪಾಕಿಸ್ತಾನದ ವಿರುದ್ಧ ದ್ವೇಷ ಪ್ರಚಾರ ಮಾಡಿ ಬೋರಾಗಿರುವ ಸಂಘ ಪರಿವಾರದ ‘ಪ್ರಚಾರ ಉತ್ಪಾದನಾ ಫ್ಯಾಕ್ಟರಿ’ಗಳು, ಚೀನಾ-ದ್ವೇಷ ಹರಡುವ ಈ ‘ಅಮೆರಿಕನ್ ವೈರಸ್’ನ್ನು ತಮ್ಮದೇ ‘ಭಾರತೀಯ ಮಸಾಲೆ’ಗಳೊಂದಿಗೆ ಅತ್ಯುತ್ಸಾಹದಿಂದ ಹರಡುತ್ತಿರುವುದು ಆಶ್ಚರ್ಯವೇನಲ್ಲ.

–ಸುರೇಶ ಕೂಡೂರು ಭಾವಾನುವಾದ : ವಸಂತರಾಜ ಎನ್.ಕೆ

ಈಗ ನಾವು ಎರಡು ಮಾರಣಾಂತಿಕ ವೈರಸುಗಳ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಒಂದು ಎಲ್ಲರಿಗೂ ಗೊತ್ತಿರುವ ಕೊರೊನಾ ವೈರಸ್. ಇನ್ನೊಂದು ಇನ್ನೂ ಹೆಚ್ಚಿನ ವಿಷಕಾರುವ ವಿಕೃತ ‘ಪಿತೂರಿ’ ವೈರಸ್. ಮೊದಲನೆಯದರ ತಡೆಗೆ ನಾವು ವ್ಯಾಕ್ಸೀನ್, ಪರಿಹಾರಕ್ಕೆ ಔಷಧಿ ಕಂಡುಹಿಡಿಯಬಹುದು. ಆದರೆ ಈ ಎರಡನೆಯ ವೈರಸಿನ ತಡೆ ಅಥವಾ ಪರಿಹಾರ ಸಾಧ್ಯವೇ ಇಲ್ಲವೇನೋ?!. ಏಕೆಂದರೆ ಅದು ಸತತವಾಗಿ ರೂಪಾಂತರಗೊಳ್ಳುತ್ತಿರುತ್ತದೆ! ಅದರ “"ಸುಳ್ಳಿನ ಡಿ.ಎನ್.ಎ" ಎಂತಹುದೇ ‘ಸತ್ಯ’ದ ವ್ಯಾಕ್ಸೀನ್ ಹಿಡಿತಕ್ಕೆ ಸಿಗದೆ ತಪ್ಪಿಸಿಕೊಳ್ಳುತ್ತಿರುತ್ತದೆ!!

ಪಿತೂರಿ ಸಿದ್ಧಾಂತ

ವಿಶ್ವ ಆರೋಗ್ಯ ಸಂಸ್ಥೆ ಈ ಸಾಂಕ್ರಾಮಿಕ ರೋಗವನ್ನು ಕೊವಿದ್-19 (Corona Virus Disease-2019 : ಕೊರೊನಾ ವೈರಸ್ ರೋಗ-2019) ಎಂದೂ ವೈರಸನ್ನು SARS-Cov-2 (Severe Acute Respiratory Syndrome Corona Virus 2) ಎಂದೂ ಅಧಿಕೃತವಾಗಿ ಕರೆದಿದೆ. ಆದರೆ ಅಮೆರಿಕದ ಅಧ್ಯಕ್ಷ ಟ್ರಂಪ್ (ಇದು ಜನಾಂಗ-ನಿಂದನೆಯ ಧೋರಣೆ ಎಂದು ಅಮೆರಿಕದೊಳಗೇನೇ ಹಲವು ಟೀಕೆಗಳ ನಂತರ ಈಗ ಬಿಟ್ಟಿದ್ದರೂ) ಸೇರಿದಂತೆ ಹಲವರು ಅದನ್ನು ‘ಚೀನಿ’ ಅಥವಾ ‘ವೂಹಾನ್’ ವೈರಸ್ ಎಂದು ಕರೆಯುತ್ತಿದ್ದಾರೆ. ಇದರೊಂದಿಗೆ ಈ ವೈರಸ್ ನ ಮೂಲದ ಕುರಿತು ಹಲವು ‘ಪಿತೂರಿ ಸಿದ್ಧಾಂತ’ಗಳು ಹುಟ್ಟಿಕೊಂಡು ವೈರಸಿಗಿಂತ ವೇಗವಾಗಿ ಹರಡುತ್ತಿವೆ.




ಇಂತಹ ಪಿತೂರಿ ‘ಸಿದ್ಧಾಂತ’ಗಳಲ್ಲಿ ಒಂದು ಹೀಗಿದೆ: ಜಾಗತಿಕ ಶೇರು ಮಾರುಕಟ್ಟೆಗಳು ಕುಸಿಯುವಂತೆ ಮಾಡಲು ಚೀನಾ ಕೊರೊನಾ ವೈರಸನ್ನು ಪ್ರಯೋಗಶಾಲೆಯಲ್ಲಿ ಕೃತಕವಾಗಿ ತಯಾರಿಸಿ ಸ್ವದೇಶದಲ್ಲೂ ಜಾಗತಿಕವಾಗಿಯೂ ಬೇಕೆಂತಲೇ ಹರಿಯಬಿಟ್ಟಿದೆ. ಇದಕ್ಕೆ ಮೊದಲೇ ಚೀನಾ ವ್ಯಾಕ್ಸೀನ್ ತಯಾರಿಸಿ ಇಟ್ಟುಕೊಂಡಿದೆ. ಅದು ನಿಜವೆಂದು ಎಲ್ಲರನ್ನು ನಂಬಿಸಲು ಚೀನಾದ ವೂಹಾನ್ ನಲ್ಲಿ ಕೆಲವು ವಾರಗಳ ಕಾಲ ಸಾವು-ನೋವು ಉಂಟು ಮಾಡಲು ಬಿಟ್ಟು ಆ ಮೇಲೆ ವ್ಯಾಕ್ಸೀನ್ ಬಳಸಿ ನಿಯಂತ್ರಣಕ್ಕೆ ತಂದಿದೆ. ತಾನು ಎಷ್ಟು ದಕ್ಷ ಎಂದು ತೋರಿಸಲು ಸಹ ಇದನ್ನು ಬಳಸಿದೆ. ಇಂತಹ ಕುಸಿತವಾದಾಗ ಚೀನಾ ಅಮೆರಿಕನ್ ಕಂಪನಿಗಳ ಶೇರುಗಳನ್ನು ಚೀನಾ ಕೊಂಡುಕೊಂಡಿದೆ. ಅಮೆರಿಕ ಮತ್ತು ಯುರೋಪಿನ ಆರ್ಥಿಕಗಳನ್ನು ಹಾಳುಗೆಡವಿ ಜಾಗತಿಕ ಅಧಿಪತ್ಯ ಸಾಧಿಸಲು ಹೊರಟಿದೆ.

ಈ ‘ಪಿತೂರಿ ಸಿದ್ಧಾಂತ’ವು ಕಳೆದ ವರ್ಷದಿಂದಲೇ ಆಗಾಗ ವಿಕೋಪಕ್ಕೆ ಹೋಗುತ್ತಿರುವ ಅಮೆರಿಕ-ಚೀನಾ ವಾಣಿಜ್ಯ ಸಂಘರ್ಷದ ಹಿನ್ನೆಲೆಯಲ್ಲಿ ಹುಟ್ಟಿದೆ. ಇದು ಅಮೆರಿಕದಲ್ಲಿ ಹುಟ್ಟಿ ಅಲ್ಲಿ ವ್ಯಾಪಕವಾಗಿ ಪ್ರಸಾರಗೊಳ್ಳುತ್ತಿದೆ. ಈಗ ಜಗತ್ತಿಗೆಲ್ಲ ಹರಡುತ್ತಿದೆ. ಇದನ್ನು ‘ಅಮೆರಿಕನ್ ವೈರಸ್’ ಎಂದು ಕರೆಯಬಹುದೇನೋ. ಕೊರೊನಾ ವೈರಸ್ ಹಿಂದೆನೇ ಅದು ಭಾರತಕ್ಕೆ ಕಾಲಿಟ್ಟಿದೆ. ಈಗ ಭಾರತ ಈ ಎರಡು - “ಚೀನೀ’ ಮತ್ತು ‘ಅಮೆರಿಕನ್’ - ವೈರಸ್ ಗಳ ಜಂಟಿ ದಾಳಿ ಎದುರಿಸಬೇಕಾಗಿದೆ!

ಈಗ ಈ ‘ಪಿತೂರಿ ಸಿದ್ಧಾಂತದ ಒಂದೊಂದೇ ಹೇಳಿಕೆಗಳ ಸತ್ಯಾಸತ್ಯತೆಯನ್ನು ನೋಡುತ್ತಾ ಹೋಗೋಣ.

ಇದು ಕೃತಕ ವೈರಸ್ಸೇ?

ಈ ಪಿತೂರಿ ಸಿದ್ಧಾಂತದ ಪ್ರಕಾರ SARS-Cov-2 ಚೀನಾದ ಜೈವಿಕ ಅಸ್ತ್ರಗಳ ಪ್ರಯೋಗ ಶಾಲೆಯಲ್ಲಿ ಜೆನೆಟಿಕ್ ಇಂಜಿನೀಯರಿಂಗ್ ಮೂಲಕ ಕೃತಕವಾಗಿ ತಯಾರಿಸಲಾದ ವೈರಸ್. ಇದಕ್ಕೆ ಈ ಸಿದ್ಧಾಂತದ ‘ಅನಾಮಿಕ’ ಪ್ರತಿಪಾದಕರು ಯಾವುದೇ ನೇರ ಪುರಾವೆ ಕೊಟ್ಟಿಲ್ಲ. ಜಗತ್ತಿನಾದ್ಯಂತ ವಿಜ್ಞಾನಿಗಳು ಈ ವೈರಸಿನ ಮೂಲ ಯಾವುದು ಎಂಬುದರ ಸಂಶೋಧನೆಯಲ್ಲಿ ತೊಡಗಿದ್ದಾರೆ, ಈ ಪಿತೂರಿ ಸಿದ್ಧಾಂತದ ಸತ್ಯಾಸತ್ಯತೆ ತಿಳಿದುಕೊಳ್ಳಲು ಅಲ್ಲ. ಬದಲಾಗಿ ಯಾವುದೇ ವೈರಸಿಗೆ ಪರಿಣಾಮಕಾರಿ ವ್ಯಾಕ್ಸೀನ್ ಅಭಿವೃದ್ಧಿಪಡಿಸಲು ವೈರಸಿನ ಮೂಲ ಹುಡುಕುವುದು ಅಗತ್ಯವಾದ್ದರಿಂದ. ವಿಜ್ಞಾನಿಗಳ ಸಂಶೋಧನೆಯ ಪ್ರಕಾರ ಇದು ನೈಸರ್ಗಿಕವಾಗಿ ವಿಕಾಸಗೊಂಡು ಹಲವು ರೂಪಾಂತರ ಮೂಲಕ ಕಾಡುಪ್ರಾಣಿಗಳಿಂದ ಮಾನವನಿಗೆ ಹರಡಿದ ವೈರಸ್. ಇದು ಪ್ರಯೋಗಶಾಲೆಯಲ್ಲಿ ತಯಾರಿಸಲಾದ ಕೃತಕ ವೈರಸ್ ಅಲ್ಲವೆಂದಿದ್ದಾರೆ. ಇದನ್ನು ಸ್ಪಷ್ಟವಾಗಿ ಮಾರ್ಚ್ 17 ರಲ್ಲಿ ‘ನೇಚರ್ ಮೆಡಿಸಿನ್’ ಎಂಬ ಪ್ರತಿಷ್ಠಿತ ವೈಜ್ಞಾನಿಕ ಜರ್ನಲ್ ನಲ್ಲಿ ಪ್ರಕಟವಾದ ವೈಜ್ಞಾನಿಕ ಪ್ರಬಂಧದಲ್ಲಿ ಹೇಳಲಾಗಿದೆ. ಈ ಸಂಶೋಧನೆ ಮಾಡಿದವರು ಚೀನಾದ ವಿಜ್ಞಾನಿಗಳಲ್ಲ! ಅಮೆರಿಕದ ಕ್ಯಾಲಿಫೋರ್ನಿಯದ ಸ್ಕ್ರಿಪ್ಸ್ ರಿಸರ್ಚ್ ಇನ್ಸ್ಟಿಟ್ಯೂಟ್ ನ ಕ್ರಿಶ್ಚಿಯನ್ ಜಿ. ಆಂಡರ್ಸನ್ ಎಂಬ ವಿಜ್ಞಾನಿಯ ನಾಯಕತ್ವದ ಮತ್ತು ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಗಳ ವಿವಿಧ ಸಂಶೋಧನಾ ಸಂಸ್ಥೆಗಳ ಐದು ವಿಜ್ಞಾನಿಗಳ ತಂಡ. ಈ ಪ್ರಬಂಧವನ್ನು ಯಾರು ಬೇಕಾದರೂ ವೆಬ್ ನಿಂದ ಈ ಕೆಳಗಿನ ಕೊಂಡಿಯಲ್ಲಿ ಓದಬಹುದು ಅಥವಾ ಡೌನ್ ಲೋಡ್ ಮಾಡಿಕೊಳ್ಳಬಹುದು. https://www.nature.com/articles/s41591-020-0820-9


correspondence

The proximal origin of SARS-CoV-2

To the Editor — Since the first reports of novel pneumonia (COVID-19) in Wuhan, Hubei province, China, there has been considerable discussion on the origin of

While the analyses above suggest that SARS-CoV-2 may bind human ACE2 with high affinity, computational analyses predict that the interaction is not ideal and that

low-pathogenicity avian influenza viruses into highly pathogenic forms. The acquisition of polybasic cleavage sites by HA has also been observed after repeated

have an RBD that binds with high affinity to ACE2 from humans, ferrets, cats and other species with high receptor homology.

of the coronavirus spike protein. Acquisition of polybasic cleavage sites in HA, by insertion or recombination, converts


contain coronaviruses similar to SARS-CoV-2. Although the RaTG13 bat virus remains the closest to SARS-CoV-2 across the

NATURE MEDICINE | www.nature.com/naturemedicine

ಇದನ್ನು ಅವರು ಹೇಗೆ ಹೇಳುತ್ತಾರೆ? ಈ ವೈರಸ್ ಹಲವು ವಿಲಕ್ಷಣ ಗುಣಲಕ್ಷಣಗಳನ್ನು ಹೊಂದಿದೆ. ಇದು ಈವರೆಗೆ ಗೊತ್ತಿರುವ ಯಾವುದೇ ವೈರಸಿನ ಜೆನೆಟಿಕ್ ಸಂರಚನೆಯಂತೆ ಇಲ್ಲವೇ ಇಲ್ಲ. ಇವತ್ತಿನ ಜೈವಿಕ ತಂತ್ರಜ್ಞಾನದಲ್ಲಿ ಪರಿಣತಿ ಇರುವುದು, ಜೈವಿಕ ಅಸ್ತ್ರ ಅಥವಾ ಇತರ ಸಂಶೋಧನೆಗಳಲ್ಲಿ ಈಗಾಗಲೇ ಗೊತ್ತಿರುವ ವೈರಸನ್ನು ಆಧಾರವಾಗಿಟ್ಟುಕೊಂಡು ಕೆಲವು ಸಣ್ಣ ಬದಲಾವಣೆಗಳನ್ನು ಮಾಡಿ ಉದ್ದೇಶಿತ ಗುಣಲಕ್ಷಣ ಪಡೆಯಲು ಪ್ರಯೋಗಗಳನ್ನು ಮಾಡಲು ಮಾತ್ರ. ಆದ್ದರಿಂದ ಇದು ನೈಸರ್ಗಿಕ ವೈರಸಿನ ಅಥವಾ ವೈರಸುಗಳ ನೈಸರ್ಗಿಕ ರೂಪಾಂತರದಿಂದಷ್ಟೇ ಬಂದಿರಲು ಸಾಧ್ಯ. ಅರಣ್ಯ ಪ್ರದೇಶಗಳಲ್ಲಿರುವ ಪ್ಯಾಂಗೋಲಿನ್ ಮತ್ತು ಬಾವಲಿಗಳಲ್ಲಿ ಮಾತ್ರ ಇರುವ ವೈರಸಿಗೆ ಇದರ ಕೆಲವು ಸಾಮ್ಯತೆಗಳು ಸಹ ಇದು ನೈಸರ್ಗಿಕ ಮೂಲದ್ದು ಎಂಬುದನ್ನು ದೃಢಪಡಿಸುತ್ತದೆ. ಬಹುಶಃ ಇದು ಈ ವೈರಸುಗಳ ಸಂಯೋಗದಿಂದ ಹುಟ್ಟಿದ ವೈರಸ್. ಆದ್ದರಿಂದ ಇದು ಮಾನವ ನಿರ್ಮಿತ ಕೃತಕ ವೈರಸ್ ಎಂಬುದಕ್ಕೆ ಆಧಾರವಿಲ್ಲ, ಎಂದು ಈ ವಿಜ್ಞಾನಿಗಳ ತಂಡ ಖಚಿತವಾಗಿ ಅಭಿಪ್ರಾಯ ಪಟ್ಟಿದೆ.

ಹೀಗೆ ಈ ‘ಪಿತೂರಿ ಸಿದ್ಧಾಂತ’ದ ಮುಖ್ಯ ಆಧಾರ ಸ್ತಂಭವಾದ ಕೊರೊನಾ ವೈರಸ್ ಚೀನಾ ಸರಕಾರ ಕೃತಕವಾಗಿ ತಯಾರಿಸಿದ್ದು ಎಂಬ ಆಪಾದನೆ ಕುಸಿದು

ಪುಟ 10 ಕ್ಕೆ



ಪುಟ 10 ಕ್ಕೆ

‘ಕೊರೊನಾ’ ಮತ್ತು ‘ಪಿತೂರಿ’..........

ಪುಟ 9 ರಿಂದ

ಬೀಳುತ್ತದೆ. ಅದರ ಜತೆಗೆ ಈ ಸಿದ್ಧಾಂತ ಸಹ. ಆದರೂ ಈ ಸಿದ್ಧಾಂತದ ಇನ್ನೂ ಕೆಲವು ಮುಖ್ಯ ಅಂಶಗಳ ಸತ್ಯಾಸತ್ಯತೆಯನ್ನೂ ಪರಿಶೀಲಿಸೋಣ.

ಅಮೆರಿಕನ್ ಕಂಪನಿಗಳ ಶೇರುಗಳನ್ನು ಚೀನಾ ಖರೀದಿಸಿತೇ?

ಈ ಸಿದ್ಧಾಂತದ ಪ್ರಕಾರ ಅಮೆರಿಕದ ಕಂಪನಿಗಳ ಶೇರುಗಳನ್ನು ಖರೀದಿಸುವುದು ಈ ‘ಪಿತೂರಿ’ ಯ ಪ್ರಮುಖ ಉದ್ದೇಶ. ಅಮೆರಿಕದ ಕಂಪನಿಗಳ ಶೇರುಗಳ ಬೆಲೆಯಲ್ಲಿ ಕುಸಿತ ತಂದು ಅವನ್ನು ಖರೀದಿಸುವುದು ಎಂಬುದು ಈ ಸಿದ್ಧಾಂತದ ಇನ್ನೊಂದು ಪ್ರಮುಖ ಅಂಶ. ಇದಕ್ಕೂ ಇದರ ಅನಾಮಿಕ ಸೃಷ್ಟಿಕರ್ತರು ಯಾವುದೇ ಪುರಾವೆ ಒದಗಿಸಿಲ್ಲ ಎಂಬುದು ಅನಿರೀಕ್ಷಿತವೇನಲ್ಲ. ಚೀನಾದ ಹೂಡಿಕೆದಾರರು ಅಮೆರಿಕನ್ ಕಂಪನಿಯ ಶೇರುಗಳನ್ನು ದೊಡ್ಡ ಸಂಖ್ಯೆಯಲ್ಲಿ ಖರೀದಿಸಿದ ಯಾವುದೇ ವರದಿಗಳು ಲಕ್ಷಣಗಳೂ ಇಲ್ಲ. ಅಮೆರಿಕದ ಕಂಪನಿಗಳ ಶೇರು ಬೆಲೆ ಕುಸಿದದ್ದು ನಿಜ. ಅಮೆರಿಕನ್ ಮಾತ್ರವಲ್ಲ ಚೀನಾ ಸೇರಿದಂತೆ ಪ್ರಮುಖ ಕಂಪನಿಗಳ ಶೇರು ಬೆಲೆಗಳು ಸಹ ಕುಸಿದಿವೆ. ವಾಸ್ತವವಾಗಿ ಅಮೆರಿಕದ ಕಂಪನಿಗಳ ಶೇರುಗಳ ಖರೀದಿಯೇ ಹೆಚ್ಚು ಕಡಿಮೆ ನಿಂತು ಹೋಗಿದೆ. ಯಾಕೆಂದರೆ ಜಾಗತಿಕ ಕೊರೊನಾ ವೈರಸ್ ಪರಿಣಾಮವಾಗಿ ಅಮೆರಿಕದ ಮತ್ತು ಜಾಗತಿಕ ಆರ್ಥಿಕ ಚಟುವಟಿಕೆ ವ್ಯಾಪಾರಗಳು ಸ್ತಬ್ಧವಾಗಿದೆ. ಅಮೆರಿಕನ್ ಕಂಪನಿಗಳ ವಹಿವಾಟು ಮತ್ತು ಲಾಭಗಳ ಮೇಲೆ ಇದರ ದೀರ್ಘಕಾಲೀನ ದುಷ್ಪರಿಣಾಮದ ನಿರೀಕ್ಷೆಯಲ್ಲಿ ಅವುಗಳ ಶೇರುಗಳ ಖರೀದಿ ನಿಂತಿದೆ. ಅಮೆರಿಕದ ಅಧ್ಯಕ್ಷ ಟ್ರಂಪ್ ಕೊರೊನಾ ವೈರಸ್ ಕುರಿತು ತೋರಿದ ನಿರ್ಲಕ್ಷ, ಮತ್ತು ಅದರ ಪರಿಣಾಮವಾಗಿ ನ್ಯೂಯಾರ್ಕ್, ಕ್ಯಾಲಿಫೋರ್ನಿಯ ದಂತಹ ಆರ್ಥಿಕ ವಹಿವಾಟಿನ ಕೇಂದ್ರಗಳಲ್ಲಿ ವ್ಯಾಪಕ ಸಾವು–ನೋವು ಆಗಿದ್ದು ಅಮೆರಿಕದ ಶೇರು ಮಾರುಕಟ್ಟೆ ಕುಸಿಯುವುದಕ್ಕೆ ಮುಖ್ಯ ಕಾರಣವಾಗಿದೆ. ಮಾತ್ರವಲ್ಲ, ಚೀನಾದ ಸುಮಾರು 1200 ಶತಕೋಟಿ ಡಾಲರುಗಳಷ್ಟು ಬೆಲೆಬಾಳುವ 150 ಚೀನಿ ಕಂಪನಿಗಳು ಸಹ ಅಮೆರಿಕದ ಶೇರು ಮಾರುಕಟ್ಟೆಗಳಲ್ಲಿ ಇದ್ದು ಅವುಗಳು ಸಹ ಕುಸಿತದ ಪರಿಣಾಮ ಅನುಭವಿಸಿವೆ. ವಾಸ್ತವವಾಗಿ ಅಮೆರಿಕನ್ ಮಾಧ್ಯಮದಲ್ಲಿ ಬರುತ್ತಿರುವ ವರದಿಗಳ ಪ್ರಕಾರ, ಈ ‘ಸಿದ್ಧಾಂತ’ಕ್ಕೆ ಪ್ರತಿಯಾಗಿ, ಅಮೆರಿಕದ ಹೂಡಿಕೆದಾರರು ಚೀನಾದಲ್ಲಿರುವ ಚೀನಾದ ಕಂಪನಿಗಳಲ್ಲಿ ಹೂಡಿಕೆ ಮಾಡಲು ಮುಗಿ ಬೀಳುತ್ತಿದ್ದಾರೆ. ಅಮೆರಿಕನ್ ಸರಕಾರ ಅದನ್ನು ತಡೆಯಲು ಕಾನೂನು ಮತ್ತಿತರ ಕ್ರಮಗಳಿಂದ ಹರಸಾಹಸ ಪಡುತ್ತಿದೆ ಎಂದು ವರದಿಯಾಗಿದೆ. ಚೀನಾ ಕೊರೊನಾ ಬಿಕ್ಕಟ್ಟು ಆರಂಭವಾಗುವುದರ ಮೊದಲೇ ಇಂತಹ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿತ್ತು. ಚೀನಾ ಕಂಪನಿಗಳು ಅಮೆರಿಕದ ಶೇರು ಮಾರುಕಟ್ಟೆಗಳಿಂದ ತೆಗೆದು ಹಾಕುವುದಕ್ಕೆ ಸಹ ತಯಾರಿ ನಡೆದಿದೆ ಎಂದು ವರದಿಯಾಗಿದೆ. ಹೀಗೆ ಈ ‘ಪಿತೂರಿ’ ಸಾಧಿಸಬೇಕಾಗಿದ್ದ ಮುಖ್ಯ ಉದ್ದೇಶ ಎನ್ನಲಾಗಿದ್ದ ಅಂಶ ಸಹ ಆಧಾರರಹಿತ ಎಂಬುದು ಸಿದ್ಧವಾಗುತ್ತದೆ.

ಈ ‘ಪಿತೂರಿ’ ಸಿದ್ಧಾಂತಿಗಳು ಚೀನಾದ ಶೇರು ಮಾರುಕಟ್ಟೆ ಅಷ್ಟೇನು ಕುಸಿತ ಕಂಡಿಲ್ಲ ಎಂಬುದು ಸಹ ತಮ್ಮ ‘ಸಿದ್ಧಾಂತ’ಕ್ಕೆ ‘ಪುರಾವೆ’ ಎನ್ನುತ್ತಾರೆ. ಚೀನಾದ ಶೇರು ಮಾರುಕಟ್ಟೆಯ ಮುಖ್ಯ ಸೂಚಕವಾದ ಶಾಂಘಾಯ್ ಸಂಯುಕ್ತ ಸೂಚ್ಯಂಕ ಕೊರೊನಾ ಬಿಕ್ಕಟ್ಟು ಶುರುವಾಗುವ ಮೊದಲು ಜನವರಿ 13ರಂದು 3115 ಇದ್ದು, ನಂತರ ಫೆಬ್ರುವರಿ 3 ರ ಹೊತ್ತಿಗೆ 2746ಕ್ಕೆ ಕುಸಿದಿತ್ತು. ಆದರೆ ಈಗಲೂ ಮಾರ್ಚ್ ಕೊನೆಯ ಹೊತ್ತಿಗೂ ಅದು ಸುಮಾರು ಅದೇ ಮಟ್ಟದಲ್ಲಿದೆ. ಇದಕ್ಕೆ ಕಾರಣ ಚೀನಾ ಸರಕಾರ ಕೊರೊನಾ ವೈರಸ್ ವಿರುದ್ಧ ನಿರ್ಣಾಯಕ ಕ್ರಮಗಳನ್ನು ತೆಗೆದುಕೊಂಡು ಅದನ್ನು ತಡೆಯಲು ಸಾಧ್ಯವಾಗಿದ್ದು ಮತ್ತು ಚೀನಾದ ಆರ್ಥಿಕ ಪುನಶ್ಚೇತನಕ್ಕೆ ಘೋಷಿಸಿದ 174 ಶತಕೋಟಿ ಡಾಲರ್ ಆರ್ಥಿಕ ಪ್ಯಾಕೇಜ್. ಚೀನಾದ ಶೇರು ಮಾರುಕಟ್ಟೆ ಕುಸಿತ ಕಂಡಿಲ್ಲ ಎಂಬುದು ನಿಜವಲ್ಲ. ಆದರೆ ಚೀನಾದ ದೃಢ ಕ್ರಮಗಳಿಂದ ಅದು ಪೂರ್ಣವಾಗಿ ಕುಸಿಯದಂತೆ ತಡೆಯುವುದು ಸಾಧ್ಯವಾಗಿದೆ. ಇದು ವಾಸ್ತವ, ಇದು ‘ಪಿತೂರಿ’ಗೆ ಹೇಗೆ ‘ಪುರಾವೆ’ ಹೇಗಾಗುತ್ತದೆ ಎಂದು ಈ ಅನಾಮಿಕರನ್ನೇ ಕೇಳಬೇಕು!

ಚೀನಾದ ಬಳಿ ವ್ಯಾಕ್ಸೀನ್ ಇದೆಯೇ?

ಈ ‘ಪಿತೂರಿ’ ಸಿದ್ಧಾಂತಿಗಳ ಇನ್ನೊಂದು ಅಂಶ ಚೀನಾದ ಬಳಿ ಮೊದಲೇ ವ್ಯಾಕ್ಸೀನ್ ಇದ್ದಿದ್ದರಿಂದ ಅದನ್ನು ಇಷ್ಟು ವೇಗವಾಗಿ ತಡೆಯುವುದು ಸಾಧ್ಯವಾಯಿತು. ಇದಕ್ಕೂ ಅವರು ಯಾವುದೇ ಪುರಾವೆ ನೀಡಿಲ್ಲ. ಕೊರೊನಾ ಬಿಕ್ಕಟ್ಟು ಜಾಗತಿಕ ಪಿಡುಗು ಆದಂದಿನಿಂದ ಚೀನಾ ಸರಕಾರ ವಿಶ್ವ ಆರೋಗ್ಯ ಸಂಸ್ಥೆ ಮುಂತಾದ ಜಾಗತಿಕ ಸಂಘಟನೆಗಳ ಜತೆ ಪೂರ್ಣ ಸಹಕಾರ ಕೊಟ್ಟಿದೆ. ವಿಶ್ವ ಆರೋಗ್ಯ ಸಂಸ್ಥೆಗೂ ಇಂತಹ ವ್ಯಾಕ್ಸೀನ್ ಬಗ್ಗೆ ಯಾವುದೇ ಸುಳಿವಿಲ್ಲ. ಆದರೆ ‘ಚೀನಾ ಪಿತೂರಿ’ ಸಿದ್ಧಾಂತಿಗಳಿಗೆ ಮಾತ್ರ ಇದರ ಸುದ್ದಿ ಗೊತ್ತಾಗಿದೆ. ಬೇಜಿಂಗ್ ನಲ್ಲಿ ಹೆಚ್ಚಿನ ಸಾವು–ನೋವು ಆಗದಿರುವುದು ಇನ್ನೊಂದು ‘ಪುರಾವೆ’ ಎನ್ನುತ್ತಾರೆ ಇವರು. ಚೀನಾದಲ್ಲಿ ಈ ಕೊರೊನಾ ಸಾಂಕ್ರಾಮಿಕ ವೂಹಾನ್ ನಲ್ಲಿ ಮೊದಲು ಕಾಣಿಸಿಕೊಂಡಿದ್ದು ಆ ನಗರದಲ್ಲಿ ಮತ್ತು ಹುಬೆ ಪ್ರಾಂತ್ಯದ ಇತರೆಡೆ ಹರಡಿತ್ತು. ಚೀನಾ ಸರಕಾರ ವೂಹಾನ್ ಮತ್ತು ಹುಬೆ ಪ್ರಾಂತ್ಯದಲ್ಲಿ ಕಟ್ಟುನಿಟ್ಟಿನ ಲಾಕ್ ಡೌನ್ ಮತ್ತು ಇತರ ಹಲವು ಕ್ರಮಗಳನ್ನು ಕೈಗೊಂಡದ್ದರಿಂದ ಬೇಜಿಂಗ್ ಸೇರಿದಂತೆ ಚೀನಾದ ಇತರ ಪ್ರದೇಶಗಳಿಗೆ ಹರಡುವುದನ್ನು ತಡೆಯುವಲ್ಲಿ ಯಶಸ್ವಿಯಾಗಿದೆ ಎಂಬುದು ವಾಸ್ತವ. ಚೀನಾ ಕೊರೊನಾ ಬಿಕ್ಕಟ್ಟನ್ನು ನಿಭಾಯಿಸಿದ ರೀತಿ, ಅದರಲ್ಲೂ ಇಡೀ ದೇಶವನ್ನು ಲಾಕ್ ಡೌನ್ ಮಾಡದೆ ಇದನ್ನು ಸಾಧಿಸಿತು ಎಂದು ವಿಶ್ವ ಆರೋಗ್ಯ ಸಂಸ್ಥೆ ಮೆಚ್ಚಿಕೊಂಡಿದೆ. ಚೀನಾಕ್ಕೆ ಹತ್ತಿರವಿರುವ ಜಪಾನ್, ದ.ಕೊರಿಯ ಮತ್ತು ಸಿಂಗಾಪುರ್ ಗಳು ಸಹ ಕೊರೊನಾ ತಮ್ಮ ದೇಶಗಳಲ್ಲಿ ಹರಡದಂತೆ ಸಕಾಲಿಕ ಕ್ರಮಗಳನ್ನು ಕೈಗೊಂಡಿದ್ದರಿಂದ ತೀವ್ರ ಸಾವು–ನೋವುಗಳ ಆಗದಂತೆ ತಡೆಯುವುದು ಸಾಧ್ಯವಾಗಿದೆ. ಹಾಗಾದರೆ ಈ ದೇಶಗಳು ಚೀನಾದ ‘ಪಿತೂರಿ’ಯಲ್ಲಿ ಭಾಗಿಯಾಗಿದ್ದರು ಅಂತ ಈ ‘ಪಿತೂರಿ’ ಸಿದ್ಧಾಂತಿಗಳು ಹೇಳ್ತಾರಾ? ಚೀನಾದ ಒಟ್ಟು ಸಾವು ನೋವುಗಳು ಕೋಟ್ಯಾಂತರ ಆಗಿವೆ ಎಂಬ ವದಂತಿಗಳನ್ನೂ ಇದೇ ಮೂಲಗಳು ಹರಡುತ್ತಿವೆ. ಇವ್ಯಾವುದಕ್ಕೂ ಯಾವುದೇ ಪುರಾವೆಗಳೆಂದರೆ ಹಲವು ಫೇಕ್ ವೆಬ್ ಸೈಟುಗಳ ವರದಿಗಳು. ಅತ್ಯಂತ ಆದುನಿಕ ಸಂಪರ್ಕ ಸಂವಹನ ಸಾಧನಗಳು ಬೆಳೆದಿರುವ ಮತ್ತು ಪ್ರತಿಯೊಬ್ಬನಿಗೆ ನಿಲುಕುತ್ತಿರುವ ಇಂದಿನ ಜಗತ್ತಿನಲ್ಲಿ ಯಾವುದೇ ಮಾಹಿತಿಯನ್ನು, ಅದು ವ್ಯಾಕ್ಸೀನ್ ಇರಬಹುದು, ಸಾವು–ನೋವುಗಳ ಸಂಖ್ಯೆ ಇರಬಹುದು ಗುಟ್ಟಾಗಿ ಇಡಲು ಬರುವುದಿಲ್ಲ. ಅವಕ್ಕೆ ಪುರಾವೆಗಳಿಲ್ಲದಿದ್ದರೆ ಅವು ‘ಫೇಕ್’ ಎಂದೇ ಅರ್ಥ.




ಈ ಪಿತೂರಿ ’ಸಿದ್ಧಾಂತ’ ಯಾತಕ್ಕಾಗಿ?

ಮೇಲೆ ಹೇಳಿದ ವಾಸ್ತವಾಂಶಗಳಿಂದ ಈ ಪಿತೂರಿ ’ಸಿದ್ಧಾಂತ’ವನ್ನು ಸುಳ್ಳು ಮಾಹಿತಿಗಳು, ಸುಳ್ಳು ಸುದ್ದಿಗಳು, ಸುಳ್ಳು ಕತೆಗಳು, ಕೃತಕವಾಗಿ ಸೃಷ್ಟಿಸಿದ ದತ್ತಾಂಶಗಳು, ಕಾಲ್ಪನಿಕ ಮೂಲಗಳನ್ನೆಲ್ಲಾ ಬಳಸಿ ಕುಶಲತೆಯಿಂದ ಹೆಣೆದು ಕಟ್ಟಲಾಗಿದೆ ಎಂಬುದು ಸ್ಪಷ್ಟ. ಇಂತಹ ಪಿತೂರಿ ಕತೆಗಳು ಬರಿಯ ಭೋಳೆತನದಿಂದ ಹುಟ್ಟಿದವೇನಲ್ಲ. ಇವು ಉಗ್ರ ಬಲಪಂಥೀಯ ‘ಪ್ರಚಾರ ಉತ್ಪಾದನಾ ಫ್ಯಾಕ್ಟರಿ’ಗಳಲ್ಲಿ ಸೃಷ್ಟಿಯಾದವು. ಅವಕ್ಕೆ ಸ್ಪಷ್ಟವಾದ ಅಜೆಂಡಾ ಮತ್ತು ಗುರಿಗಳಿವೆ. ಅಮೆರಿಕದಲ್ಲಿ ಟ್ರಂಪ್ ಆಡಳಿತ ಮತ್ತು ಆಳುವ ರಿಪಬ್ಲಿಕನ್ ಪಕ್ಷಕ್ಕೆ, ಕೊರೊನಾ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ತಾನು ತೋರಿದ ಬೇಜವಾಬ್ದಾರಿ, ನಿರ್ಲಕ್ಷ, ಅದಕ್ಷತೆ ಗಳನ್ನು ಮುಚ್ಚಿಕೊಂಡು ಜನರ ಗಮನ ಬೇರೆಡೆ ಸೆಳೆಯಲು ಒಂದು ‘ಬಲಿಪಶು’ ಬೇಕು. ಅದಕ್ಕೆ ಜನಾಂಗ–ದ್ವೇಷ ಬಳಸಲು ಹೇಸುವುದಿಲ್ಲ ಎಂಬುದನ್ನು ಅವರು ಪದೇ ಪದೇ ತೋರಿಸಿದ್ದಾರೆ. ಅಮೆರಿಕದ ಆಳುವ ವಲಯಗಳಿಗೆ, ಪ್ರತಿಷ್ಟಿತರಿಗೆ ಅದರ ಸಾಮ್ರಾಜ್ಯಶಾಹಿ ಅಧಿಪತ್ಯದ ಮಗ್ಗುಲಿನ ಮುಳ್ಳಾದ ಚೀನಾದ ವಿರುದ್ಧ ಸತತ ‘ಶೀತ ಸಮರದ ಅಪಪ್ರಚಾರ’ದ ಅನಿವಾರ್ಯ ಅಂಗವಿದು. ಯುರೋಪಿನ ಬಂಡವಾಳಶಾಹಿ ಪಕ್ಷ/ಶಕ್ತಿಗಳಿಗೂ ತಮ್ಮ ಪ್ರಮಾದಗಳನ್ನು ಮುಚ್ಚಿಕೊಳ್ಳಬೇಕು. ಜಾಗತಿಕ ನವ–ಉದಾರವಾದಿ ಬಂಡವಾಳಶಾಹಿಗೂ ಮತ್ತು ಅದರ ಬಾಲಬಡುಕ ಬೆಂಬಲಿಗರಿಗೂ 1930 ಮತ್ತು 2008 ನಂತರದ ಅತ್ಯಂತ ತೀವ್ರವಾದ ಇಂದಿನ ಬಿಕ್ಕಟ್ಟಿಗೆ ಕಾರಣವೆಂದು ತೋರಿಸಬಲ್ಲ ‘ಬಲಿಪಶು’ ಬೇಕು. ಇವರೆಲ್ಲರ ಭೀಕರ ಅಮಾನವೀಯ ಮುಖವನ್ನು ಕೊವಿಡ್–19 ಹಿಂದೆಂದೂ ಕಾಣದ ರೀತಿಯಲ್ಲಿ ಬಯಲಿಗೆಳೆದಿದೆ. ಇವರೆಲ್ಲರಿಗೆ ಈ ‘ಚೀನೀ ಪಿತೂರಿ ಸಿದ್ಧಾಂತ’ ವರದಾನವಾಗಿದೆ. ಆದ್ದರಿಂದ ಇದು ಜಾಗತಿಕವಾಗಿ ಇಷ್ಟು ವ್ಯಾಪಕವಾಗಿ ಹರಡಿದೆ.

ಭಾರತದಲ್ಲೂ ಸಹ ಕೊರೊನಾ ಬಿಕ್ಕಟ್ಟನ್ನು ನಿಭಾಯಿಸುವುದರಲ್ಲಿ ಮೋದಿ ಸರಕಾರ ತೋರಿರುವ ಬೇಜವಾಬ್ದಾರಿ, ನಿರ್ಲಕ್ಷ, ಅದಕ್ಷತೆ, ಅಮಾನವೀಯತೆ ಗಳನ್ನು ಮುಚ್ಚಿಕೊಂಡು ಜನರ ಗಮನ ಬೇರೆಡೆ ಸೆಳೆಯಲು ಸಹ ಈ ‘ಪಿತೂರಿ ಸಿದ್ಧಾಂತ’ ಬಹಳ ಆಪ್ಯಾಯಮಾನವಾಗಿದೆ. ಟ್ರಂಪ್–ಮೋದಿ ದೋಸ್ತಿ ಮತ್ತು ಚೀನಾ–ವಿರೋಧಿ ಭಾರತ–ಅಮೆರಿಕ ವ್ಯೂಹದ ಹಿನ್ನೆಲೆಯಲ್ಲಿ ಈ ‘ಅಮೆರಿಕನ್ ವೈರಸ್’ಗೆ ಭಾರತದಲ್ಲಿ ಭಾರೀ ಸ್ವಾಗತ ಸ್ವಾಭಾವಿಕ. ‘ನೆರೆ ಹೊರೆಯವರನ್ನು ದ್ವೇಷಿಸು’ ಎಂಬ ಏಕಮೇವ ಧ್ಯೇಯವಾಕ್ಯ ಹೊಂದಿರುವ ಮತ್ತು ಪಾಕಿಸ್ತಾನದ ವಿರುದ್ಧ ದ್ವೇಷ ಪ್ರಚಾರ ಮಾಡಿ ಬೋರಾಗಿರುವ ಸಂಘ ಪರಿವಾರದ ‘ಪ್ರಚಾರ ಉತ್ಪಾದನಾ ಫ್ಯಾಕ್ಟರಿ’ಗಳು, ಚೀನಾ–ದ್ವೇಷ ಹರಡುವ ಈ ‘ಅಮೆರಿಕನ್ ವೈರಸ್’ನ್ನು ತಮ್ಮದೇ ‘ಭಾರತೀಯ ಮಸಾಲೆ’ಗಳೊಂದಿಗೆ ಅತ್ಯುತ್ಸಾಹದಿಂದ ಹರಡುತ್ತಿರುವುದು ಆಶ್ಚರ್ಯವೇನಲ್ಲ. ಚೀನಾ ಎರಡು ವಾರಗಳಲ್ಲಿ ವೂಹಾನ್ ನಲ್ಲಿ ಭಾರೀ ಆಸ್ಪತ್ರೆ ಕಟ್ಟಿದ್ದು ಅಸಾಧ್ಯ. ಇದು ಮೊದಲೇ ಗೊತ್ತಿದ್ದರಿಂದ ಅವರೇ ವೈರಸ್ ಹುಟ್ಟಿಸಿ ಬಿಟ್ಟದ್ದಕ್ಕೆ ‘ಪುರಾವೆ’ ಎಂದು ಇವರು ಹಿಗ್ಗಿನಿಂದ ಪ್ರಚಾರ ಮಾಡಿದರು. ಅದೇ ಸಮಯದಲ್ಲಿ ಭಾರತದ ಸೈನ್ಯ ರಾಜಸ್ಥಾನದಲ್ಲಿ ಎರಡೇ ದಿನಗಳಲ್ಲಿ ಕೊರೊನಾ ವಿರುದ್ಧ ಯುದ್ಧಕ್ಕಾಗಿ ಸಂಚಾರಿ ಆಸ್ಪತ್ರೆ ಕಟ್ಟಿದೆ ಎಂಬ ಸುದ್ದಿಯನ್ನು ಸಹ, ಕೆಲವು ‘ದೇಶದ್ರೋಹಿ’ಗಳು ಅದು ಫೇಕ್ ಎಂದು ಸಾಧಿಸಿದ ಮೇಲೂ, ಅಷ್ಟೆ ಹಿಗ್ಗಿನಿಂದ ಹರಡಿದರು! ಔಷಧಿ, ಬಟ್ಟೆ ಮುಂತಾದ, ಉತ್ಪಾದನೆ–ರಫ್ತುಗಳಲ್ಲಿ ನಾವು ಮುಂದಿರುವ ಉತ್ಪನ್ನಗಳಲ್ಲಿ ಸಹ, ನಮ್ಮ ಪೂರ್ಣ ಸ್ವಾವಲಂಬನೆಯ ಅಭಾವ ಮತ್ತು ಚೀನಾದ ಮೇಲೆ ಕೆಲವು ಕಚ್ಚಾವಸ್ತು ಯಂತ್ರ ಇತ್ಯಾದಿಗಳ ಮೇಲೆ ಅವಲಂಬನೆಯ ನಮ್ಮ ನ್ಯೂನತೆಗಳು ಹಾಗೂ ಕೊರೊನಾ ಬಿಕ್ಕಟ್ಟಿನಿಂದಾಗಿ ಚೀನಾದಲ್ಲಿ ಇವುಗಳ ಉತ್ಪಾದನೆ/ಸಾಗಾಣಿಕೆಗಳಲ್ಲಿ ವ್ಯತ್ಯಯಗಳು ವಾಸ್ತವ. ಈ ವಾಸ್ತವವನ್ನು ತಲೆಕೆಳಗು ಮಾಡಿ, ಚೀನಾ ನಮ್ಮ ಜೀವನಾವಶ್ಯಕ ಔಷಧಿ ಮತ್ತಿತರ ಉತ್ಪಾದನೆಯನ್ನು ಹತ್ತಿಕ್ಕಲು ‘ಪಿತೂರಿ’ ಹೂಡಿದೆ ಎಂದು ಕನ್ನಡ ಟಿವಿ ವಾಹಿನಿಗಳು ಸೇರಿದಂತೆ ಮುಖ್ಯವಾಹಿನಿ ಮಾಧ್ಯಮಗಳೂ ‘ಚೀನಿ ಪಿತೂರಿ’ ವೈರಸ್ ಹರಡುವುದರಲ್ಲಿ ತೊಡಗಿವೆ. ಕೊವಿಡ್–19 ವಿರುದ್ಧ ಚೀನಾದ ದಿಟ್ಟ ಮತ್ತು ಸಂಘಟಿತ ಸಫಲ ಹೋರಾಟವನ್ನು ನಿರಾಕರಿಸದೆ ಮೋದಿ ಸರಕಾರದ ಅಧ್ವಾನಗಳನ್ನು ಸಮರ್ಥಿಸಿಕೊಳ್ಳುವುದು ಕಷ್ಟ.

ಇಂತಹ ‘ಪಿತೂರಿ’ ಸಿದ್ಧಾಂತಗಳನ್ನು ಈಗಿನ ಭೀತಿ, ಆತಂಕದ ಸನ್ನಿವೇಶದಲ್ಲಿ ಹೆಚ್ಚೆಚ್ಚು ಜನ ಕಣ್ಣು ಮುಚ್ಚಿ ನಂಬಿ ಬಿಡುತ್ತಾರೆ ಎಂಬುದು ಕಳವಳದ ವಿಷಯ. ಮಾತ್ರವಲ್ಲ ಕೊರೊನಾ ವೈರಸ್ ವಿರುದ್ಧ ವಾಸ್ತವ ಹೋರಾಟವನ್ನು ದಾರಿ ತಪ್ಪಿಸುವಂತಹುದು. ಯಾವುದೇ ಸಮಸ್ಯೆಯ ಬಿಕ್ಕಟ್ಟಿನ ಮೂಲವನ್ನು ವೈಜ್ಞಾನಿಕವಾಗಿ ಶೋಧಿಸದೆ, ಅದು ಈ ಹೋರಾಟದಲ್ಲಿ ತೊಡಗಿರುವ ಎಲ್ಲರಿಗೂ ಅರ್ಥವಾಗದೆ, ಅದರ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ಮಾಡಲಾಗುವುದಿಲ್ಲ. ಆದ್ದರಿಂದ ಕೊರೊನಾ ವೈರಸ್ ಜೊತೆಗೆ ಈ ‘ಪಿತೂರಿ ಸಿದ್ಧಾಂತ’ಗಳ ವೈರಸ್ ವಿರುದ್ಧ ಸಹ ಪ್ರಚಾರಾಂದೋಲನ ಬೇಕಾಗಿದೆ.





ಶತಮಾನೋತ್ಸವ ಲೇಖನ ಮಾಲೆ-20

ಪಕ್ಷದ ಮೊದಲ ಮಹಾಧಿವೇಶನ –1943

ಸಮಾನ ಗುರಿ, ಸಮಾನ ಕಾರ್ಯಕ್ರಮ ಸಾಧಿಸುವ ಐಕ್ಯತೆ

ಪಕ್ಷವನ್ನು 'ಸಾಮೂಹಿಕ ರಾಜಕೀಯ ಶಕ್ತಿಯಿಂದ ಸಾಮೂಹಿಕ ರಾಜಕೀಯ ಸಂಘಟನೆಯಾಗಿ' ಮಾರ್ಪಾಟು ಮಾಡಲು ಮತ್ತು ಕೇವಲ ಲಕ್ಷಾಂತರ ದುಡಿಯುವ ಜನರ ಮೇಲೆ ಮಾತ್ರವಲ್ಲದೇ ಇಡೀ ಭಾರತದ ಜನರ ಮೇಲೆ ರಾಜಕೀಯ ಪ್ರಭಾವವನ್ನು ಹೊಂದಬೇಕು ಎಂದು ಮಹಾಧಿವೇಶನವು ನಿರ್ಣಯ ಮಾಡಿತು. ಮಹಾಧಿವೇಶನದ ನಿರ್ಣಯಗಳು ಮತ್ತು ವರದಿಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಕೇಂದ್ರ ಸಮಿತಿ ಮತ್ತು ಪ್ರಧಾನ ಕಾರ್ಯದರ್ಶಿಯನ್ನು ಕೂಡ ಸರ್ವಾನುಮತದಿಂದ ಆರಿಸಿತು. ಮಹಾಧಿವೇಶನದಲ್ಲಿ ಪ್ರಕಟವಾದ ಐಕ್ಯತೆಯು 'ಹಲವು ವರ್ಷಗಳ ಸಮಾನ ಆಚರಣೆಗಳಿಂದ ಪರಿಪಕ್ವವಾದ ಸಮಾನ ಗುರಿ, ಸಮಾನ ಕಾರ್ಯಕ್ರಮ' ಸಾಧಿಸುವ ಉದ್ದೇಶದಿಂದ ಹೊರಹೊಮ್ಮಿದೆ ಎಂದು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಪಿ.ಸಿ.ಜೋಷಿ ವ್ಯಾಖ್ಯಾನ ಮಾಡಿದರು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಮಹಾಧಿವೇಶನವು 1943ರಲ್ಲಿ ಬೊಂಬಾಯಿಯಲ್ಲಿ ನಡೆಯಿತು. ಅದು ಮೇ 23ರಿಂದ ಜೂನ್ 1ರವರೆಗೆ ಎಂಟು ದಿನಗಳ ಕಾಲ ನಡೆಯಿತು. ಪಕ್ಷದ 15,563 ಸದಸ್ಯರನ್ನು ಪ್ರತಿನಿಧಿಸಿ 139 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಅಷ್ಟೊತ್ತಿಗಾಗಲೇ, ಪಕ್ಷದ ಪತ್ರಿಕೆಗಳು 11 ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದವು ಅವು ಒಟ್ಟಾಗಿ 60,000 ಚಂದಾದಾರನ್ನು ಹೊಂದಿದ್ದವು. ಕೊನೇ ಪಕ್ಷ 6,00,000 ಜನರು ಪಕ್ಷವು ಹೊರತರುತ್ತಿದ್ದ ಇತರ ಕರಪತ್ರಗಳು ಹಾಗೂ ಹೊತ್ತಿಗೆಗಳೊಂದಿಗೆ ಪಕ್ಷದ ಈ ಪತ್ರಿಕೆಗಳನ್ನು ಓದುತ್ತಿದ್ದರೆಂದು ಅಂದಾಜಿಸಲಾಗಿದೆ. ಪಕ್ಷ, ಕಾರ್ಮಿಕ ಸಂಘ, ಕಿಸಾನ್ ಸಭಾ ಮತ್ತು ಇತರೆ ಸಾಮೂಹಿಕ ಸಂಘಟನೆಗಳ ಸದಸ್ಯತ್ವವು ಒಟ್ಟಾರೆಯಾಗಿ ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ಮಹಾಧಿವೇಶನವನ್ನು ನಡೆಸಲಾಯಿತು.

ಆಗ ದೇಶದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲಾ ಕಮ್ಯುನಿಸ್ಟ್ ಗುಂಪುಗಳು ಒಂದಾಗಿ ಬೆರೆತು ಏಕೈಕ ಬಲಿಷ್ಠ ಕಮ್ಯುನಿಸ್ಟ್ ಪಕ್ಷವಾದ ನಂತರ ಈ ಮಹಾಧಿವೇಶನವನ್ನು ನಡೆಸಲಾಯಿತು. ಮಹಾಧಿವೇಶನಕ್ಕೆ ಸ್ವಲ್ಪ ಮುಂಚೆ, 1941ರಲ್ಲಿ, ಘದರ್–ಕಿರ್ತಿ ಗುಂಪು ಪಕ್ಷದೊಂದಿಗೆ ವಿಲೀನವಾಯಿತು ಮತ್ತು ಬಾಬಾ ಸೋಹನ್ ಸಿಂಗ್ ಭಕ್ನಾ ರಂತಹ ಅದರ ಮುಖಂಡರು ಪ್ರತಿನಿಧಿಗಳಾಗಿ ಆ ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದರು. ಮಹಾಧಿವೇಶನದಲ್ಲಿ ಮಂಡಿಸಿದ ವರದಿಯ ಪ್ರಕಾರ ಪಕ್ಷದ ಸದಸ್ಯತ್ವವು 1933ರ ಕೊನೆಯಲ್ಲಿ 150 ಇದ್ದದ್ದು 1942ರಲ್ಲಿ 4,400 ತಲುಪಿ 1943ರ ಮೇ ದಿನಾಚರಣೆಯ ಹೊತ್ತಿಗೆ 15,563 ಮುಟ್ಟಿತ್ತು. ಅದೇ ರೀತಿಯಲ್ಲಿ, ಪಕ್ಷದಲ್ಲಿ 2,637 ಪೂರ್ಣಕಾಲದ ಕಾರ್ಯಕರ್ತರು ಕೆಲಸ ಮಾಡುತ್ತಿದ್ದರು. ಪಕ್ಷದ ಸ್ವಯಂಸೇವಕರಾಗಿ 32,166 ಮಂದಿ, 9,000 ಸದಸ್ಯರು ಕಿಶೋರ್ ವಾಹಿನಿಯಲ್ಲಿ, 41,100 ಸದಸ್ಯರು ಮಹಿಳಾ ಸಂಘಟನೆಯಲ್ಲಿ(ಅದರಲ್ಲಿ 700 ಪಕ್ಷದ ಸದಸ್ಯರಾಗಿದ್ದರು, ಒಟ್ಟು ಸದಸ್ಯರಲ್ಲಿ 5% ಮಹಿಳೆಯರನ್ನು ಪಕ್ಷದ ಸದಸ್ಯರನ್ನಾಗಿ ಹೊಂದಿದ್ದ ಏಕೈಕ ಪಕ್ಷವಾಗಿತ್ತು.), ವಿದ್ಯಾರ್ಥಿ ಸಂಘಟನೆಯಲ್ಲಿ 39,155 ಸದಸ್ಯರು, ಕಿಸಾನ್ ಸಭಾದಲ್ಲಿ 3,85,370 ಸದಸ್ಯರು(5,500 ಪಕ್ಷದ ಸದಸ್ಯರು), ಕಾರ್ಮಿಕ ಸಂಘಗಳಲ್ಲಿ 3,01,400 ಸದಸ್ಯರು(4,000 ಪಕ್ಷದ ಸದಸ್ಯರು) ಇದ್ದರು. ಎಸ್.ಎ.ಡಾಂಗೆ ಮತ್ತು ಬಂಕಿಂ ಮುಖರ್ಜಿ ಅವರು ಅನುಕ್ರಮವಾಗಿ ಕಾರ್ಮಿಕ ಸಂಘ ಹಾಗೂ ಕಿಸಾನ್ ಸಭಾದ ಚುನಾಯಿತ ಅಧ್ಯಕ್ಷರಾಗಿದ್ದರು ಎಂಬ ಸಂಗತಿಯು ಆ ವರ್ಗಗಳ ನಡುವೆ ಕಮ್ಯುನಿಸ್ಟರು ಕೆಲಸ ಮಾಡುತ್ತಿದ್ದರು ಎಂಬುದನ್ನು ಪ್ರತಿಬಿಂಬಿಸುತ್ತಿತ್ತು.

ಪಕ್ಷದ ಮಹಾಧಿವೇಶನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ವಿಶಾಲ ಜನಸಮೂಹವನ್ನು ಅವಲೋಕಿಸಿದಾಗ ಸಮಾಜದ ಎಲ್ಲಾ ಜನವಿಭಾಗಗಳ ನಡುವೆ ಕಮ್ಯುನಿಸ್ಟ್ ಪಕ್ಷದ ಪ್ರಭಾವ ಇತ್ತು ಎಂಬುದು ಕಂಡು ಬರುತ್ತದೆ. ಮಹಾಧಿವೇಶನದಲ್ಲಿ ಮಂಡಿಸಿದ ಪ್ರತಿನಿಧಿಗಳ ಪರಿಚಯ ಪತ್ರ ವರದಿಯ ಪ್ರಕಾರ 139 ಪ್ರತಿನಿಧಿಗಳಲ್ಲಿ 22 ಕಾರ್ಮಿಕರು, 25 ರೈತರು, 86 ವಿಚಾರವಂತರು(ಸಾಮೂಹಿಕ ಚಳುವಳಿಗಳಲ್ಲಿ ಭಾಗವಹಿಸುತ್ತಾ, ದುಡಿಯುವ ಜನ ಸಮೂಹದ ಮಧ್ಯೆ ಮಾರ್ಕ್ಸ್‌ವಾದವನ್ನು ವ್ಯಾಪಕವಾಗಿ ಜನಪ್ರಿಯಗೊಳಿಸಿ, ಕಾರ್ಮಿಕರ ನಡುವೆ ಮಾರ್ಕ್ಸ್‌ವಾದಿ ಗುಂಪುಗಳಾಗಿ ಕೆಲಸ ಮಾಡುತ್ತಿದ್ದವರನ್ನು ಒಂದು ಕಡೆಯಲ್ಲಿ ಸೇರಿಸಿ ಒಂದು ಪ್ರಮುಖ ರಾಜಕೀಯ ಪಕ್ಷವನ್ನಾಗಿ ಮಾರ್ಪಾಟು ಮಾಡುವಲ್ಲಿ ಪ್ರಧಾನ ಪಾತ್ರ ವಹಿಸಿದ ಎಲ್ಲರು), 3 ಜಮೀನುದಾರರು, ಇಬ್ಬರು ಸಣ್ಣ ಹಿಡುವಳಿದಾರರು ಮತ್ತು ಒಬ್ಬ ವ್ಯಾಪಾರಿ ಇದ್ದರು. ಒಟ್ಟು ಪ್ರತಿನಿಧಿಗಳಲ್ಲಿ 13 ಮಹಿಳೆಯರು, ಮೂರು ದಲಿತರು, 13 ಮುಸ್ಲಿಮರು, ಎಂಟು ಸಿಖ್ಖರು, ಇಬ್ಬರು ಪಾರ್ಸಿಗಳು ಮತ್ತು ಒಬ್ಬ ಜೈನರಿದ್ದರು.

ಪಕ್ಷದ ಮೇಲಿನ ನಿಷೇಧವನ್ನು ಹಿಂತೆಗೆದುಕೊಂಡಿದ್ದಾಗ್ಯೂ, 695 ಪಕ್ಷದ ಸದಸ್ಯರು ಮಹಾಧಿವೇಶನ ನಡೆಯುತ್ತಿರುವಾಗ ಜೈಲುಗಳಲ್ಲಿ ನರಳುತ್ತಿದ್ದರು. ಅವರಲ್ಲಿ, 105 ಜನರು ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದರು. ಮಹಾಧಿವೇಶನದ ಪ್ರತಿನಿಧಿಗಳಲ್ಲಿ 70% ಸದಸ್ಯರು ಒಂದಕ್ಕಿಂತ ಹೆಚ್ಚು ಬಾರಿ ಜೈಲುವಾಸ ಮಾಡಿದವರಾಗಿದ್ದರು ಮತ್ತು ಅವರೆಲ್ಲರ ಒಟ್ಟು ಜೈಲುವಾಸವನ್ನು ಲೆಕ್ಕ ಹಾಕಿದರೆ ಅದು 411 ವರ್ಷಗಳಾಗಿತ್ತು! ಅಂದರೆ, ಪಕ್ಷದ ಮುಖಂಡರು ತಮ್ಮ ರಾಜಕೀಯ ಅವಧಿಯ ಅರ್ಧ ಭಾಗವನ್ನು ಜೈಲಿನಲ್ಲೇ ಸವೆಸಿದ್ದರು. ಅವರಲ್ಲಿ ಇಬ್ಬರು ಮಹಿಳೆಯರು, ಕಲ್ಪನಾ ದತ್ ಹಾಗೂ ಕಮಲಾ ಚಟರ್ಜಿ ಏಳೂವರೆ ವರ್ಷ ಜೈಲಿನಲ್ಲಿ ಕಳೆದಿದ್ದರು. 53% ಪ್ರತಿನಿಧಿಗಳು ಭೂಗತ ಜೀವನ ಅನುಭವಿಸಿದ್ದರು ಮತ್ತು ಅದೆಲ್ಲವನ್ನು ಒಟ್ಟುಗೂಡಿಸಿದರೆ 54 ವರ್ಷ ಭೂಗತರಾಗಿದ್ದರು.

ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳ ವಯಸ್ಸಿನ ಸಂಯೋಜನೆಯನ್ನು ನೋಡಿದರೆ, 8 ಪ್ರತಿನಿಧಿಗಳು 1929ರ ಮೊದಲು ಪಕ್ಷ ಸೇರಿದ್ದ ಮೂಲ ಪ್ರವರ್ತಕರಾಗಿದ್ದಾಗ್ಯೂ, 68% ಮಂದಿ 35 ವರ್ಷದೊಳಗಿನವರು. ಆಸಕ್ತಿದಾಯಕ ವಿಚಾರವೆಂದರೆ, ಪ್ರತಿನಿಧಿಗಳಲ್ಲಿ ಯಾರೂ ಅನಕ್ಷರಸ್ಥರಾಗಿರಲಿಲ್ಲ. ಕಾರ್ಮಿಕರು ಮತ್ತು ರೈತರನ್ನು ಪ್ರತಿನಿಧಿಸಿದವರಲ್ಲಿ ಅನೇಕರು ಸ್ವತಃ ಇಂಗ್ಲಿಷ್ ಕಲಿತವರಾಗಿದ್ದರು. ಮಾರ್ಕ್ಸ್, ಏಂಗೆಲ್ಸ್, ಲೆನಿನ್ ಹಾಗೂ ಸ್ಟಾಲಿನ್ ಅವರ ಕೃತಿಗಳನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಮತ್ತು ಮಾರ್ಕ್ಸ್‌ವಾದ–ಲೆನಿನ್‌ವಾದ ಸಿದ್ಧಾಂತವನ್ನು ನಮ್ಮ ದೇಶಕ್ಕೆ ಅಳವಡಿಸಲು ಗ್ರಹಿಸುವಷ್ಟು ಸಮರ್ಥರಾಗಿದ್ದರು.

ಸರಿ ಸುಮಾರು 25,000 ಜನರು ಭಾಗವಹಿಸಿದ್ದ ಬಹಿರಂಗ ಸಭೆಯೊಂದಿಗೆ ಮಹಾಧಿವೇಶನವು ಪ್ರಾರಂಭವಾಯಿತು. ಕಾಂ.ಮುಜಾಫರ್ ಅಹಮದ್, ಡಾಂಗೆ, ಭಯ್ಯಾಜಿ ಕುಲಕರ್ಣಿ(ಹಿರಿಯ ಕಾರ್ಯಕರ್ತ ಮತ್ತು ಬೊಂಬಾಯಿ ಪ್ರಾಂತದ ಕಾರ್ಯದರ್ಶಿ), ಕೇರಳದಿಂದ ಕೃಷ್ಣ ಪಿಳ್ಳೈ, ಕಲ್ಕತ್ತಾದ ಮಹಿಳಾ ಮುಖಂಡೆ ಮಣಿಕುಂತಳ ಸೇನ್, ರೈಲ್ವೇ ಕಾರ್ಮಿಕ ಹಾಗೂ ಬೊಂಬಾಯಿ ಸಮಿತಿಯ ಕಾರ್ಯದರ್ಶಿ ಡಿ.ಎಸ್.ವೈದ್ಯ ಮತ್ತು ವಿದ್ಯಾರ್ಥಿ ನಾಯಕ ನರ್ಗಿಸ್ ಬಾಟ್ಲಿವಾಲಾ ಇವರುಗಳು ಅಧ್ಯಕ್ಷೀಯ ಮಂಡಳಿಯಲ್ಲಿದ್ದರು. ಬಂಕಿಂ ಮುಖರ್ಜಿ ಧ್ವಜಾರೋಹಣ ಮಾಡಿದರು ಮತ್ತು ಬಾಬಾ ಸೋಹನ್ ಸಿಂಗ್ ಭಕ್ನಾ ಹುತಾತ್ಮರಿಗೆ ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದರು.


ಪಕ್ಷದ ಕಾರ್ಯದರ್ಶಿ ಪಿ.ಸಿ.ಜೋಷಿ ಒಂಭತ್ತು ಗಂಟೆಗಳ ಕಾಲ ರಾಜಕೀಯ ನಿರ್ಣಯವನ್ನು ಮಂಡಿಸಿದರು. 'ಕಾರ್ಮಿಕ ವರ್ಗದ ಸವಾಲುಗಳು ಮತ್ತು ರಾಷ್ಟ್ರೀಯ ಭದ್ರತೆ' ಕುರಿತು ಬಿ.ಟಿ.ರಣದೀವೆ ವರದಿ ಮಂಡಿಸಿದರು. ಮಹಾಧಿವೇಶನವು ಪ್ರತಿದಿನ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ನಡೆಯುತ್ತಿತ್ತು; ವರದಿಗಳ ಮಂಡನೆ, ಅದರ ಮೇಲೆ ಗುಂಪು ಚರ್ಚೆ ಹಾಗೂ ಚರ್ಚೆಯ ವರದಿ ಮಂಡನೆ ನಡೆಯುತ್ತಿದ್ದವು ಮತ್ತು ಮಧ್ಯೆ ಮಧ್ಯಾಹ್ನ ಹಾಗೂ ರಾತ್ರಿಯ ಊಟಕ್ಕೆ ಸ್ವಲ್ಪವೇ ಸಮಯ ಸಿಗುತ್ತಿತ್ತು. ಆರು ಸೌಹಾರ್ದ ಪಕ್ಷಗಳಿಂದ – ಗ್ರೇಟ್ ಬ್ರಿಟನ್, ದಕ್ಷಿಣ ಆಫ್ರಿಕಾ, ಯು.ಎಸ್.ಎ, ಚಿಲಿ, ಕ್ಯೂಬಾ ಹಾಗೂ ಕೆನಡಾ – ಮಹಾಧಿವೇಶನಕ್ಕೆ ಶುಭಾಶಯ ಕೋರಿ ಸಂದೇಶಗಳು ಬಂದಿದ್ದವು; ಶ್ರೀಲಂಕಾ ಹಾಗೂ ಬರ್ಮಾದಿಂದ ಪ್ರತಿನಿಧಿಗಳು ಬಂದಿದ್ದರು. ಬ್ರಿಟಿಷರ ವಿರುದ್ಧದ ಚಿತ್ತಗಾಂಗಿನಂತಹ ಹೋರಾಟದಲ್ಲಿ ತಮ್ಮ ಮಕ್ಕಳನ್ನು ಬಲಿದಾನ ಮಾಡಿದ್ದ ತಾಯಂದಿರು ಹಾಗೂ ಖಾಯಿಲೆಯಿಂದ ನರಳುತ್ತಿದ್ದ ಪಕ್ಷದ ಮುಖಂಡರುಗಳು ಮಹಾಧಿವೇಶನಕ್ಕೆ ಶುಭಾಶಯ ಸಂದೇಶಗಳನ್ನು ಕಳಿಸಿದ್ದರು ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ದುಡಿಯುವುದಾಗಿ ಪ್ರತಿಜ್ಞೆ ಮಾಡಿದ್ದರು.

ಬಂಗಾಳದ ಪ್ರಸಿದ್ಧ ಕಲಾವಿದ ಚಿತ್ತ ಪ್ರಸಾದ್ ರಚಿಸಿದ ಮಾರ್ಕ್ಸ್, ಏಂಗೆಲ್ಸ್, ಲೆನಿನ್ ಹಾಗೂ ಸ್ಟಾಲಿನ್ ಚಿತ್ರಗಳನ್ನು ವೇದಿಕೆಯ ಮೇಲೆ ಗಾಂಧಿ, ನೆಹರೂ ಹಾಗೂ ಜಿನ್ನಾ ಅವರ ಫೋಟೋಗಳೊಂದಿಗೆ ಇಟ್ಟು ಅಲಂಕರಿಸಲಾಗಿತ್ತು. ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಬಾವುಟಗಳು ಕೂಡ ಹಿನ್ನೆಲೆಯಲ್ಲಿ ಇದ್ದವು. ಫ್ಯಾಸಿಸಂ ವಿರುದ್ಧದ ಹೋರಾಟಕ್ಕೆ ಸಂಯುಕ್ತ ರಂಗವನ್ನು ಕಟ್ಟಬೇಕೆಂಬ ಮತ್ತು ಕಾಂಗ್ರೆಸ್–ಲೀಗ್ ಐಕ್ಯತೆಯನ್ನು ಗಟ್ಟಿಗೊಳಿಸಬೇಕೆಂಬ ಪಕ್ಷದ ರಾಜಕೀಯ–ಕಾರ್ಯತಂತ್ರಾತ್ಮಕ ತಿಳುವಳಿಕೆಯನ್ನು ವೇದಿಕೆಯ ಮೇಲಿನ ವ್ಯಕ್ತಿಚಿತ್ರಗಳು ಮತ್ತು ಬಾವುಟಗಳ ಪ್ರದರ್ಶನವು ಪ್ರತಿಬಿಂಬಿಸಿದವು.

ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷವು ಅಳವಡಿಸಿಕೊಳ್ಳಬೇಕಾದ ತಂತ್ರಗಳನ್ನು, ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆಗಳನ್ನು ಹೆಚ್ಚಿಸಲು ಕೆಲಸ ಮಾಡಬೇಕಾದ ಕಾರಣ ಹಾಗೂ ಅಗತ್ಯತೆಯನ್ನು ಮತ್ತು ಒಟ್ಟು ಜನಸಮುದಾಯದ ಐಕ್ಯತೆಯನ್ನು ಬೆಳೆಸಬೇಕೆಂಬ ವಿಚಾರಗಳನ್ನು ಪಿ.ಸಿ.ಜೋಷಿಯವರು ಮಂಡಿಸಿದ ರಾಜಕೀಯ ನಿರ್ಣಯದಲ್ಲಿ ವಿವರಿಸಲಾಗಿತ್ತು. ಅದಾದ ನಂತರ, ಹಲವಾರು ಪ್ರಾಂತೀಯ ಕಾರ್ಯದರ್ಶಿಗಳು ತಮ್ಮ ತಮ್ಮ ಪ್ರಾಂತಗಳಲ್ಲಿ ಮಾಡಿದ ಕೆಲಸಗಳು ಮತ್ತು ಪಡೆದ ಅನುಭವಗಳನ್ನು ವರದಿ ಮಾಡಿದರು. ಈ ವರದಿಗಳಾದ ನಂತರ, ದೇಶದಲ್ಲಿನ ಆಹಾರ ಪರಿಸ್ಥಿತಿಯ ಕುರಿತು ಸರ್ದೇಸಾಯಿಯವರು, ಹೆಚ್ಚು ಆಹಾರ ಬೆಳೆಯಬೇಕಾದ ಅವಶ್ಯಕತೆ ಕುರಿತು ನಂಬೂದಿರಿಪಾಡ್ ಅವರು, ವಿದ್ಯಾರ್ಥಿಗಳ ಕುರಿತು ಅರುಣ್ ಅವರು, ಬಾಲಸಂಘಂ ಬಗ್ಗೆ ಕುನ್ನೈನಂದನ್ ಅವರು ಮತ್ತು ಕನಕ್, ಯಶೋದಾ, ಅನ್ನಪೂರ್ಣಮ್ಮ ಮತ್ತು ಪೂರನ್ ಮೆಹ್ತಾ ಅವರು ಮಹಿಳೆಯರ ಕುರಿತು ವರದಿಗಳನ್ನು ಮಂಡಿಸಿದರು. ಈ ಸಂಗಾತಿಗಳು ತಮ್ಮ ನಿರ್ದಿಷ್ಟ ರಂಗಗಳಲ್ಲಿನ ಪರಿಸ್ಥಿತಿಯ ಬಗ್ಗೆ ಮಾತ್ರ ಹೇಳದೆ, ಈ ರಂಗಗಳಲ್ಲಿ ಪಕ್ಷದ ನೀತಿಗಳನ್ನು ಜಾರಿ ಮಾಡಿದಾಗ ಗಳಿಸಿದ ಗೆಲುವುಗಳ ಬಗ್ಗೆಯೂ ತಮ್ಮ ವರದಿಗಳಲ್ಲಿ ತಿಳಿಸಿದರು. ಬದಲಾದ ವಾತಾವರಣದ ಹಿನ್ನೆಲೆಯಲ್ಲಿ ಪಕ್ಷಕ್ಕೆ ಹೊಸ ಸಂವಿಧಾನವನ್ನು ಅಧಿಕಾರಿಯವರು ಮುಂದಿಟ್ಟರು.


"ರಾಷ್ಟ್ರೀಯ ಸರ್ಕಾರ ಪಡೆಯುವ ಸಲುವಾಗಿನ ರಾಷ್ಟ್ರೀಯ ರಕ್ಷಣೆಗೆ ರಾಷ್ಟ್ರೀಯ ಐಕ್ಯತೆ ಸಾಧಿಸುವುದೇ ಅವತ್ತಿನ ಪ್ರಮುಖ ಕಾರ್ಯಭಾರವಾಗಿದೆ." ಎಂದು ಮಹಾಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ ನಿರ್ಣಯವು ಸ್ಪಷ್ಟಪಡಿಸಿದೆ. ಆ ಕಾರ್ಯ ಸಾಧಿಸಲು ಇಡೀ ಪಕ್ಷವು ಚಳುವಳಿ ನಡೆಸಬೇಕು; ಜತೆಯಲ್ಲಿಯೇ


ಪುಟ 14 ನೋಡಿ



ಮಹಾಧಿವೇಶನದ ಬಹಿರಂಗ ಸಭೆ

ಮೊದಲ ಮಹಾಧಿವೇಶನ ಆರಿಸಿದ ಪ್ರಧಾನ ಕಾರ್ಯದರ್ಶಿ ಪಿ ಸಿ ಜೋಷಿ ಮತ್ತು ಕೇಂದ್ರ ಸಮಿತಿ;





ಲಾಕ್‌ಡೌನ್‌ನ ಒಂದು ವಾರ

ಮನೆಯತ್ತ ವಲಸೆ ಕಾರ್ಮಿಕರ ದೀರ್ಘ ನಡಿಗೆ – ಸರಕಾರದ ವಿರುದ್ಧ ಅವಿಶ್ವಾಸ ಮತ

ಪುಟ 8 ರಿಂದ

ಮುಗಿದೇ ಹೋಯಿತು ಎನ್ನುವಾಗಲಷ್ಟೇ ನಿಜ ತಿಳಿಯುವಂತದ್ದು.

ಕೇಂದ್ರ ಸರಕಾರ ತನ್ನ ಹೊಣೆ ನಿಭಾಯಿಸುವ ಬದಲು, ದಿಲ್ಲಿ ಸರಕಾರದ ಅಧಿಕಾರಿಗಳನ್ನು ಬಲಿಪಶು ಮಾಡಲಾಗಿದೆ; ಬಸ್ ಟರ್ಮಿನಲ್‌ಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ಜಮಾಯಿಸಿದರು ಎಂಬ ಕಾರಣಕ್ಕೆ ಸಾರಿಗೆ ವಿಭಾಗದ ಅಡಿಶನಲ್ ಕಾರ್ಯದರ್ಶಿ ಸೇರಿದಂತೆ ಈ ಅಧಿಕಾರಿಗಳನ್ನು ಸುಮ್ಮನೇ ಶಿಕ್ಷಿಸಲಾಗಿದೆ. ಈ ಮಹಿಳಾ ಅಧಿಕಾರಿ ವಲಸೆ ಕಾರ್ಮಿಕರನ್ನು ಅವರು ಹೋಗಬೇಕಾಗಿದ್ದ ಉತ್ತರಪ್ರದೇಶಕ್ಕೆ ಕಳಿಸಲು ಬಸ್‌ಗಳನ್ನು ವ್ಯವಸ್ಥೆ ಮಾಡಿದ್ದೇ ಆಕೆ ಎಸಗಿದ ತಪ್ಪಂತೆ. ಆಕೆ ಬೇರೇನನ್ನು ಮಾಡಬಹುದಾಗಿತ್ತು. ಉತ್ತರಪ್ರದೇಶ ಸರಕಾರ ಕೂಡ ಅವರನ್ನು ಅಲ್ಲಿಂದ ಮುಂದಕ್ಕೆ ಒಯ್ಯಲು ಕೆಲವು ಬಸ್‌ಗಳನ್ನು ವ್ಯವಸ್ಥೆ ಮಾಡಿತ್ತು. ಅದಕ್ಕಾಗಿ ಉತ್ತರಪ್ರದೇಶದ ಮುಖ್ಯಮಂತ್ರಿಯನ್ನೂ ತೆಗೆದು ಹಾಕುತ್ತಾರೆಯೇ?

ಮನೆಯತ್ತ ಕಾರ್ಮಿಕರ ದೀರ್ಘ ನಡಿಗೆ – ಸರಕಾರದ ವಿರುದ್ಧ ಅವಿಶ್ವಾಸ ಮತ

ಈ ಎಲ್ಲ ದುರಂತ ಅನಾವರಣಗೊಂಡ ಮೇಲೆ ಕೇಂದ್ರ ಸರಕಾರ ಎಲ್ಲ ಗಡಿಗಳನ್ನು ಸೀಲ್ ಮಾಡುವ ಅಧಿಸೂಚನೆ ಹೊರಡಿಸಿತು. ಈ ಅಧಿಸೂಚನೆಯಲ್ಲಿ ಯಾವ ಬಾಡಿಗೆದಾರನೂ ಬಾಡಿಗೆ ತೆರಬೇಕಾಗಿಲ್ಲ, ಎಲ್ಲ ಮಾಲಕರೂ ಒಂದು ತಿಂಗಳ ಸಂಬಳವನ್ನು ತೆರಬೇಕು ಎಂಬ ಅಂಶವೂ ಇತ್ತು. **ಸರಕಾರ ಈ ಬಗ್ಗೆ ಗಂಭೀರವಾಗಿ ಯೋಚಿಸಿದ್ದರೆ, ಇದನ್ನು ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ದಿಲ್ಲಿ ಬಿಟ್ಟು ಹೊರಡುವ ಮೊದಲೇ ಏಕೆ ಪ್ರಕಟಿಸಲಿಲ್ಲ. ಇವನ್ನೆಲ್ಲ ಜಾರಿಗೊಳಿಸುವವರು ಯಾರು?** ಈ ಸರಕಾರ ಮುಂದೊತ್ತಿರುವ 'ಕಾರ್ಮಿಕ ಸುಧಾರಣೆ'ಗಳಿಂದಾಗಿ ಸಂಬಳ ಪಾವತಿಯನ್ನು ಖಾತ್ರಿಪಡಿಸುವ ವ್ಯವಸ್ಥೆಯೇ ಹೆಚ್ಚು ಕಡಿಮೆ ನಾಶಗೊಂಡಿದೆ. ಕಾರ್ಮಿಕರು ರೇಶನ್ ಕಾರ್ಡ್ ಪಡೆಯಲಿಕ್ಕೆ ವಿಳಾಸ ಕೊಡಲು ಬೇಕಾದ ಬಾಡಿಗೆ ಪತ್ರಗಳಿಗೇ ಸಹಿ ಹಾಕಲು ಕೂಡ ಮಾಲಕರು ಸಿದ್ಧರಿಲ್ಲದಿರುವಾಗ ಅವರು ಒಂದು ತಿಂಗಳ ಬಾಡಿಗೆ ಬಿಡುತ್ತಾರೆ ಎಂದು ಕಾರ್ಮಿಕರು ನಂಬಲು ಸಾಧ್ಯವೇ? ಕಾರ್ಮಿಕರಲ್ಲಿ ಅವರನ್ನು ಚೆನ್ನಾಗಿ ನೋಡಿಕೊಳ್ಳಲಾಗುವುದು ಎಂಬ ವಿಶ್ವಾಸವನ್ನು ಕುದುರಿಸಬೇಕಾದರೆ, ಬೇರೆ ಕೆಲವು ದೇಶಗಳಲ್ಲಿ ಮಾಡಿದಂತೆ ಸರಕಾರವೇ ಈ ಹಣವನ್ನು ಕೊಡಬೇಕಾಗಿತ್ತು. ಈ ಮೊದಲು ಹಣಕಾಸು ಮಂತ್ರಿಗಳು ಪ್ರಕಟಿಸಿದ ಪ್ಯಾಕೇಜ್ ಕೂಡ ಅವರಲ್ಲಿ ವಿಶ್ವಾಸ ಮೂಡಿಸಿರಲಿಲ್ಲ. ಏಕೆಂದರೆ ಅವರು ಪ್ರಕಟಿಸಿದ 1.7ಲಕ್ಷ ಕೋಟಿ ರೂ. ವಾಸ್ತವಕ್ಕಿಂತ ಹೆಚ್ಚಾಗಿ ಲೆಕ್ಕಕ್ಕೆ ಮಾತ್ರವೇ.

ಇದರಲ್ಲಿ ಸುಮಾರು 35,000 ಕೋಟಿ ರೂ. ನೇರ ನಗದು ವರ್ಗಾವಣೆಗೆ ಇದೆ. ಇದು ಜಗತ್ತಿನಲ್ಲೇ ಈ ಬಾಬ್ತಿಗೆ ಕೊಟ್ಟಿರುವ ಅತೀಕಡಿಮೆ ಮೊತ್ತ. ವಲಸೆ ಕಾರ್ಮಿಕರು ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿರುವ ಅಸಂಘಟಿತ ವಲಯದ ಕಾರ್ಮಿಕರು ಇದರಿಂದ ಹೊರತಾಗಿದ್ದಾರೆ. ಅವರ ಮನೆಯತ್ತ ದೀರ್ಘ ನಡಿಗೆ ಸರಕಾರ ಕೊಡಮಾಡಿದ ಈ ಪ್ಯಾಕೇಜ್ ವಿರುದ್ಧ ಒಂದು ಅವಿಶ್ವಾಸದ ಮತವಾಗಿದೆ. ಸರಕಾರ ಇದಕ್ಕೆ ಇನ್ನೂ ಬಹಳಷ್ಟು ಆಯಾಮಗಳನ್ನು ಸೇರಿಸಬೇಕಾಗಿದೆ ಎಂಬುದು ಸ್ಪಷ್ಟ. ಇದರಲ್ಲಿ ಹೆಚ್ಚು ವ್ಯಾಪಕವಾದ ನಗದು ವರ್ಗಾವಣೆಯೂ ಸೇರಿದೆ. ಮೂರು ವಾರಗಳ ಲಾಕ್‌ಡೌನನ್ನು ಎದುರಿಸಲು ಮೊದಲ ಕಂತಾಗಿ ಕನಿಷ್ಟ 5000ರೂ.ಗಳನ್ನು ಜನಧನ ಮತ್ತು ಮನರೇಗ ಖಾತೆಗಳ ಮೂಲಕ ವರ್ಗಾಯಿಸಬೇಕಾಗಿದೆ.

ಗಡಿಗಳನ್ನು ಮುಚ್ಚಿ ಬಿಡುವುದರ ಇನ್ನೊಂದು ಆಯಾಮ ಅಂದರೆ ಅದು ಹೇಗೆ ಆವಶ್ಯಕ ಸರಕುಗಳ ಅಂತರ–ರಾಜ್ಯ ಸಾಗಾಣಿಕೆಗೆ ಅಡ್ಡಿಯುಂಟು ಮಾಡುತ್ತದೆ ಎಂಬುದು. ಕೇಂದ್ರ ಸರಕಾರ ಆವಶ್ಯಕ ಸರಕುಗಳ ಪಟ್ಟಿಯನ್ನು ವಿಸ್ತರಿಸಿದೆ, ಆದರೆ ಗಡಿಗಳನ್ನು ಮುಚ್ಚಿರುವುದರಿಂದಾಗಿ ಇವನ್ನು ಹೊತ್ತ ಟ್ರಕ್ಕುಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಾಲುಗಟ್ಟಿ ನಿಂತಿವೆ. ಪ್ರತಿಯೊಂದು ರಾಜ್ಯವೂ ಒಂದಿಲ್ಲೊಂದು ಸರಕುಗಳಿಗೆ ಬೇರೆ ರಾಜ್ಯಗಳನ್ನು ಅವಲಂಬಿಸಿದೆ. ಗಡಿಗಳನ್ನು ಮುಚ್ಚುವುದು ಈ ಸಾಗಾಣಿಕೆಯಲ್ಲಿ ಬಿಕ್ಕಟ್ಟಿಗೆ ಕಾರಣವಾಗಬಾರದು. ಆಗಲೇ ಆವಶ್ಯಕ ಸರಕುಗಳ ಬೆಲೆಗಳು ಗಗನಕ್ಕೇರಿವೆ. ಇವುಗಳ ಪೂರೈಕೆಗೆ ಉಂಟಾಗಿರುವ ಈ ತಡೆಯನ್ನು ಕೇಂದ್ರ ಸರಕಾರ ನಿವಾರಿಸಬೇಕಾಗಿದೆ.

ಈ ಸಂದರ್ಭದಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಗಳು ಕೈಗೊಂಡ ಉತ್ತಮ ಕ್ರಮಗಳಿಗಿಂತ ಬಹಳ ಹೆಚ್ಚನ್ನು ಮಾಡಬೇಕಾಗಿದೆ. ಕೆಲವು ರಾಜ್ಯ ಸರಕಾರಗಳು ಕೇಂದ್ರ ಸರಕಾರಕ್ಕಿಂತ ಎಷ್ಟೋ ಉತ್ತಮ ಕೆಲಸಗಳನ್ನು ಮಾಡಿವೆ. ಅನಾಹುತ ನಿರ್ವಹಣಾ ಕಾಯ್ದೆ(ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಆಕ್ಟ್) ಹೆದ್ದಾರಿಗಳಲ್ಲಿದ್ದ ಕಾರ್ಮಿಕರನ್ನು ಜೈಲಿಗೆ ಹಾಕುವ ಶಿಕ್ಷಾ ಕ್ರಮಗಳನ್ನು ಮಾತ್ರವೇ 'ಒಳಗೊಂಡಿಲ್ಲ. ಅದರಲ್ಲಿ ರಾಜ್ಯಗಳಿಗೆ ನಿಧಿ ವರ್ಗಾವಣೆಯ ಒಂದು ಕಲಮು ಕೂಡ ಇದೆ. ಈ ಕಾನೂನು ವಿಧಿಸಿದಂತೆ ನಿಧಿ ವರ್ಗಾವಣೆ ಮಾಡಿ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗಬೇಕು.

ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಕೇರಳದ ಎಲ್‌ಡಿಎಫ್ ಸರಕಾರ ಕೊರೊನ ವೈರಸ್ ಬಿಕ್ಕಟ್ಟನ್ನು ಎದುರಿಸುವಲ್ಲಿ ಒಂದು ಜನಕೇಂದ್ರಿತ ಮುತುವರ್ಜಿಗಳ ಸ್ಫೂರ್ತಿದಾಯಕ ಉದಾಹರಣೆಯಾಗಿ ಮುಂದೆ ಬಂದಿದೆ. ಲಾಕ್‌ಡೌನಿನ ಎಷ್ಟೋ ಮೊದಲೇ ಪರಿಹಾರ ಪ್ಯಾಕೇಜನ್ನು ಪ್ರಕಟಿಸಿದ್ದು ಮಾತ್ರವೇ ಅಲ್ಲದೆ, ವಲಸೆ ಕಾರ್ಮಿಕರಿಗೆ ಆಶ್ರಯ ಮತ್ತು ಆಹಾರ ಒದಗಿಸಲು ಒಂದು ಧೋರಣೆಯನ್ನೂ ಕೂಡ ಅದು ರೂಪಿಸಿತು. ಭಾರತದ ಸರ್ವೋಚ್ಚ ನ್ಯಾಯಾಲಯ ಅದರ ಈ ಪ್ರಯತ್ನಗಳನ್ನು ಗುರುತಿಸಿದೆ ಮತ್ತು ಶ್ಲಾಘಿಸಿದೆ. ಕೇರಳ ಸರಕಾರ ಮಾರುಕಟ್ಟೆಯಿಂದ ಸಾಲ ಎತ್ತಲು ಇರುವ ಮಿತಿಯನ್ನು ಹೆಚ್ಚಿಸಲು ಎಫ್‌ಆರ್‌ಬಿಎಂ ಕಾಯ್ದೆಯ ಶರತ್ತುಗಳಿಂದ ವಿನಾಯ್ತಿಯ ಮೂಲಕ ಅನುಮತಿ ಕೊಡಬೇಕು ಎಂದು ಕೇಂದ್ರ ಸರಕಾರವನ್ನು ಮತ್ತೆ–ಮತ್ತೆ ಕೇಳುತ್ತ ಬಂದಿದೆ. ಆದರೆ ಇದಕ್ಕೆ ಕೇಂದ್ರದ ಮಂಜೂರಾತಿ ಸಿಕ್ಕಿಲ್ಲ. ಈಗ ಕೇಂದ್ರ ಸರಕಾರ ಪ್ರಧಾನ ಮಂತ್ರಿಗಳ ಹೆಸರಿನಲ್ಲಿ ಒಂದು ಟ್ರಸ್ಟನ್ನು ರಚಿಸಿದೆ. ಪ್ರಧಾನ ಮಂತ್ರಿಗಳ ಪರಿಹಾರ ನಿಧಿ ಆಗಲೇ ಇರುವಾಗ ಇಂತಹೊಂದು ಟ್ರಸ್ಟಿನ ಅಗತ್ಯ ಬಹಳಷ್ಟು ಪ್ರಶ್ನಾರ್ಹ. ಅಲ್ಲದೆ ಇದು ಇಂತಹ ಎಲ್ಲ 'ದೇಣಿಗೆ'ಗಳನ್ನು ಕೇಂದ್ರೀಕರಿಸುತ್ತದೆ, ರಾಜ್ಯಗಳೊಂದಿಗೆ ಇವನ್ನು ಹಂಚಿಕೊಳ್ಳುವ ಅಂಶ ಇದರಲ್ಲಿ ಇಲ್ಲ. ಅಲ್ಲದೆ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ ಸಿಎಸ್‌ಆರ್('ಕಾರ್ಪೊರೇಟ್‌ಗಳ ಸಾಮಾಜಿಕ ಹೊಣೆಗಾರಿಕೆ'ಯ) ನಿಧಿಗಳನ್ನು ಕೊರೊನ ವೈರಸ್ ವಿರುದ್ಧ ಚಟುವಟಿಕೆಗಳಿಗೆ ಬಳಸಬಹುದು ಎಂದು ಅಧಿಸೂಚನೆಯನ್ನೂ ಪ್ರಕಟಿಸಿದೆ. ಈ ಅಧಿಸೂಚನೆ, ರಾಜ್ಯಗಳು ಈ ಕ್ಷೇತ್ರದಲ್ಲಿ ಮಾಡುವ ಪ್ರಯತ್ನಗಳಿಗೂ ಕಾರ್ಪೊರೇಟ್‌ಗಳು ದೇಣಿಗೆ ನೀಡಬಹುದು ಎಂಬ ಅಂಶವನ್ನೂ ಹೊಂದಿರಬೇಕು. **ಕೇಂದ್ರವು ರಾಜ್ಯಗಳೊಂದಿಗೆ ಹೆಚ್ಚು ಸಮಾಲೋಚನೆಯ ಒಂದು ವ್ಯವಸ್ಥೆಯನ್ನು ಬೆಳೆಸಬೇಕಾಗಿದೆ, ಈ ಮೂಲಕ ರಾಜ್ಯಗಳು ಪರಸ್ಪರ ಅನುಭಗಳಿಂದ ಕಲಿಯಲೂ ನೆರವಾಗುತ್ತದೆ.**

ಆರೋಗ್ಯ ವಲಯದಲ್ಲಿ ಅಪಾಯಕಾರೀ ಕೊರತೆಗಳು

ಈ ವಾರ ತೋರಿಸಿರುವ ಮತ್ತೊಂದು ಸಂಗತಿಯೆಂದರೆ, ಈ ಸವಾಲನ್ನು ಎದುರಿಸುವಲ್ಲಿ ಆರೋಗ್ಯ ವಲಯದ ಅಗತ್ಯಗಳ ವಿಷಯದಲ್ಲಿ ಸರಕಾರ ಬಹಳ ಹಿಂದೆ ಉಳಿದಿದೆ ಎಂಬುದು. ವೈದ್ಯಕೀಯ ಸಿಬ್ಬಂದಿಗೆ ಅಗತ್ಯ ವೈಯಕ್ತಿಕ ಸುರಕ್ಷತೆಯ ಸಾಧನಗಳು(ಪಿಪಿಇ) ಇಲ್ಲ. ವೈರಸ್‌ನಿಂದ ಬಾಧಿತರಾದವರಿಗೆ ನೆರವು ಒದಗಿಸುವಲ್ಲಿ ಮುಂಚೂಣಿಯಲ್ಲಿರುವ ಡಾಕ್ಟರುಗಳು, ನರ್ಸ್‌ಗಳು ಮತ್ತು ಆರೋಗ್ಯಪಾಲಕರ ರಕ್ಷಣೆಗೆ ಈ ಪಿಪಿಇಗಳು ಅನಿವಾರ್ಯ. ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಆಶಾ ಕಾರ್ಯಕರ್ತೆಯರ ಭತ್ಯೆಗಳನ್ನು ಹೆಚ್ಚಿಸುವುದಂತೂ ದೂರ, ಅವರಿಗೆ ತರಬೇತಿ ನೀಡುವುದನ್ನು ಕೂಡ ಸರಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಇವರು ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲ ಪ್ರಕರಣ ಮೇಲೆ ನಿಗಾ ಇಡಬೇಕಾದ ಆರೋಗ್ಯ ಕಾರ್ಯಕರ್ತೆಯರು.

ಭಾರತ ಈಗಲೂ ಅತೀ ಕಡಿಮೆ ತಪಾಸಣೆ ನಡೆಸುವ ಧೋರಣೆಯನ್ನು ಅನುಸರಿಸುತ್ತಿದೆ. ಏಕೆಂದರೆ ಸರಿಯಾದ ತಪಾಸಣಾ ಕಿಟ್‌ಗಳ ಕೊರತೆಯಿದೆ. ಇದು ಹಾನಿಕಾರಕ ಎಂದು ಸುಮಾರಾಗಿ ಎಲ್ಲ ಸಾರ್ವಜನಿಕ ಆರೋಗ್ಯ ಪರಿಣಿತರು ಹೇಳುತ್ತಿದ್ದಾರೆ. ಏಕೆಂದರೆ ಇದು ಪತ್ತೆಯಾಗದ ಪ್ರಕರಣಗಳಿಂದ ಸೋಂಕು ಹರಡುವ ಒಂದು ಅಪಾಯಕಾರಿ ಸನ್ನಿವೇಶಕ್ಕೆ ಎಡೆಮಾಡಿ ಕೊಡಬಹುದು. ಈ ಲಾಕ್‌ಡೌನಿನ ಅವಧಿಯಲ್ಲಿ ಸರಕಾರ ಈ ಕೊರತೆಗಳನ್ನು ತುಂಬುವುದನ್ನು ಒಂದು ಮಿಶನ್ ಮಾದರಿಯಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಇದಕ್ಕೆ ಸಾಕಷ್ಟು ಹಣವನ್ನು ಎತ್ತಿಡ ಬೇಕಾಗುತ್ತದೆ. ಈಗ ಪ್ರಕಟಿಸಿರುವ 15,000 ಕೋಟಿ ರೂ. ಏನೇನೂ ಸಾಲದು.

ಆರೋಗ್ಯ ತುರ್ತಿನ ಪರಿಸ್ಥಿತಿಯಿರುವಾಗ ಕೈಗೊಳ್ಳುವ ಎಲ್ಲ ಕ್ರಮಗಳಲ್ಲಿ ಭಾರತದ ಸಂವಿಧಾನವನ್ನು ಒಂದು ಪರಾಮರ್ಶೆಯ ಅಂಶವಾಗಿ ಬಳಸುವುದು ಇನ್ನೂ ಹೆಚ್ಚು ಅಗತ್ಯವಾಗಿದೆ. ಒಕ್ಕೂಟ ತತ್ವ ಮತ್ತು ರಾಷ್ಟ್ರೀಯ ಆದಾಯಗಳಲ್ಲಿ ರಾಜ್ಯಗಳಿಗೆ ನ್ಯಾಯಯುತ ಪಾಲಿನ ಕುರಿತಾದ ಸಂವಿಧಾನಿಕ ಅಂಶ ಇವುಗಳಲ್ಲಿ ಒಂದು. ಪ್ರಜಾಪ್ರಭುತ್ವ ಮತ್ತು ಎಲ್ಲ ನಾಗರಿಕರ ಸಮಾನ ಸ್ಥಾನಮಾನ ಇನ್ನೊಂದು ಅಂಶ. ಭಾರತದ ಜನಗಳನ್ನು ಈ ಕೊರೊನ ವೈರಸ್ಸಿನಿಂದ ಕಾಪಾಡುವ ಸಮರದಲ್ಲಿ ಭಾರತದ ಐಕ್ಯತೆ ನಿರ್ಣಾಯಕ ಅಂಶವಾಗಿದೆ. ಇಡೀ ದೇಶವನ್ನು ತಟ್ಟುವ ನಿರ್ಧಾರಗಳನ್ನು ಕೈಗೊಳ್ಳುವಾಗ ಭಾರತ ಸರಕಾರ ನಮ್ಮ ಸಂವಿಧಾನಿಕ ಚೌಕಟ್ಟಿನ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ಸ್ವರೂಪವನ್ನು ಮನಸ್ಸಿನಲಿ ಇಟ್ಟುಕೊಳ್ಳುವುದು ಈ ಐಕ್ಯತೆಯನ್ನು ಬಲಪಡಿಸುತ್ತದೆ.

ಭಾರತದಲ್ಲಿ ಕೋವಿಡ್ ಮಹಾಮಾರಿಯನ್ನು ಎದುರಿಸಲು ಮೋದಿ ಸರಕಾರ ಮಾಡುತ್ತಿರುವುದೇನು, ಮಾಡಬೇಕಾದುದೇನು?

ಭಾರತದಲ್ಲಿ ಕೊರೊನ ವೈರಸ್ ಬಿಕ್ಕಟ್ಟು ಆಳಗೊಳ್ಳುತ್ತಿದೆ. ಆದರೆ ಮೋದಿ ಸರಕಾರ ಇದನ್ನು ಪರಿಣಾಮಕಾರಿಯಾಗಿ ಎದುರಿಸುತ್ತಿದೆಯೇ ಎಂಬ ಬಗ್ಗೆ ಹಲವಾರು ಪ್ರಶ್ನೆಗಳು ಏಳುತ್ತಿವೆ. ಈ ಕುರಿತಂತೆ ಸಮಗ್ರವಾಗಿ ವಿಶ್ಲೇಷಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಏಳು ಪ್ರಶ್ನೆಗಳನ್ನು ಎತ್ತಿದ್ದಾರೆ.

ಮೊದಲನೆಯದಾಗಿ, ಈ ಕುರಿತ ಮೂಲ ಮಾಹಿತಿಗಳನ್ನು ತಿಳಿಸದೆ ಗುಟ್ಟು ಮಾಡಲಾಗುತ್ತಿದೆ ಎಂದು ಆರೋಗ್ಯ ವರದಿಗಾರರು ಹೇಳುತ್ತಿದ್ದಾರೆ. ಅವರೆಲ್ಲರೂ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೋವಿಡ್–19 ವೈರಸ್ ಬಗ್ಗೆ ನಮಗೆ ಸರಕಾರದಿಂದ ಸ್ಪಷ್ಟ ಮತ್ತು ಪ್ರಾಮಾಣಿಕ ಮಾಹಿತಿ ಬೇಕು ಎಂದು ಯೆಚುರಿ ಆಗ್ರಹಿಸಿದ್ದಾರೆ. ನೈಜ ಪ್ರಶ್ನೆಗಳನ್ನು ಬೇರೆಡೆಗೆ ತಿರುಗಿಸುವುದು ಮತ್ತು ಅದಕ್ಕೆ ಅಡ್ಡಿ ಪಡಿಸುವುದೆಂದರೆ ಲಕ್ಷಾಂತರ ಭಾರತೀಯ ಜೀವಗಳೊಂದಿಗೆ ಆಟವಾಡಿದಂತೆಯೇ. **ಆರೋಗ್ಯ ಮಂತ್ರಿಗಳು ಮತ್ತು ಗೃಹಮಂತ್ರಿಗಳು ಏಕೆ ಪ್ರತಿದಿನ ಸಾಯಂಕಾಲದ ಪತ್ರಿಕಾ ಮಾಹಿತಿಯ ನೇತೃತ್ವ ವಹಿಸುತ್ತಿಲ್ಲ ಎಂದು ಯೆಚುರಿ ಪ್ರಶ್ನಿಸಿದ್ದಾರೆ**

ಎರಡನೆಯದಾಗಿ, ಸೋಂಕು ಹರಡಿಕೆಯ ವ್ಯಾಪಕವಾದ ತಪಾಸಣೆ ಮಾಡಬೇಕಾಗಿದೆ. ಇದುವರೆಗೆ 38,442 ತಪಾಸಣೆಗಳನ್ನು ಮಾತ್ರ ಮಾಡಲಾಗಿದೆ. ಇದು ನಮ್ಮ ಜಸನಸಂಖ್ಯೆಯ ಕೇವಲ 0.032ಶೇ. ಬ್ರಿಟನ್ನಿನಲ್ಲಿ 1.92 ಶೇ. ಮತ್ತು ಅಮೆರಿಕಾದಲ್ಲಿ 2.6ಶೇ. ತಪಾಸಣೆ ಮಾಡಲಾಗಿದೆ. ಭಾರತೀಯ ವೈಧ್ಯಕೀಯ ಸಂಶೋಧನಾ ಮಂಡಳಿ ಕೇವಲ ಅಮೆರಿಕ ಮತ್ತು ಯುರೋಪಿಯನ್ ಮಾದರಿ ತಪಾಸಣಾ ಕಿಟ್‌ಗಳಿಗೆ ಮಾತ್ರ ಅನುಮತಿ ನೀಡಿದ್ದು, ಉಳಿದ ಕಿಟ್‌ಗಳಿಗೆ ಮಂಜೂರಾತಿ ನೀಡುವಲ್ಲಿ ಬಹಳ ವಿಳಂಬವಾಗುತ್ತಿದೆ ಎಂದು ಹೇಳಲಾಗುತ್ತಿದೆ. ತಪಾಸಣೆಯನ್ನು ಸೀಮಿತಗೊಳಿಸುವ ಇಂತಹ ಕ್ರಮಗಳು ಸೋಂಕು ಎಷ್ಟು ಹರಡಿದೆ ಎಂದು ಅಂದಾಜು ಮಾಡುವಲ್ಲಾಗಲೀ, ಅಥವ ಅದರ ಹರಡಿಕೆಯನ್ನು ತಡೆಯುವ ಗಟ್ಟಿ ಕ್ರಮ ಕೈಗೊಳ್ಳುವಾಗಲಾಗಲೀ ಯಾವುದೇ ರೀತಿಯಲ್ಲಿ ಸಹಾಯ ಮಾಡುವುದಿಲ್ಲ.

ಮೂರು, ಡಬ್ಲ್ಯು.ಹೆಚ್.ಒ. (ವಿಶ್ವ ಆರೋಗ್ಯ ಸಂಘಟನೆಯ) ಎಚ್ಚರಿಕೆಗಳಂತೆ ಆರೋಗ್ಯಪಾಲನೆ ಒದಗಿಸುವವರಿಗೆ ರಕ್ಷಣಾತ್ಮಕ ಉಡುಗೆಗಳು ಮತ್ತು ಮುಖಗವಸುಗಳನ್ನು ಒದಗಿಸಬೇಕು. ಆದರೆ ಇವನ್ನು ಖರೀದಿಸುವಲ್ಲಿ ಅನಗತ್ಯ ವಿಳಂಬಗಳಾಗುತ್ತಿವೆ ಎಂದು ದೇಶದ ಹಲವೆಡೆಗಳಿಂದ ವರದಿಗಳು ಬಂದಿವೆ. **ಈ ವಿಳಂಬಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕಾಗಿದೆ. ಈ ವಿಳಂಬಕ್ಕೆ ಹೊಣೆಗಾರರು ಮತ್ತು ಅತ್ಯಂತ ಹೆಚ್ಚು ರಕ್ಷಣೆಯ ಅಗತ್ಯವಾಗಿರುವ ಜನಗಳ ಆರೋಗ್ಯದೊಂದಿಗೆ ಆಟವಾಡುತ್ತಿರುವವರು ಯಾರು** ಎಂದು ಯೆಚುರಿ ಪ್ರಶ್ನಿಸಿದ್ದಾರೆ.


ನಾಲ್ಕು, ಮೋದಿ "ಸಹಕಾರೀ ಒಕ್ಕೂಟ ತತ್ವ' ದ ಮಾತಾಡುತ್ತ ಅಧಿಕಾರಕ್ಕೆ ಬಂದರು. ಅವರು ರಾಜ್ಯ ಸರಕಾರಗಳಿಗೆ ಕಿವಿಗೊಡಬೇಕು, ಅವುಗಳಿಗೆ ಅಗತ್ಯವಾದ ಎಲ್ಲ ಬೆಂಬಲವನ್ನು ಒದಗಿಸಬೇಕು, ಬದಲಾಗಿ, ಅಧಿಕಾರಗಳನ್ನು ಕೇಂದ್ರೀಕರಿಸಲಾಗುತ್ತಿದೆ. **ಈ ವೈರಾಣುವನ್ನು ಸೋಲಿಸಬೇಕಾದ್ದು ರಾಜ್ಯಸರಕಾರಗಳೇ, ಅದಕ್ಕೆ ಕೇಂದ್ರದ ಬೆಂಬಲ ಬೇಕು.**

ಐದು, ಊರಿಗೆ ಹೋಗದೆ ದಿಲ್ಲಿಯಲ್ಲೇ ಉಳಿದುಕೊಂಡಿರುವ ವಲಸೆ ಕಾರ್ಮಿಕರಿಗೆ ಕೇಂದ್ರ ಸರಕಾರ ಅಥವ ವಿವಿಧ ರಾಜ್ಯಸರಕಾರಗಳು ಪ್ರಕಟಿಸಿರುವ ಪರಿಹಾರಗಳು ತಲುಪುವುದಿಲ್ಲ. ಅವರೆಲ್ಲರಿಗೆ ಸರಕಾರದಿಂದ ಕಣ್ಣಿಗೆ ಕಾಣುವಂತಹ , ಸಕ್ರಿಯ ಬೆಂಬಲ ಬೇಕು. ಇದನ್ನು ಕೇಂದ್ರ ಒದಗಿಸಬೇಕು. ಖಾಸಗಿ ಉದಾರ ದಾನಗಳು ಸ್ವಾಗತಾರ್ಹವಾದರೂ, ಅದು ಸರಕಾರ ತನ್ನ ಮೂಲ ಸಂವಿಧಾನಿಕ ಕರ್ತವ್ಯವನ್ನು ನಿಭಾಯಿಸಲು ವಿಫಲವಾಗಿರವುದನ್ನು ಭರಿಸಲಾರದು.

ಆರು, ವೈರಸ್ ಭೀತಿ ಸಮಾಜವನ್ನು ಒಡೆಯುತ್ತಿರುವ ಲಕ್ಷಣಗಳು ಕಾಣುತ್ತಿವೆ. ವಲಸೆ ಕಾರ್ಮಿಕರು ಮಾತ್ರವಲ್ಲ, ವೈರಸ್ ವಿರುದ್ಧ ಸಮರದಲ್ಲಿ ತೊಡಗಿರುವ ಡಾಕ್ಟರುಗಳು, ನರ್ಸ್‌ಗಳು, ಅಷ್ಟೇ ಅಲ್ಲ, ವಿಮಾನಯಾನ ಸಿಬ್ಬಂದಿಗಳನ್ನೂ ಬಹಿಷ್ಕರಿಸುತ್ತಿರುವ ಘಟನೆಗಳು ವರದಿಯಾಗುತ್ತಿವೆ. ಸಾಮಾಜಿಕ ಅಪಸ್ವರ ಸೃಷ್ಟಿಸುವ, ಕೆಲವು ವಿಭಾಗಗಳಿಗೆ ಮಸಿ ಬಳಿಯುವ, ಕಾರ್ಯಕರ್ತರನ್ನು ಮತ್ತು ದುರ್ಬಲ ವಿಭಾಗಗಳನ್ನು ಬಹಿಷ್ಕರಿಸುವ ಕೋಮುವಾದಿ, ಜಾತಿವಾದಿ ಮತ್ತು ಸಂಕುಚಿತವಾದಿ ಶಕ್ತಿಗಳ ಇಂತಹ ಪ್ರಯತ್ನಗಳನ್ನು ಪ್ರತಿರೋಧಿಸಬೇಕು. ಇಲ್ಲವಾದರೆ, **ಕೇಂದ್ರ ಸರಕಾರ ಇದ್ದಕ್ಕಿದ್ದಂತೆ ಯೋಚನೆ ಮಾಡದೇ ಪ್ರತಿಕ್ರಿಯಿಸುವುದರಿಂದ ಭಾರತದ ಆರೋಗ್ಯ ಮತ್ತು ಮಾನವೀಯ ಬಿಕ್ಕಟ್ಟು ಮತ್ತಷ್ಟು ಹದಗೆಡುತ್ತದೆ** ಎಂದು ಯೆಚುರಿ ಎಚ್ಚರಿಸಿದ್ದಾರೆ.

ಅಂತಿಮವಾಗಿ, 'ಪಿಎಂ ಕೇರ್ಸ್" ಎಂಬ ಹೊಸದೊಂದು ನಿಧಿಯನ್ನು ಆರಂಭಿಸಲಾಗಿದೆ. ಈ ಬಗೆ ಹಲವೆಡೆಗಳಿಂದ ಟೀಕೆಗಳು ಬಂದಿವೆ. 'ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ' ಇರುವಾಗ ಹೊಸದೊಂದು ನಿಧಿಯ ಅಗತ್ಯವೇನಿದೆ? ಈ ಹೊಸ ನಿಧಿಯ ಬಗ್ಗೆ ಸ್ಪಷ್ಟತೆಗಳಿಲ್ಲ, ಆದ್ದರಿಂದ ಅದರ ಸಂಗ್ರಹಗಳ ಬಗ್ಗೆ ಹಲವು ಪ್ರಶ್ನೆಗಳು ಏಳುತ್ತವೆ. **ಈ ಸರಕಾರ ಯಾವುದೇ ಪಾರದರ್ಶಕತೆಯಿಲ್ಲದ ಚುನಾವಣಾ ಬಾಂಡುಗಳನ್ನು ತಂದು ಸಾವಿರಾರು ಕೋಟಿಗಳನ್ನು ಅನಾಮಧೇಯವಾಗಿ ಸಂಗ್ರಹಿಸಿತು ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ** ಎಂದು ಸೀತಾರಾಂ ಯೆಚುರಿಯವರು ನೆನಪಿಸಿದ್ದಾರೆ.

ಮಹಾಮಾರಿಯಿಂದ ರಕ್ಷಣೆಗಾಗಿ ಆಹಾರ ಪಡಿತರವನ್ನು ಹೆಚ್ಚಿಸೋಣ



ಕಾರ್ಮಿಕರಿಗೆ ಆಹಾರ ಖರೀದಿಸುವ ಸಾಮರ್ಥ್ಯ ಕಡಿಮೆಯಾಗುತ್ತಿದ್ದಂತೆ ಅವರ ಮತ್ತು ಅವರ ಮನೆಯವರು ಹಸಿವು ಹಾಗೂ ಅಪೌಷ್ಟಿಕತೆಯ ಕೆಳ ಹಂತವನ್ನು ತಲುಪಿಬಿಡುತ್ತಾರೆ. ಹೀಗೆ ಪೆಡಂಭೂತದಂತೆ ನಮ್ಮ ಮುಂದೆ ನಿಂತಿರುವ ಆಹಾರದ ಅಭದ್ರತೆಯ ಸಮಸ್ಯೆಯ ನಿವಾರಿಸುವುದಕ್ಕೆ ಆಹಾರ ಪಡಿತರ 'ಪದ್ಧತಿಯನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸಬೇಕು. ಅದು ನಮ್ಮ ಹಣಕಾಸು ಮಂತ್ರಿಗಳು ನೀಡುತ್ತಿರುವ ಭರವಸೆಗಿಂತ ಉತ್ತಮ ಪರಿಹಾರವಾಗಬಲ್ಲದು. ಈ ಎಲ್ಲಾ ಕ್ರಮಗಳು ಕನಿಷ್ಠ ಮೂರು ತಿಂಗಳು ಮುಂದುವರಿಯಬೇಕು. ಅನಂತರ ಇದನ್ನು ಪುನರ್ ಪರಿಶೀಲಿಸಬೇಕು. ವಿಸ್ತೃತ ರೇಷನ್ ವ್ಯವಸ್ಥೆಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳುವ ಸೃಜನಶೀಲ ಯೋಜನೆ ಸದ್ಯದ ಮಹಾಮಾರಿಯಿಂದ ರಕ್ಷಣೆಯಾಗುವುದರ ಜೊತೆಗೆ ಜನತೆಯನ್ನು ಸುಪುಷ್ಟರು ಹಾಗೂ ಆರೋಗ್ಯವಂತರನ್ನಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬದಲಾವಣೆಯನ್ನು ತರುವುದಕ್ಕೂ ಅನುಕೂಲವಾಗುತ್ತದೆ.

ಪ್ರೊ. ಮಧುರಾ ಸ್ವಾಮಿನಾಥನ್ ಅನು: ಟಿ.ಎಸ್. ವೇಣುಗೋಪಾಲ್

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಸಾಮಾಜಿಕ ರಕ್ಷಣಾ ಕ್ರಮಕ್ಕಾಗಿ 1.7 ಲಕ್ಷಕೋಟಿ ಪರಿಹಾರ ಪ್ಯಾಕೇಜ್ ಘೋಷಿಸಿದ್ದಾರೆ. 21 ದಿನಗಳ ಲಾಕ್‌ಡೌನ್ ಸಮಯದಲ್ಲಿ ಕೋವಿಡ್–19 ಅನ್ನು ಎದುರಿಸಲು ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಆಹಾರ ಭದ್ರತಾ ದೃಷ್ಟಿಯಿಂದ ಈ ಪ್ಯಾಕೇಜ್ ಸಾಲುವುದಿಲ್ಲ. ಸೂಚಿಸಿರುವ ಪಟ್ಟಿಗೆ ಇನ್ನು ಹಲವು ಪದಾರ್ಥಗಳನ್ನು ಸೇರಿಸಿ ಸಾರ್ವತ್ರಿಕ ಪಡಿತರ ಪದ್ಧತಿಯನ್ನು ತಕ್ಷಣ ಮತ್ತಷ್ಟು ವಿಸ್ತರಿಸಬೇಕು. ಜೊತೆಗೆ ನಗರ ಪ್ರದೇಶಗಳಲ್ಲಿ ತೊಂದರೆಯಲ್ಲಿರುವ ಜನರಿಗೆ ತಕ್ಷಣ ಊಟ ಒದಗಿಸುವುದಕ್ಕಾಗಿ ವಿಶೇಷ ಕ್ರಮವನ್ನು ಕೈಗೊಳ್ಳಬೇಕು. ಈ ಲಾಕ್‌ಡೌನಿನಿಂದ ಲಕ್ಷಾಂತರ ದಿನಗೂಲಿ ನೌಕರರು ಹಾಗೂ ಹೆಚ್ಚಾಗಿ ಸ್ವಯಂ ಉದ್ಯೋಗಿಗಳೇ ಇರುವ ಅಸಂಘಟಿತ ಕಾರ್ಮಿಕ ವರ್ಗ ತೀವ್ರ ತೊಂದರೆಗೆ ಸಿಕ್ಕಿದೆ. ವಿಶ್ವದಲ್ಲೇ ಅತಿ ಹೆಚ್ಚು ಅಪೌಷ್ಟಿಕತೆಯಿಂದ ನರಳುತ್ತಿರುವ ಜನರ ದೇಶ ಎಂಬ ದಾಖಲೆ ಬೇರೆ ನಮ್ಮ ದೇಶಕ್ಕಿದೆ. ಜೊತೆಗೆ ಇವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಾರ್ಮಿಕರಿಗೆ ಆಹಾರ ಖರೀದಿಸುವ ಸಾಮರ್ಥ್ಯ ಕಡಿಮೆಯಾಗುತ್ತಿದ್ದಂತೆ ಅವರ ಮತ್ತು ಅವರ ಮನೆಯವರು ಹಸಿವು ಹಾಗೂ ಅಪೌಷ್ಟಿಕತೆಯ ಕೆಳ ಹಂತವನ್ನು ತಲುಪಿಬಿಡುತ್ತಾರೆ. ಹೀಗೆ ಪೆಡಂಭೂತದಂತೆ ನಮ್ಮ ಮುಂದೆ ನಿಂತಿರುವ ಆಹಾರದ ಅಭದ್ರತೆಯ ಸಮಸ್ಯೆಯ ನಿವಾರಿಸುವುದಕ್ಕೆ ಆಹಾರ ಪಡಿತರ 'ಪದ್ಧತಿಯನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸಬೇಕು. ಅದು ನಮ್ಮ ಹಣಕಾಸು ಮಂತ್ರಿಗಳು ನೀಡುತ್ತಿರುವ ಭರವಸೆಗಿಂತ ಉತ್ತಮ ಪರಿಹಾರವಾಗಬಲ್ಲದು.

ಇತಿಹಾಸದ ಪಾಠಗಳು

ಈಗ ನಮ್ಮನ್ನು ಅನಿರೀಕ್ಷಿತವಾಗಿ ಎರಗಿರುವ ಆರೋಗ್ಯ ಹಾಗೂ ಆರ್ಥಿಕ ಬಿಕ್ಕಟ್ಟು ದೊಡ್ಡ ಪ್ರಮಾಣದಲ್ಲಿ ಜನರನ್ನು ಬಲಿತೆಗೆದುಕೊಳ್ಳುವ ಸಾಧ್ಯತೆಗಳಿವೆ. ಈ ಹೊತ್ತಿನಲ್ಲಿ ಎಲ್ಲರಿಗೂ ಸಾಕಷ್ಟು ಆಹಾರ ಸಿಗುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ತಕ್ಷಣವೇ ನಾವು ಆಹಾರ ಭದ್ರತಾ ವ್ಯವಸ್ಥೆಯನ್ನು ವಿಸ್ತರಿಸಬೇಕು. ಹೀಗೆ ವಿಸ್ತರಿಸುವಾಗ ಹಲವು ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅದನ್ನು ಪರಿಶೀಲಿಸುವ ಮೊದಲು ಕೊರತೆಯುಂಟಾದಾಗ ಬೇರೆ ದೇಶಗಳು ಪಡಿತರ ಪದ್ಧತಿಯನ್ನು ಹೇಗೆ ಬಳಸಿಕೊಂಡಿವೆ ಎಂಬುದನ್ನು ಗಮನಿಸುವುದು ಒಳ್ಳೆಯದು. ಅವರ ಅನುಭವದಿಂದ ನಾವು ಎಷ್ಟೋ ವಿಷಯವನ್ನು ಕಲಿಯಬಹುದು.

1940ರಲ್ಲಿ ಯುದ್ಧ ಹಾಗೂ ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ತೀವ್ರವಾದ ಕೊರತೆ ಆಗಿತ್ತು. ಅದನ್ನು ನಿರ್ವಹಿಸಲು ಇಂಗ್ಲೆಂಡ್ **"ಫೇರ್ ಶೇರ್ಸ್"** ಎಂಬ ಪಡಿತರ ಪದ್ಧತಿಯನ್ನು ಜಾರಿಗೆ ತಂದಿತು. ಇಂಗ್ಲೆಂಡ್ 1939ರಿಂದಲೇ ಪ್ರತಿಯೊಬ್ಬ ವ್ಯಕ್ತಿಗೂ ಪಡಿತರ ಪುಸ್ತಕವೊಂದನ್ನು ನೀಡುವುದಕ್ಕೆ ಪ್ರಾರಂಭಿಸಿತ್ತು. ಜನ ಪುಸ್ತಕವನ್ನು ತೋರಿಸಿ ವಾರಕ್ಕಾಗುವಷ್ಟು ಪಡಿತರವನ್ನು ಸ್ಥಳೀಯ ಪಡಿತರ ಅಂಗಡಿಯಿಂದ ಪಡೆದುಕೊಳ್ಳಬಹುದಿತ್ತು. ಪ್ರಾರಂಭದಲ್ಲಿ ಬೆಣ್ಣೆ, ಬೇಕನ್, ಸಕ್ಕರೆ, ಮುಂತಾದ ಪದಾರ್ಥಗಳು ಪಡಿತರದಲ್ಲಿ ಸಿಗುತ್ತಿದ್ದವು. ಅನಂತರದಲ್ಲಿ ಅದಕ್ಕೆ ಮೊಟ್ಟೆ, ಬಿಸ್ಕತ್ತುಗಳು, ಸಂರಕ್ಷಿಸಿದ ಆಹಾರ, ಮಾಂಸ ಮತ್ತು ದವಸ ಧಾನ್ಯಗಳೂ ಸೇರಿಕೊಂಡವು. ಯುದ್ಧ ಕಾಲದಲ್ಲಿ ಕೈಗೊಂಡ ಈ ಪ್ರಯೋಗದ ಪರಿಣಾಮ ಮಾತ್ರ ಅದ್ಭುತವಾಗಿತ್ತು. ಅಮರ್ತ್ಯ ಸೆನ್ ಹೇಳುವಂತೆ ಇದರಿಂದ ಜನರ ಪ್ರಮುಖ ಸೂಚಿಗಳಲ್ಲಿ ಬಹುದೊಡ್ಡ ಸುಧಾರಣೆ ಆಯಿತು. ಜನರ ಆಯಸ್ಸು ಗಣನೀಯವಾಗಿ ಹೆಚ್ಚಿತು. ಮರಣ ಪ್ರಮಾಣವೂ ಕಡಿಮೆಯಾಯಿತು. ಯುದ್ಧದಿಂದಾಗಿ ಸಾವುನೋವು ಭೀಕರವಾಗಿತ್ತು. ಜನರು ಹಣ ಖರ್ಚು ಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವರ ಜೀವಿತಾವಧಿ ಹೆಚ್ಚಾಗಿತ್ತು. ಇಪ್ಪತ್ತನೆಯ ಶತಮಾನದ ಮೊದಲ ಆರು ದಶಕಗಳಲ್ಲಿ ಅದರಲ್ಲೂ 1941ರಿಂದ 1950ರ ಅವಧಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಜೀವಿತಾವಧಿಯ ಪ್ರಮಾಣ ಗಣನೀಯವಾಗಿ ಏರಿತು.

1942ರಲ್ಲಿ ಬ್ರಿಟಿಷರು ಕೈಗಾರಿಕಾ ಕಾರ್ಮಿಕರಿಗೆ ಸಾಕಷ್ಟು ಆಹಾರವನ್ನು ಒದಗಿಸುವ ಉದ್ದೇಶದಿಂದ ಭಾರತದ ಆರು ನಗರಗಳಲ್ಲಿ ಪಡಿತರ ಪದ್ಧತಿಯನ್ನು ಪ್ರಾರಂಭಿಸಿದರು. 1943ರಲ್ಲಿ ಪ್ರಬಲವಾಗಿದ್ದ ರಾಜಕೀಯ ಚಳುವಳಿಯ ಒತ್ತಾಯದಿಂದ ಮಲಬಾರಿನಲ್ಲಿ ಪಡಿತರ ಪದ್ಧತಿ ಜಾರಿಗೆ ಬಂತು. ಮಲಬಾರ್ ಪಡಿತರ ಪದ್ಧತಿ ಪ್ರಾರಂಭವಾದ ಮೊಟ್ಟಮೊದಲ ಗ್ರಾಮೀಣ ಪ್ರದೇಶ. 1960ರ ಮಧ್ಯಭಾಗದ ವೇಳೆಗೆ ಸಾರ್ವಜನಿಕ ಪಡಿತರ ಪದ್ಧತಿ, ರಾಷ್ಟ್ರೀಯ ಸಾರ್ವತ್ರಿಕ ಯೋಜನೆಯ ಭಾಗವಾಯಿತು. 1991ರವರೆಗೂ ಇದು ವಿಸ್ತಾರಗೊಳ್ಳುತ್ತಾ ಹೋಯಿತು. 1990ರಲ್ಲಿ ಉದಾರೀಕರಣದ ಫಲವಾಗಿ ಸಾರ್ವತ್ರಿಕ ಪಡಿತರ ವ್ಯವಸ್ಥೆ ಸ್ಥಗಿತಗೊಂಡಿತು. ಒಂದು ಸಣ್ಣ ನಿರ್ದಿಷ್ಟ ಜನರ ಗುಂಪಿಗೆ ಮಾತ್ರ ಪಡಿತರವನ್ನು ವಿತರಿಸುವ ಕ್ರಮ ಪ್ರಾರಂಭವಾಯಿತು. ಬಿಪಿಎಲ್ (ಬಡನತನದ ರೇಖೆಯ ಕೆಳಗಿರುವವರು) ಮತ್ತು ಎಪಿಲ್ (ಬಡತನದ ರೇಖೆಯ ಮೇಲಿರುವವರು) ಕುಟುಂಬಗಳು ಎಂಬ ವಿಂಗಡಣೆಯಾಯಿತು. ಅದಕ್ಕೆ ತಕ್ಕಂತೆ ಅವರಿಗೆ ಕೊಡುವ ಪಡಿತರದ ಪ್ರಮಾಣದಲ್ಲೂ ವ್ಯತ್ಯಾಸ ಶುರುವಾಯಿತು.

2013ರಲ್ಲಿ ಪ್ರಮುಖ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ(ಎನ್‌ಎಫ್‌ಎಸ್‌ಎ) ಜಾರಿಗೆ ಬಂತು. ಇದೊಂದು ಪ್ರಮುಖ ಹೆಜ್ಜೆ. ರೇಷನ್ ಮತ್ತು ಇತರ ಆಹಾರ ಆಧಾರಿತ ಯೋಜನೆಗಳನ್ನು (ಉದಾಹರಣೆಗೆ ಶಾಲೆಗಳಲ್ಲಿ ಮಧ್ಯಾಹ್ನದ ಊಟದಂತಹ ಯೋಜನೆಗಳು) ಒದಗಿಸುವುದು ಕಾನೂನಿನ ಪ್ರಕಾರ ಅವಶ್ಯಕ ಅಂತಾಯಿತು. ಶೇಕಡ 75ರಷ್ಟು ಗ್ರಾಮೀಣ ಕುಟುಂಬಗಳು, ಶೇಕಡ 50ರಷ್ಟು ನಗರದ ಕುಟುಂಬಗಳು ಅಂದರೆ ಒಟ್ಟು ಜನಸಂಖ್ಯೆಯ ಮೂರನೇ ಎರಡರಷ್ಟು ಕುಟುಂಬಗಳು ಈ ಯೋಜನೆಯ ಲಾಭ ಪಡೆದವು. ಈ ಕುಟುಂಬಗಳನ್ನು ಆದ್ಯತೆಯ ಕುಟುಂಬಗಳು ಎಂದು ಕರೆಯಲಾಯಿತು. **ಎನ್‌ಎಫ್‌ಎಸ್‌ಎ** ಅದರಲ್ಲೂ ವಿಶೇಷವಾಗಿ ಪಡಿತರ ವ್ಯವಸ್ಥೆ, ಮಧ್ಯಾಹ್ನದ ಊಟದ ಯೋಜನೆ ಇವು ದೇಶದ ಎಲ್ಲಾ ಕಡೆಯಲ್ಲೂ ಇದೆ. ಪ್ರತಿ ರಾಜ್ಯಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಅದು ಕೆಲಸ ಮಾಡುತ್ತಿದೆ. ಆದರೆ ದೇಶದ ಎಲ್ಲೆಡೆ ಆಹಾರದ ವಿತರಣೆಗೆ ಬೇಕಾದ ಮೂಲಭೂತ ಸೌಕರ್ಯವಿದೆ.

ಚೀನಾದ ಕಾರ್ಯಯೋಜನೆ

ಚೀನಾದಲ್ಲಿ ರಾಷ್ಟ್ರೀಯ ಅಭಿವೃದ್ಧಿ ಹಾಗೂ ಸುಧಾರಣಾ ಕಮಿಷನ್ ಎನ್ನುವುದು ಒಂದು ಯೋಜನಾ ಸಮಿತಿ. ಈ ಸಂಸ್ಥೆ ಹಾಗೂ ವಾಣಿಜ್ಯ ಮಂತ್ರಾಲಯ ಬಡವರಿಗೆ ಮೂಲ ಆಹಾರ ದೊರೆಯುವಂತೆ ಮಾಡುವ ಹಾಗೂ ಬೆಲೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಪ್ರಮುಖವಾಗಿ ವಹಿಸಿಕೊಂಡಿದೆ. ಈಗಿನ ಕೊರೊನ ಮಹಾಮಾರಿಯ ಕೇಂದ್ರವಾದ ವುಹಾನ್ ಪ್ರಾಂತ್ಯದಲ್ಲಿ ಜನವರಿ 23ರಿಂದ ಲಾಕ್‌ಡೌನ್ ಪ್ರಾರಂಭವಾದ ಮೇಲೆ ಅಲ್ಲಿನ ವ್ಯವಸ್ಥೆಯನ್ನು ಇವುಗಳೇ ನೋಡಿಕೊಳ್ಳುತ್ತಿವೆ. ಚೀನಾ ಹಲವು ಸ್ತರಗಳಲ್ಲಿ ಕೆಲಸ ಮಾಡುತ್ತಿದೆ. ಅದರಲ್ಲಿ ಸರ್ಕಾರಿ ಕಾರ್ಪೋರೇಷನ್ನುಗಳು, ಮಂತ್ರಿಗಳು, 300 ದೊಡ್ಡ ಖಾಸಗೀ ಕಂಪೆನಿಗಳು, 2,00,000 ಖಾಸಗೀ ಅಂಗಡಿಗಳು ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಗಳು ಜೊತೆಗೂಡಿವೆ. ಉದಾಹರಣೆಗೆ, ಸರ್ಕಾರಿ ಸಾಮ್ಯದ ಕಂಪೆನಿಗಳಾದ ಚೀನಾ ರಾಷ್ಟ್ರೀಯ ಧಾನ್ಯಗಳು, ಎಣ್ಣೆ ಹಾಗೂ ಆಹಾರ ಪದಾರ್ಥಗಳ ಕಾರ್ಪೋರೇಷನ್, ಚೀನಾ ಧಾನ್ಯಗಳ ರಿಸರ್ವ್ ಕಾರ್ಪೋರೇಷನ್ ಇವುಗಳು ಮುಖ್ಯವಾಗಿ ಬೇಕಾದ ಆಹಾರ ಪದಾರ್ಥಗಳನ್ನು ವುಹಾನ್‌ಗೆ ಸರಬರಾಜು ಮಾಡಿದವು. ಅವು ಮಹಾಮಾರಿ ತುಂಬ ತೀವ್ರವಾಗಿದ್ದ ಫೆಬ್ರುವರಿ ತಿಂಗಳಿನಲ್ಲಿ ಪ್ರತಿ ದಿನ 200 ಟನ್ ಅಕ್ಕಿ, 50ಟನ್ ಹಿಟ್ಟು ಮತ್ತು ನೂಡಲ್ಸ್, 300 ಟನ್ ಎಣ್ಣೆ ರವಾನಿಸಿದವು. ರಾಷ್ಟ್ರೀಯ ಕಾಳು ವ್ಯಾಪಾರ ಕೇಂದ್ರ ಇಲ್ಲಿಯವರೆಗೆ 1,55,000 ಟನ್ ಕಾರ್ನ್ ಮತ್ತು 1,54,000 ಸೊಯಾಬೀನನ್ನು ವುಹಾನ್‌ಗೆ ಸರಬರಾಜು ಮಾಡಿದೆ. ತರಕಾರಿಗಳನ್ನು ಸಾಗಿಸಲು ವಿಶೇಷ ಟ್ರಕ್ಕುಗಳ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ಆಡಳಿತ ಬಯಲು ಮಾರುಕಟ್ಟೆಗಳನ್ನು ಸಂಘಟಿಸಿತ್ತು.

ಭಾರತದಲ್ಲಿ ಆದಾಯ ಬೆಂಬಲಿತ ಯೋಜನೆಗಳನ್ನು ಘೋಷಿಸಿದ ಮೊದಲ ರಾಜ್ಯ ಕೇರಳ. 15 ಕೆಜಿ ಧಾನ್ಯ ಮತ್ತು ರಿಯಾಯಿತಿ ದರದಲ್ಲಿ ಊಟವನ್ನು ಒದಗಿಸಿತು. ತಮಿಳುನಾಡು ಸರ್ಕಾರ ಅಕ್ಕಿ, ಸಕ್ಕರೆ, ಎಣ್ಣೆ ಹಾಗೂ ಬೇಳೆಯನ್ನು ಪಡಿತರ ಚೀಟಿ ಇರುವ ಎಲ್ಲರಿಗೂ ಪುಕ್ಕಟೆಯಾಗಿ ವಿತರಿಸುವುದಾಗಿ ತಿಳಿಸಿದೆ. ಅಸಂಘಟಿತ ಕೆಲಸಗಾರರಿಗೆ ಪಡಿತರವನ್ನು ಅಮ್ಮಾ ಕ್ಯಾಂಟೀನ್ ಮುಖಾಂತರ ಹಂಚಲಾಗುತ್ತಿದೆ. ದೆಹಲಿ ಸರ್ಕಾರ ರೇಷನ್ನಿನ ಪ್ರಮಾಣವನ್ನು 1.5ರಷ್ಟು ಹೆಚ್ಚಿಸಿದೆ. ಇದನ್ನು ರೇಷನ್ ಕಾರ್ಡ್ ಹೊಂದಿರುವವರಿಗೆ ವಿತರಿಸಲಾಗುತ್ತಿದೆ.

ಯೋಜನೆಯ ಪ್ರಮುಖ ಅಂಶಗಳು:

ಭಾರತದಲ್ಲಿ ಪಡಿತರ ವ್ಯವಸ್ಥೆಯನ್ನು ವಿಸ್ತರಿಸುವಾಗ ಕೆಳಕಂಡ ಅಂಶಗಳನ್ನು ಅದರಲ್ಲಿ ಸೇರಿಸಿಕೊಳ್ಳಬೇಕು. ಮೊದಲನೆಯದಾಗಿ ಎಲ್ಲಾ ಗ್ರಾಮೀಣ ಕುಟುಂಬಗಳಿಗೂ ಈಗ ಕೊಡುತ್ತಿರುವ ಎರಡರಷ್ಟು ಅಕ್ಕಿ ಹಾಗೂ ಗೋಧಿಯನ್ನು ನೀಡಬೇಕು. ಈಗ ಸಧ್ಯಕ್ಕೆ ಭಾರತೀಯ ಆರೋಗ್ಯ ಸಂಶೋಧನಾ ಕೌನ್ಸಿಲ್ ಶಿಫಾರಸ್ಸು ಮಾಡಿರುವ ಕನಿಷ್ಠ ಪ್ರಮಾಣದ ದವಸಧಾನ್ಯಗಳ ಅರ್ಧದಷ್ಟನ್ನು ಮಾತ್ರ ನೀಡಲಾಗುತ್ತಿದೆ. ಇನ್ನು ಮುಂದೆ ಪ್ರತಿಯೊಬ್ಬನಿಗೂ ವಾಸ್ತವವಾಗಿ ಬೇಕಾಗಿರುವಷ್ಟನ್ನು ಒದಗಿಸಬೇಕು. ಈಗ ಭಾರತ ಸರ್ಕಾರ ಆದ್ಯತೆಯ ಕುಟುಂಬಗಳಿಗೆಲ್ಲಾ ನೀಡುತ್ತಿರುವ ಪಡಿತರವನ್ನು ಎರಡು ಪಟ್ಟು (ಅಕ್ಕಿ ಅಥವಾ ಗೋಧಿ) ಹೆಚ್ಚಿಸಿದೆ. ಅಂದರೆ ಅದರ ಪ್ರಮಾಣವನ್ನು ಪ್ರತಿ ವ್ಯಕ್ತಿಗೆ 5ರಿಂದ 10ಕೆಜಿಗೆ ಏರಿಸಿದೆ. ಆದರೆ ಇದು ಸಾಲುವುದಿಲ್ಲ. ಯಾಕೆಂದರೆ ಇದರಲ್ಲಿ ಎಲ್ಲಾ ಕುಟುಂಬಗಳೂ ಸೇರುವುದಿಲ್ಲ. ಕೇವಲ ಆದ್ಯತೆಯ ಕುಟುಂಬಗಳು ಮಾತ್ರ ಸೇರುತ್ತವೆ. ಜೊತೆಗೆ ಪಡಿತರವನ್ನು ಸಂಪೂರ್ಣವಾಗಿ ಪುಕ್ಕಟೆಯಾಗಿ ನೀಡುತ್ತಿಲ್ಲ. ಹೆಚ್ಚುವರಿಯಾಗಿ ನೀಡುತ್ತಿರುವ 5 ಕೆಜಿ ಮಾತ್ರ ಪುಕ್ಕಟ್ಟೆ. ಉಳಿದದ್ದಕ್ಕೆ ಹಣ ಕೊಡಬೇಕು.

ಪಡಿತರ ವ್ಯವಸ್ಥೆ ಸಾರ್ವತ್ರಿಕವಾಗಬೇಕು. ಇದು ಪಡಿತರ ಚೀಟಿಯ ಆಧಾರಿಸಿ ಕುಟುಂಬಗಳನ್ನು ಪ್ರತ್ಯೇಕಿಸಬೇಕಾದ ಸಮಯವಲ್ಲ. ಅಥವಾ ಅವರಲ್ಲಿ ಪಡಿತರ ಚೀಟಿ ಇದೆಯೋ ಇಲ್ಲವೇ ಎಂದು ನೋಡುವುದಾಗಲಿ, ಅಥವ ಬಯೋಮೆಟ್ರಿಕ್ ಬಳಸುವುದಾಗಲಿ ಸರಿಯಲ್ಲ. ಆದ್ಯತೆಯ ಕುಟುಂಬಗಳ ಪಟ್ಟಿಯೂ ಸಂಪೂರ್ಣವಾಗಿ ಸರಿಯಾಗಿಲ್ಲ. ಅದರಲ್ಲೂ ಸಾಕಷ್ಟು ನ್ಯೂನತೆಗಳಿವೆ. ಯಾವುದೇ ಕುಟುಂಬವೂ ಇಂದು ಪಡಿತರ ವ್ಯವಸ್ಥೆಯಿಂದ ತಪ್ಪಾಗಿ ಆಚೆ ಉಳಿಯಬಾರದು.

ಈಗ 5.8 ಕೋಟಿ ಟನ್ ಅಕ್ಕಿ ಮತ್ತು ಗೋಧಿಯ ದಾಸ್ತಾನು ಇರುವುದರಿಂದ ಹೆಚ್ಚುವರಿ ರೇಷನ್ ಕೊಡುವುದಕ್ಕೆ ಸಾಧ್ಯವಿದೆ. ಎರಡನೆಯದಾಗಿ, ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಅಧಿಕ ಎಣ್ಣೆ, ಸಕ್ಕರೆ, ಉಪ್ಪು ಹಾಗೂ ಬೇಳೆಕಾಳುಗಳ ಪಡಿತರವನ್ನು ನಿಯಮಿತವಾಗಿ ಒದಗಿಸಬೇಕು. ಆ ಪಟ್ಟಿಯಲ್ಲಿ ಸಾಬೂನನ್ನೂ ಸೇರಿಸಬೇಕು. ಅವು ಸರಿಯಾಗಿ ಪೂರೈಕೆಯಾಗುವುದಕ್ಕೆ ಒಂದು ವ್ಯವಸ್ಥೆ ಬೇಕಾಗುತ್ತದೆ. ನಿರಂತರವಾಗಿ ವಿತರಿಸುವುದಕ್ಕೆ ಅನುಕೂಲವಾಗುವಂತೆ ವಾರಕ್ಕೋ ಅಥವಾ ಹದಿನೈದು ದಿನಕ್ಕೋ ಒಮ್ಮೆ ವಿತರಿಸಬಹುದು. ಭಾರತ ಸರ್ಕಾರ ಪ್ರತಿ ಕುಟುಂಬಕ್ಕೆ

ಪುಟ 14 ನೋಡಿ

ಕೊರೊನ ವೈರಸ್ ವಿರುದ್ಧ ಸಮರದ ಭಾಗವಾಗಿ ಕೇರಳದಲ್ಲಿ ಲಾಕ್‌ಡೌನ್ ನಿಯಮಗಳನ್ನು ಪಾಲಿಸುತ್ತಲೇ ಉಚಿತ ರೇಷನ್ ಕಾರ್ಯಕ್ರಮ ಕಾರ್ಯಾರಂಭ ಮಾಡಿದೆ. ಕಡಿಮೆ ಆದಾಯದ ಕುಟುಂಬಗಳಿಗೆ 35 ಕೆ.ಜಿ ಮತ್ತು ಹೆಚ್ಚಿನ ಆದಾಯದ ಕುಟುಂಬಗಳಿಗೆ 15 ಕೆ.ಜಿ. ಆಹಾರಧಾನ್ಯಗಳನ್ನು ಕೊಡಲಾಗುತ್ತಿದೆ. 17 ಐಟಂಗಳಿರುವ 87 ಲಕ್ಷ ಕಿರಾಣಿ ಕಿಟ್‌ಗಳನ್ನು ರೇಶನ್ ಅಂಗಡಿಗಳ ಮೂಲಕ ಹಂಚಲಾಗುತ್ತಿದೆ.





ಆಹಾರ ಪಡಿತರವನ್ನು ಹೆಚ್ಚಿಸೋಣ

ಪುಟ 13 ರಿಂದ

ಒಂದು ಕೆ.ಜಿ ಬೇಳೆಯನ್ನು ಘೋಷಿಸಿರುವುದು ಒಳ್ಳೆಯದು. ಆದರೆ ಹೆಚ್ಚಿನ ಪದಾರ್ಥಗಳನ್ನು ತಕ್ಷಣದಲ್ಲಿ ವಿತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, ಹಾಲು, ಮೊಟ್ಟೆ ಹಾಗೂ ತರಕಾರಿ (ಅಥವಾ ಅವುಗಳಲ್ಲಿ ಕನಿಷ್ಠ ಒಂದನ್ನಾದರೂ) ಪೂರೈಸುವುದಕ್ಕೆ ಸಾಧ್ಯವಾದರೆ ಆಹಾರದ ಒಂದು ದೊಡ್ಡ ಬಿಕ್ಕಟ್ಟಿನ ಸಮಯದಲ್ಲಿ ಕೇವಲ ಮೂಲಭೂತ ಆಹಾರಕ್ಕೆ ರಕ್ಷಣೆ ನೀಡುವುದಷ್ಟೇ ಅಲ್ಲದೆ ಅಪೌಷ್ಟಿಕತೆಯ ಸವಾಲನ್ನು ಎದುರಿಸಿದಂತೆ ಆಗುತ್ತದೆ.

ನಗರ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳ ಜೊತೆಗೆ ಊಟಕ್ಕೂ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶಗಳಿಗೆ ಸೂಚಿಸಿದ ಆಹಾರ ಪದಾರ್ಥಗಳನ್ನೇ ಪಡಿತರ'ಚೀಟಿಗಳನ್ನು ಹೊಂದಿರುವ ನಗರವಾಸಿಗಳಿಗೂ ನೀಡಬಹುದು. ನಗರಗಳು ಹಾಗೂ ಪಟ್ಟಣಗಳಲ್ಲಿರುವ ಬಹುಸಂಖ್ಯಾತ ಕಾರ್ಮಿಕರು ಹಾಗೂ ವಲಸೆಗಾರರಿಗೆ ಊಟದ ವ್ಯವಸ್ಥೆ ಮಾಡಬೇಕು. ಮುಚ್ಚಿರುವ ಅನೇಕ ಸಾಮುದಾಯಿಕ ಅಡಿಗೆ ಮನೆಗಳನ್ನು (ಉದಾಹರಣೆಗೆ ಶಾಲೆ ಮತ್ತು ಕಾಲೇಜುಗಳು, ಕಂಪೆನಿ ಹಾಗೂ ಕಛೇರಿಗಳ ಕ್ಯಾಂಟೀನ್) ಮತ್ತು ಕೆಲಸವಿಲ್ಲದೆ ಕುಳಿತಿರುವ ಹೋಟೆಲ್ ಕಾರ್ಮಿಕರನ್ನು ಒಟ್ಟಿಗೆ ಸೇರಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ಸಿದ್ಧ ಆಹಾರವನ್ನು ರಿಯಾಯ್ತಿ ದರದಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಮಾಡಬಹುದು. ಕೇರಳ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದೆ. ಆಹಾರವನ್ನು ವಿತರಿಸಲು ಎಚ್ಚರಿಕೆಯಿಂದ ರೂಪಿಸಿರುವ ಯೋಜನೆ ಹಾಗೂ ತಂತ್ರಜ್ಞಾನ ಬೇಕು. ಭೌತಿಕ ಅಂತರವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಇದು ಅವಶ್ಯಕ. ಕರ್ನಾಟಕ ಮಾಡಿದಂತೆ ಇಂದಿರಾ ಕ್ಯಾಂಟಿನ್ ಮುಚ್ಚುವುದು ಪರಿಹಾರವಲ್ಲ.

ಈ ಎಲ್ಲಾ ಕ್ರಮಗಳು ಕನಿಷ್ಠ ಮೂರು ತಿಂಗಳು ಮುಂದುವರಿಯಬೇಕು. ಅನಂತರ ಇದನ್ನು ಪುನರ್ ಪರಿಶೀಲಿಸಬೇಕು. ವಿಸ್ತೃತ ರೇಷನ್ ವ್ಯವಸ್ಥೆಗೆ ಸಂಬಂಧಿಸಿದಂತೆ ಹಮ್ಮಿಕೊಳ್ಳುವ ಸೃಜನಶೀಲ ಯೋಜನೆ ಸದ್ಯದ ಮಹಾಮಾರಿಯಿಂದ ರಕ್ಷಣೆಯಾಗುವುದರ ಜೊತೆಗೆ ಜನತೆಯನ್ನು ಸುಪುಷ್ಟರು ಹಾಗೂ ಆರೋಗ್ಯವಂತರನ್ನಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಬದಲಾವಣೆಯನ್ನು ತರುವುದಕ್ಕೂ ಅನುಕೂಲವಾಗುತ್ತದೆ.

ಕೇಂದ್ರ ಕಾರ್ಮಿಕ ಸಂಘಟನೆಗಳ ಆಗ್ರಹ

ಪುಟ 2 ರಿಂದ

ಹಳ್ಳಿಗಳು ಮತ್ತು ಪಟ್ಟಣಗಳ ನಡುವೆ ಕೃಷಿ ಬೆಳೆಗಳ ಖರೀದಿ ಕೇಂದ್ರಗಳನ್ನು ತೆರೆಯಬೇಕು ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ನಿರ್ದಿಷ್ಟ ಸಲಹೆಗಳಣ್ನು ನೀಡಿವೆ.

ಎಲ್ಲ ಅಸಂಘಟಿತ/ಅನೌಪಚಾರಿಕ ವಲಯಗಳ ದುಡಿಮೆಗಾರರಿಗೆ ಒಂದು ಸಮಗ್ರ ಆದಾಯ ಬೆಂಭಲ ಸ್ಕೀಮ ಈಗಿನ ತುರ್ತು ಅಗತ್ಯವಾಗಿದೆ. ಒಂದು ಅತಿ ದೊಡ್ಡ ಮಾನವ ದುರಂತವನ್ನು ತಪ್ಪಿಸಲು ಸರಕಾರ ತಕ್ಷಣವೇ ಕಾರ್ಯರತವಾಗಬೇಕು ಎಂದು ಈ ಪತ್ರದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಆಗ್ರಹಿಸಿವೆ.

ಈ ಸಮಸ್ಯೆಯ ಪ್ರಮಾಣ ಮತ್ತು ವಿಸ್ತಾರ ಹೆಚ್ಚುತ್ತಲೇ ಇರುವುದರಿಂದ, ಎಲ್ಲ ಮಟ್ಟಗಳಲ್ಲಿ ಕಾರ್ಮಿಕ ಸಂಘಗಳು ಇದನ್ನು ನಿರ್ವಹಿಸುವಲ್ಲಿ ತಮ್ಮಮಿತಿಗಳ ಒಳಗೇ ನಿರತವಾಗಿವೆ. ಆದ್ದರಿಂದ ಎಲ್ಲ ರಾಜ್ಯಗಳಲ್ಲಿ ಎಲ್ಲ ಮಟ್ಟಗಳಲ್ಲಿ ಸಂಬಂಧಪಟ್ಟ ಇಲಾಖೆಗಳು ಕಾರ್ಮಿಕ ಸಂಘಟನೆಗಳೊಂದಿಗ ಸಂಪರ್ಕ ಮತ್ತು ಸಂಯೋಜನೆಯಿಂದ ಕೆಲಸ ಮಾಡುವಂತೆ ತಿಳಿಸಬೇಕು ಎಂದೂ ಈ ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಕಾರ್ಮಿಕ ಮಂತ್ರಿಗಳನ್ನು ವಿನಂತಿಸಿಕೊಂಡಿವೆ.

ಇಂಟಕ್, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಈ ಜಂಟಿ ಪತ್ರಕ್ಕೆ ಸಹಿ ಹಾಕಿವೆ.

ಪಕ್ಷದ ಮೊದಲ ಮಹಾಧಿವೇಶನ–1943

ಪುಟ 11 ರಿಂದ

'ಎಲ್ಲಾ ರಾಷ್ಟ್ರೀಯ ಮುಖಂಡರನ್ನು ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಬೇಕು; 'ಕಳ್ಳ ದಾಸ್ತಾನಿನ ವಿರುದ್ಧ ಮಧ್ಯಪ್ರವೇಶಿಸಿ ಆಹಾರ ಪರಿಸ್ಥಿತಿಯನ್ನು ಸುಧಾರಿಸಬೇಕು ಮತ್ತು ಆಹಾರ ದಂಗೆಗಳನ್ನು ತಡೆಯಲು ಯತ್ನಿಸಬೇಕು' ಮತ್ತು 'ದೇಶದ್ರೋಹಿ ಗುಂಪುಗಳನ್ನು ಮೂಲೆಗುಂಪು ಮಾಡಬೇಕು' ಎಂದು ಕರೆ ನೀಡಿತು.

ಫ್ಯಾಸಿಸಂನ ಸೋಲನ್ನು ಖಾತ್ರಿಪಡಿಸಲು ಎಲ್ಲಾ ಕಾರ್ಮಿಕರು ಮತ್ತು ರೈತರು ಒಗ್ಗೂಡಬೇಕು ಮತ್ತು ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆ ಹೆಚ್ಚಿಸಲು ಕೆಲಸ ಮಾಡಬೇಕೆಂದು ಮಹಾಧಿವೇಶನವು ಕರೆ ನೀಡಿತು. ಈ ಉದ್ದೇಶಕ್ಕಾಗಿ ಒಂದಾಗದಿದ್ದರೆ, ತಮ್ಮ ಸಂಘಟನೆಗಳನ್ನು ಬಲಪಡಿಸಲು ಅಥವಾ 'ಸಾಕಾಗುವಷ್ಟು ತುಟ್ಟಿಭತ್ಯೆ, ಕೂಲಿ, ಬೋನಸ್ ಹೆಚ್ಚಳ, ಸಂಘಗಳಿಗೆ ಮಾನ್ಯತೆ, ಪಾಳುಬಿದ್ದ ಜಮೀನುಗಳ ಹಂಚಿಕೆ, ನೀರಾವರಿ ಸೌಲಭ್ಯ, ಬೀಜಗಳು, ಗೇಣಿ ಮತ್ತು ಬಡ್ಡಿಗಳಿಂದ ಮುಕ್ತಿ' ಮುಂತಾದ ಬೇಡಿಕೆಗಳನ್ನು ಗಳಿಸಲು ಅವರು ಸಮರ್ಥರಾಗುವುದಿಲ್ಲ ಎಂದು ಮನದಟ್ಟು ಮಾಡಿತು. ವಿದ್ಯಾರ್ಥಿಗಳ ಐಕ್ಯತೆಗೂ ಕರೆ ಕೊಟ್ಟು ತಮ್ಮ ಶೈಕ್ಷಣಿಕ ಹಕ್ಕುಗಳು ಹಾಗೂ ಸಂಸ್ಥೆಗಳಲ್ಲಿ ಸ್ವಾತಂತ್ರ್ಯದ ಪರವಾಗಿ ನಿಲ್ಲಬೇಕೆಂದು ಪ್ರೇರೇಪಿಸಿತು.

ಪ್ರಮುಖವಾಗಿ ಬಂಗಾಳ, ಆಂಧ್ರ ಹಾಗೂ ಮಲಬಾರಿನಲ್ಲಿ ಕಮ್ಯುನಿಸ್ಟರ ಕೆಲಸಗಳಿಂದಾಗಿ ಉಂಟಾದ ಸಾಮೂಹಿಕ ಜಾಗೃತಿಯ ಎದ್ದುಕಾಣುವ ಲಕ್ಷಣದ ಭಾಗವಾಗಿ ಮೇಲೆದ್ದು ಬಂದ ಮಹಿಳಾ ಚಳುವಳಿಯನ್ನು ಗುರುತಿಸಿದ ಮಹಾಧಿವೇಶನವು, ಮಹಿಳೆಯರ, ಅದರಲ್ಲೂ ದುಡಿಯುವ ಮಹಿಳೆಯರ ಸಂಘಟನೆಗಳ ಬಗ್ಗೆ ವಿಶೇಷ ಗಮನ ಹರಿಸಬೇಕೆಂದು ನಿರ್ಣಯ ಕೈಗೊಂಡಿತು. 'ಈ ಮೇಲಿನ ಚಳುವಳಿಗಳ ಆಧಾರದಲ್ಲಿ 'ಸಾಮೂಹಿಕ ಸಂಘಟನೆಗಳನ್ನು ಕಟ್ಟುವ ಯೋಜನೆಗಳನ್ನು' ರೂಪಿಸಬೇಕೆಂದು ಮತ್ತು 'ಸಾಮೂಹಿಕ ಕಮ್ಯುನಿಸ್ಟ್ ಪಕ್ಷ' ಕಟ್ಟಲು ಬುನಾದಿ ಹಾಕಬೇಕೆಂದು ತನ್ನ ಎಲ್ಲಾ ಘಟಕಗಳನ್ನೂ ಮಹಾಧಿವೇಶನವು ಕೇಳಿಕೊಂಡಿತು.

ಪಕ್ಷವನ್ನು 'ಸಾಮೂಹಿಕ ರಾಜಕೀಯ ಶಕ್ತಿಯಿಂದ ಸಾಮೂಹಿಕ ರಾಜಕೀಯ ಸಂಘಟನೆಯಾಗಿ' ಮಾರ್ಪಾಟು ಮಾಡಲು ಮತ್ತು 'ಕೇವಲ ಲಕ್ಷಾಂತರ ದುಡಿಯುವ ಜನರ ಮೇಲೆ ಮಾತ್ರವಲ್ಲದೇ ಇಡೀ ಭಾರತದ ಜನರ ಮೇಲೆ' ಪಕ್ಷವು ರಾಜಕೀಯ ಪ್ರಭಾವವನ್ನು ಹೊಂದಬೇಕು ಎಂದು ಮಹಾಧಿವೇಶನವು ನಿರ್ಣಯ ಮಾಡಿತು. ಪಕ್ಷದ ಸದಸ್ಯರನ್ನು, ಪೂರ್ಣಕಾಲದ ಕಾರ್ಯಕರ್ತರನ್ನು, ಸ್ವಯಂಸೇವಕರನ್ನು, ನಿಧಿಯನ್ನು ಹೆಚ್ಚಿಸಬೇಕೆಂದು ಮತ್ತು ಜತೆಯಲ್ಲೇ ಕಾರ್ಮಿಕ ಸಂಘಗಳ, ಕಿಸಾನ್ ಸಭಾದ, ವಿದ್ಯಾರ್ಥಿಗಳ, ಮಹಿಳೆಯರ ಹಾಗೂ ಮಕ್ಕಳ ಸಂಘಟನೆಗಳ ಸದಸ್ಯತ್ವವನ್ನು ಹೆಚ್ಚಿಸಬೇಕೆಂದೂ ಕೂಡ ಅದು ನಿರ್ಧರಿಸಿತು.

ರಾಜಕೀಯ ಸನ್ನಿವೇಶದ ಗ್ರಹಿಕೆಯಲ್ಲಿನ ಮತ್ತು ಅಳವಡಿಸಬೇಕಾದ ತಂತ್ರಗಳ ನಿರ್ಧಾರದಲ್ಲಿನ ಇತಿಮಿತಿಯ ನಡುವೆಯೂ ಮಹಾಧಿವೇಶನದ ನಿರ್ಣಯಗಳು ಮತ್ತು ವರದಿಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಅದು ಕೇಂದ್ರ ಸಮಿತಿ ಮತ್ತು ಪ್ರಧಾನ ಕಾರ್ಯದರ್ಶಿಯನ್ನು ಕೂಡ ಸರ್ವಾನುಮತದಿಂದ ಆರಿಸಿತು. ಪಿ.ಸಿ.ಜೋಷಿಯವರು ಮಹಾಧಿವೇಶನದ ಬಗ್ಗೆ ವರದಿಮಾಡುತ್ತಾ ಪ್ರತಿನಿಧಿಗಳು 'ಮಹಾಧಿವೇಶನದಲ್ಲಿನ ಸ್ವಯಂವಿಮರ್ಶೆಯ ಚರ್ಚೆಗಳಿಂದ ಕಲಿತೆವು ಎಂದು ಸರ್ವಾನುಮತದಿಂದ ಆಲೋಚಿಸಿದರು' ಎಂದರು. ಮಹಾಧಿವೇಶನದಲ್ಲಿ ಪ್ರಕಟವಾದ ಐಕ್ಯತೆಯು 'ಹಲವು ವರ್ಷಗಳ ಸಮಾನ ಆಚರಣೆಗಳಿಂದ ಪರಿಪಕ್ವವಾದ ಸಮಾನ ಗುರಿ, ಸಮಾನ ಕಾರ್ಯಕ್ರಮ' ಸಾಧಿಸುವ ಉದ್ದೇಶದಿಂದ ಹೊರಹೊಮ್ಮಿದೆ ಎಂದು ವ್ಯಾಖ್ಯಾನ ಮಾಡಿದರು.

ಪಕ್ಷದ ಸಂಸ್ಥಾಪಕರಲ್ಲೊಬ್ಬರಾದ ಮುಜಾಫರ್ ಅಹಮದ್ ಅವರು ಅಧ್ಯಕ್ಷೀಯ ಮಂಡಳಿಯ ಪರವಾಗಿ ಸಮಾರೋಪ ಭಾಷಣ ಮಾಡಿದರು. "ಪಕ್ಷದ ಮೊದಲ ಮಹಾಧಿವೇಶನ ಮುಗಿಯಿತು. ತನ್ನ ಬದುಕಿನ ಅತ್ಯಂತ ದೊಡ್ಡ ಹೊಣೆಯನ್ನು ಪಕ್ಷವು ವಹಿಸಿಕೊಂಡಿದೆ. ಅದನ್ನು ಪೂರೈಸಲು ನಾವೆಲ್ಲಾ ಶ್ರಮಿಸೋಣ." ಎಂದರು.

ಕೊರೊನ ವೈರಸ್ ಲಾಕ್ ಡೌನಿನ ನಡುವೆಯೂ ಜಮ್ಮು-ಕಾಶ್ಮೀರಕ್ಕೆ ಡೊಮಿಸೈಲ್ ಕಾಯ್ದೆಯ ಅವಮಾನ

ದೇಶಾದ್ಯಂತ ಕೊರೊನ ವೈರಸ್ ವಿರುದ್ಧ ಹೋರಾಟ ನಡೆಯುತ್ತಿರುವಾಗ, ಅದಕ್ಕಾಗಿ ಲಾಕ್‌ಡೌನ್ ಹಾಕಿ ಎಲ್ಲ ಗಮನವನ್ನೂ ಕೇಂದ್ರೀಕರಿಸಿರುವಾಗ, ಅದರ ನಡುವೆಯೇ ಕೇಂದ್ರ ಗೃಹ ಮಂತ್ರಾಲಯ ಇದ್ದಕ್ಕಿದ್ದಂತೆ 'ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ ವಾಸದ ಕಾಯ್ದೆ' ತಂದಿದೆ. ಇದು ಸ್ಥಳೀಯರಿಗೆ ನೌಕರಿಗಳಲ್ಲಿ ಅವಕಾಶಗಳನ್ನು ಕಡಿತ ಮಾಡುವ ಮೂಲಕ ಅವಮಾನ ಮಾಡಿದೆ, ಮೋಸ ಮಾಡಿದೆ ಎಂದು ರಾಜ್ಯದಲ್ಲಿ ಸಕ್ರಿಯವಾಗಿರುವ ಎಲ್ಲ ರಾಜಕೀಯ ಪಕ್ಷಗಳು ಇದನ್ನು ಬಲವಾಗಿ ಖಂಡಿಸಿವೆ.

ಕಲಮು 370ರ ರದ್ದತಿಯ ನಂತರ ಕೇಂದ್ರದ ಆಳುವ ಪಕ್ಷದ ಆಶೀರ್ವಾದದೊಂದಿಗೆ ರಚನೆಯಾಗಿದೆ ಎಂದು ಗುರುತಿಸಲ್ಪಟ್ಟಿರುವ 'ಜಮ್ಮು ಮತ್ತು ಕಾಶ್ಮೀರ ಅಪ್ನಿ ಪಾರ್ಟಿ' ಕೂಡ, ಉದ್ಯೋಗ ಮತ್ತು ತಮ್ಮ ಇತರ ಹಕ್ಕುಗಳು ಸುರಕ್ಷಿತವಾಗಿರುತ್ತವೆ ಎಂಬ ಜನರ(?) ನಂಬಿಕೆಗೆ ವಂಚನೆಯಾಗಿದೆ ಎಂದು ಖೇದ ವ್ಯಕ್ತಪಡಿಸಬೇಕಾಗಿ ಬಂದಿದೆ. 15 ದಿನಗಳ ಹಿಂದೆಯಷ್ಟೇ ಕೇಂದ್ರ ಗೃಹಮಂತ್ರಿಗಳೂ ತಮ್ಮನ್ನು ಭೇಟಿಯಾದ ಈ ಪಕ್ಷದ ಉನ್ನತ ನಿಯೋಗಕ್ಕೆ, ಬೇರೆ ರಾಜ್ಯಗಳಿಗಿಂತ ಉತ್ತಮವಾದ ಒಂದು ವಾಸಕ್ಕೆ ಸಂಬಂಧಪಟ್ಟ (ಡೊಮಿಸೈಲ್) ಕಾಯ್ದೆಯನ್ನು ತರುವುದಾಗಿ ಆಶ್ವಾಸನೆ ನೀಡಿದ್ದರಂತೆ!


ಇದು ಇನ್ನೊಂದು ದೊಡ್ಡ ಮೋಸ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ ಕಲಮು 370ನ್ನು ನಿಷ್ಪ್ರಯೋಜಕಗೊಳಿಸಿದ ಮೇಲೆ ತಮ್ಮ ಉದ್ಯೋಗಗಳು ಮತ್ತು ಭೂಮಿಯನ್ನೂ ಹೊರಗಿನವರಿಗೆ ಬಿಟ್ಟುಕೊಡಬೇಕಾದೀತು ಎಂಬ ರಾಜ್ಯದ ನಿವಾಸಿಗಳ ಭಯವನ್ನು ಈ ಕಾಯ್ದೆ ಇನ್ನಷ್ಟು ಹೆಚ್ಚಿಸಿದೆ ಎಂಧು ಅವರು ಹೇಳಿದ್ದಾರೆ.

ಹೊಸ ಆದೇಶದ ಪ್ರಕಾರ ನಾಲ್ಕನೇ ಮಟ್ಟದ ವರೆಗಿನ ಉದ್ಯೋಗಗಳಿಗೆ ಮಾತ್ರವ ಡೊಮಿಸೈಲ್ ಪ್ರಮಾಣ ಪತ್ರಗಳು ಬೇಕು, ಇತರ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳಿಗೆ ಅದರ ಅಗತ್ಯವಿಲ್ಲ, ಅಂದರೆ ಕೆಲವು ಸಮಯದ ನಂತರ ಇಂತಹ ಹುದ್ದೆಗಳಲ್ಲಿ ಬಹುಪಾಲು ಹೊರಗಿನವರೇ ಇರುತ್ತಾರೆ. ಈ ಕಾಯ್ದೆಯಿಂದಾಗಿ ಐದು ವರ್ಷಗಳ ನಂತರ ಭದ್ರತಾ ಪಡೆಗಳು ಮತ್ತು ಇತರ ಕೇಂದ್ರ ಸರಕಾರದ ನೌಕರರ ಕುಟುಂಬಗಳು ಇಲ್ಲಿಯ ನೆಲಸುವಂತಾಗಬಹುದು.


ಜಮ್ಮು ಮತ್ತು ಕಾಶ್ಮೀರದಲ್ಲಿ ಈಗಾಗಲೇ ನಿರುದ್ಯೋಗ ದರ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದೆ. ಈ ಕಾಯ್ದೆಯ ನಂತರ ಅವರಿಗೆ ಮಾತ್ರವೇ ತೆರೆದಿದ್ದ ಕೆಲವೇ ಹುದ್ದೆಗಳು ಕೂಡ ಅವರಿಗೆ ದೊರೆಯದಂತಾಗುತ್ತದೆ ಎಂದು ತರಿಗಾಮಿ ಹೇಳಿದ್ದಾರೆ.

ಈಗಿನ ಸನ್ನಿವೇಶದಲ್ಲಿ ಸರಕಾರ ಜೈಲುಗಳಲ್ಲಿ ಕೊಳೆಯುತ್ತಿರುವ ಎಲ್ಲ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿ ಒಂದು ಸಂವಾದವನ್ನು ಏರ್ಪಡಿಸಬೇಕಾಗಿತ್ತು, ಬದಲಿಗೆ ಅದು ಇಂತಹ ಕಾಯ್ದೆಯನ್ನು ತಂದಿದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಡಾಕ್ಟರುಗಳು ಸುರಕ್ಷತಾ ಉಡುಪುಗಳಿಲ್ಲದೆ ಒದ್ದಾಡುತ್ತಿದ್ದಾರೆ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಅಭೂತಪೂರ್ವ ತೈಲ ಬೆಲೆ ಕುಸಿತಕ್ಕೆ ಕಾರಣವಾದ ತೈಲ ಬೆಲೆ ಸಮರ ಹಲವು ಮಾಧ್ಯಮಗಳು ವಿಶ್ಲೇಷಿಸಿದಂತೆ ಸೌದಿ ಅರೇಬಿಯ ರಶ್ಯಾದ ಮೇಲೆ ಹೂಡಿದ್ದಲ್ಲ. ಸೌದಿ ಅರೇಬಿಯ ಮತ್ತು ರಶ್ಯಾ ಗಳು ತಮ್ಮ ಮಾರುಕಟ್ಟೆ ಪಾಲು ಹೆಚ್ಚಿಸಲು ಮತ್ತು ಶೇಲ್ ತೈಲವನ್ನು ಮಾರುಕಟ್ಟೆಯಿಂದ ಓಡಿಸಲು ಯು.ಎಸ್ ಮೇಲೆ ಸಾರಿರುವ ಸಮರ ಎಂದು ಹಿಂದಿನ (ಸಂಚಿಕೆ 13, ಮಾ. 23–29) ಜನಶಕ್ತಿ ಸಂಚಿಕೆಯಲ್ಲಿ ವಿಶ್ಲೇಷಿಸಲಾಗಿತ್ತು. ಈ ಲೇಖನ ಅದರ ಮುಂದಿನ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತದೆ.

ಸೌದಿ ಅರೇಬಿಯ ಮತ್ತು ರಶ್ಯಾ ಪ್ರತ್ಯೇಕವಾಗಿ ಅಮೆರಿಕದ ಮೇಲೆ ತೈಲ ಬೆಲೆ ಯುದ್ಧ ಸಾರಿದ್ದು, ಅಮೆರಿಕನ್ ಶೇಲ್ ತೈಲ ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದ ಹೊರಗೆ ಹೋಗಿ, ಅದಕ್ಕೆ ಕಳೆದುಕೊಂಡ ತಮ್ಮ ಮಾರುಕಟ್ಟೆ ಪಾಲನ್ನು ಮರಳಿ ಪಡೆಯುವ ವರೆಗೆ ಅವು ಈ ಸಮರವನ್ನು ಮುಂದುವರೆಸಲಿವೆ ಎಂಬ ಪ್ರಬಲ ಸೂಚನೆಗಳಿವೆ. ಇದು ಅಧ್ಯಕ್ಷ ಟ್ರಂಪ್ ಗೆ ಎಚ್ಚರಿಕೆಯ ಗಂಟೆ. ಟ್ರಂಪ್ ಗೆ ಇದರಿಂದಾಗಿ ಭಾರಿ ರಾಜಕೀಯ ನಷ್ಟ ಆಗಲಿದೆ. ಇದರಿಂದ ಕಂಗೆಟ್ಟ ಟ್ರಂಪ್ ಮಾರ್ಚ್ 30 ರಂದು, ರಷ್ಯಾದ ಅಧ್ಯಕ್ಷ ಪುತಿನ್ ರಿಗೆ ಫೋನ್ ಮೂಲಕ ಸಂಪರ್ಕಿಸಿ, ತೈಲ ಬೆಲೆ ಕುಸಿತದ ಬಗ್ಗೆ ಮಾತನಾಡಿದ್ದಾರೆ. ಇದು ಅಂತರ್ರಾಷ್ಟ್ರೀಯ ತೈಲ ಮಾರುಕಟ್ಟೆ ನಿರ್ವಹಣೆಯಲ್ಲಿ ಸಹಕರಿಸುವ ಐತಿಹಾಸಿಕ ಕ್ರಮದಲ್ಲಿ ವಾಷಿಂಗ್ಟನ್ ನ ಮೊದಲ ಹೆಜ್ಜೆಯನ್ನು ಸೂಚಿಸುತ್ತದೆಯೇ? ಕಾದು ನೋಡಬೇಕು.

ತೈಲ ಬೆಲೆ ಸಮರ ಎತ್ತ ಸಾಗಿದೆ?

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಇದೇ ವರ್ಷಾಂತ್ಯದ ನವೆಂಬರ್ ತಿಂಗಳಲ್ಲಿ ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಎರಡನೇ ಬಾರಿಯ ಆಯ್ಕೆಗೆ ಟ್ರಂಪ್ ರಿಪಬ್ಲಿಕನ್ ಪಕ್ಷದಿಂದ ಕಣಕ್ಕಿಳಿಯಲಿದ್ದಾರೆ. ಪ್ರಸ್ತುತ ಜಾಗತಿಕವಾಗಿ ತೈಲ ಬೆಲೆಯ ಮತ್ತು ಬೇಡಿಕೆ ಸಹ ತೀವ್ರವಾಗಿ ಕುಸಿತ ಕಂಡು ನೆಲ ಕಚ್ಚುತ್ತಿದೆ. ಟ್ರಂಪ್ ಗೆ ಇದೇ ದೊಡ್ಡ ಚಿಂತೆಯಾಗಿದೆ. ಕೋರೊನಾ ಗಿಂತ ಹೆಚ್ಚಾಗಿ ಇವರ ನಿದ್ರೆಗೆ ಭಂಗ ಉಂಟುಮಾಡಿದೆ ಈ ತೈಲ ಬೆಲೆ ಕುಸಿತ. ಇದರ ಪರಿಹಾರಕ್ಕೆ ಯಾವ ವೆಂಟಿಲೇಟರ್ ಇಲ್ಲವೆಂಬುದೆ ಟ್ರಂಪ್ ಚಿಂತೆಗೆ ಮೂಲ ಕಾರಣವೆನ್ನಲಾಗಿದೆ.

ತನ್ನ ಸೈನ್ಯ ಬಲದಿಂದ ಬೆದರಿಸಿ ತನ್ನ ಯಜಮಾನಿಕೆಯ ಹಿಡಿತದಲ್ಲಿ ಇಟ್ಟುಕೊಂಡು, ಇಡೀ ಜಗತ್ತನ್ನೇ ಗೆಲ್ಲಬಹುದು ಎಂಬ ಅಹಂಕಾರದಿಂದ, ಪುಟ್ಟ ಪುಟ್ಟ ಸ್ವತಂತ್ರ ರಾಷ್ಟ್ರಗಳ ಮೇಲೆ, ಸುಳ್ಳು ನೆಪಹೂಡ್ಡಿ ಆರ್ಥಿಕ ದಿಗ್ಬಂದನ ಹೇರುವುದು, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರಗಳನ್ನು ಉರುಳಿಸುವುದು, ವಿಶ್ವಸಂಸ್ಥೆಯ ನಿಯಮಗಳನ್ನು ಬೇಕೆಂತಲೇ ಉಲಂಘನೆ ಮಾಡುವುದು – ಹೀಗೆ ಯಜಮಾನಿಕೆಯ ಗರ್ವದಿಂದ ಮೆರೆಯುತ್ತಿದ್ದ ಈ ಸಾಮ್ರಾಜ್ಯ ಶಾಹಿ ದೊಡ್ಡಣ್ಣ, ತೈಲ ಬೆಲೆ ಮಾರುಕಟ್ಟೆಯ ಕುಸಿತದ ವಿಚಾರದಲ್ಲಿ ಕಂಗೆಟ್ಟು ಹೋಗಿದ್ದಾನೆ. ಅಭೂತಪೂರ್ವ ತೈಲ ಬೆಲೆ ಕುಸಿತಕ್ಕೆ ಕಾರಣವಾದ ತೈಲ ಬೆಲೆ ಸಮರ ಹಲವು ಮಾಧ್ಯಮಗಳು ವಿಶ್ಲೇಷಿಸಿದಂತೆ ಸೌದಿ ಅರೇಬಿಯ ರಶ್ಯಾದ ಮೇಲೆ ಹೂಡಿದ್ದಲ್ಲ. ಸೌದಿ ಅರೇಬಿಯ ಮತ್ತು ರಶ್ಯಾ ಗಳು ತಮ್ಮ ಮಾರುಕಟ್ಟೆ ಪಾಲು ಹೆಚ್ಚಿಸಲು ಮತ್ತು ಶೇಲ್ ತೈಲವನ್ನು ಮಾರುಕಟ್ಟೆಯಿಂದ ಓಡಿಸಲು ಯು. ಎಸ್ ಮೇಲೆ ಸಾರಿರುವ ಸಮರ ಎಂದು ಹಿಂದಿನ ಜನಶಕ್ತಿ ಸಂಚಿಕೆಯಲ್ಲಿ (ಸಂಚಿಕೆ 13, ಮಾ. 23–29) ವಿಶ್ಲೇಷಿಸಲಾಗಿತ್ತು. ಈ ಲೇಖನ ಅದರ ಮುಂದಿನ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತದೆ.

ಯುಎಸ್ ನ, ಶೇಲ್ ತೈಲ ಉದ್ಯಮದ ಅರ್ಧಕ್ಕಿಂತಲೂ ಹೆಚ್ಚು ಆ ದೇಶದ ಹೊಸ ತೈಲ ಸೂಪರ್ ಪವರ್ ಸ್ಥಾನವನ್ನು ಕಳೆಚಿಕೊಂಡು ದಿವಾಳಿಯಾಗುವ ಸಾಧ್ಯತೆಯಿದೆ. ಮಾತ್ರವಲ್ಲದೆ, ಇದರಿಂದ 2 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ನಷ್ಟ ಹೊಂದುತ್ತವೆ. ಈಗಾಗಲೇ ಇದರ ಮುನ್ಸೂಚನೆಗಳು ಗೋಚರಿಸಿವೆ. ಯುಎಸ್ ನ ಶೇಲ್ ತೈಲ ಉದ್ಯಮದ ನಿರ್ವಹಣೆ ಸೇರಿದಂತೆ ಒಟ್ಟು ಉತ್ಪಾದನಾ ವೆಚ್ಚ ಬ್ಯಾರೆಲ್ ಗೆ 40 ರಿಂದ 50 ಡಾಲರ್. ತೈಲ ಬೆಲೆ ಅದಕ್ಕಿಂತ ಕಡಿಮೆಯಾದರೆ ಅದಕ್ಕೆ ನಷ್ಟ.

ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ (ಎಮ್.ಬಿ.ಎಸ್), ರೂಪಿಸಿದ ಹೊಸ ತೈಲ ವ್ಯೂಹದ ನಿರ್ಧಾರಗಳಿಂದಾಗಿ, ಈ ಹಿಂದೆ, ಪ್ರತಿ ನಿತ್ಯ ಸುಮಾರು 9.7 ದಶ ಲಕ್ಷ ಉತ್ಪಾದನೆ ಮಾಡುತ್ತಿದ್ದ ಸೌದಿ ಅರೇಬಿಯಾ, ಪ್ರಸ್ತುತ ದಿನಕ್ಕೆ ಸರಿ ಸುಮಾರು 12.3 ದಶ ಲಕ್ಷದಷ್ಟು ಉತ್ಪಾದನೆ ಮಾಡುತ್ತೇನೆ ಎಂದಿದೆ. ಈಗಾಗಲೇ, ದಿನಕ್ಕೆ 11 ದಶಲಕ್ಷ ಬ್ಯಾರೆಲ್ ಉತ್ಪಾದನೆ ಮಾಡಲು ಆರಂಭಿಸಿದೆ. ಇದರಿಂದಾಗಿ 1 ಬ್ಯಾರೆಲ್ ನ ಕಚ್ಚಾ ತೈಲ ಬೆಲೆ, 20 ವರ್ಷಗಳ ಹಿಂದಕ್ಕೆ ಇದ್ದ ಬೆಲೆ ಅಂದರೆ, ಕೇವಲ 20 ಡಾಲರಿಗೆ ಕುಸಿದು ಬಿದ್ದಿದೆ. ಇದರೊಂದಿಗೆ ಕಾಕತಾಳಿಯ ಎಂಬಂತೆ, ಕೋರೊನಾ ವೈರಸ್ ನಿಂದ ಉಂಟಾಗಿರುವ ವಿಶ್ವದಾದ್ಯಂತ ಲಾಕ್ ಡೌನ್ ಮತ್ತು ಲಾಕ್ ಔಟ್ ತೈಲ ಬೇಡಿಕೆಯನ್ನು ಮತ್ತಷ್ಟು ಕುಸಿಯುವಂತೆ ಮಾಡಿ, ಅಭೂತಪೂರ್ವ ಪರಿಸ್ಥಿತಿಯನ್ನು ನಿರ್ಮಿಸಿದೆ. ಇದು ಯುಎಸ್ ನ ಶೇಲ್ ತೈಲ ಮಾರುಕಟ್ಟೆಯನ್ನು ದಿವಾಳಿಯ ಅಂಚಿಗೆ ನೂಕಿದೆ. 2015–16ರಲ್ಲಿ ತೈಲ ಬೆಲೆ ಕುಸಿದಾಗ ಹೇಗೋ ಬದುಕಿಕೊಂಡ ಶೇಲ್ ತೈಲ ಉದ್ಯಮಗಳು ಬೆಲೆ ಮತ್ತು ಬೇಡಿಕೆ ಎರಡರಲ್ಲೂ ಕುಸಿತವನ್ನು ತಾಳಿಕೊಳ್ಳುವುದು ಕಷ್ಟವಿದೆ. ಇದರಿಂದ ಯುಎಸ್ ನ ಆರ್ಥಿಕತೆಯ ಮೇಲೆ ಭಾರಿ ಪರಿಣಾಮ ಬೀರಿದೆ. ಟ್ರಂಪ್ ನ ಬಹುತೇಕ ಬೆಂಬಲಿಗರು ಈ ಶೇಲ್ ತೈಲ ಉತ್ಪಾದನೆ ಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರೆಲ್ಲರೂ ಟ್ರಂಪ್ ತೆಗೆದುಕೊಂಡ ಕೆಟ್ಟ ರಾಜಕೀಯ ತೀರ್ಮಾನಗಳಿಂದ ಬೇಸತ್ತಿದ್ದಾರೆ. ಇದರಿಂದಾಗಿ ಟ್ರಂಪ್ ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷ ಪಟ್ಟ ಹಿಡಿಯುವುದಕ್ಕೆ ಭಾರಿ ಹಿನ್ನಡೆಯಾಗಿದೆ.

ಇದರಿಂದ ಕಂಗೆಟ್ಟ ಟ್ರಂಪ್ ಮಾರ್ಚ್ 30 ರಂದು, ರಷ್ಯಾದ ಅಧ್ಯಕ್ಷ ಪುತಿನ್ ರಿಗೆ ಫೋನ್ ಮೂಲಕ ಸಂಪರ್ಕಿಸಿ, ತೈಲ ಬೆಲೆ ಕುಸಿತದ ಬಗ್ಗೆ ಮಾತನಾಡಿದ್ದಾರೆ. ತೈಲ ಬೆಲೆ ನಿರ್ಣಾಯಕ ಕ್ಷಣ ತಲುಪಿರುವ ಕಾರಣ, ಟ್ರಂಪ್ ಪುತಿನ್ ರನ್ನು ಸಂಪರ್ಕಿಸಿಸಬೇಕಾದ ಅನಿವಾರ್ಯತೆ ಉಂಟಾಯಿದೆ. ಏಕೆಂದರೆ, ಅಮೆರಿಕಾದ ಆತ್ಮೀಯ ಮಿತ್ರನೆಂದೇ ಪರಿಗಣಿತವಾಗಿರುವ ಸೌದಿ ಅರೇಬಿಯಾದ ರಾಜಕುಮಾರ ಎಮ್.ಬಿ.ಎಸ್ ನೊಂದಿಗೆ, ಪುತಿನ್ ಸಂಬಂದ ಕುದಿರಿಸಿರುವುದು ಟ್ರಂಪ್ ಗೆ ನುಂಗಲಾರದ ತುತ್ತಾಗಿದೆ.

ಏಪ್ರಿಲ್ 1 ರಿಂದ, ಒಪೆಕ್+ ದೇಶಗಳು. ಅಂದರೆ ತೈಲ ಉತ್ಪಾದಕ ಮತ್ತು ರಫ್ತುದಾರ ದೇಶಗಳ ಕೂಟ (ಒಪಿಇಸಿ) ಮತ್ತು ರಷ್ಯಾ, ತಮಗೆ ಬೇಕಾದಷ್ಟು ತೈಲವನ್ನು ಉತ್ಪಾದಿಸಿ ಮಾರುಕಟ್ಟೆಗೆ ಪಂಪ್ ಮಾಡಲು ಸ್ವಾತಂತ್ರ್ಯ ಹೊಂದಿವೆ. ಹೀಗೆ ಹೆಚ್ಚು ಉತ್ಪಾದಿಸಿದ ತೈಲ ಪ್ರಮಾಣವು, ಪ್ರವಾಹೋಪಾದಿಯಲ್ಲಿ ಕ್ರೋಡಿಕರಣವಾಗುವುದು ಖಚಿತ. ಜೊತೆಗೆ, ಸೌದಿ ಅರೇಬಿಯಾವು, ದಿನಕ್ಕೆ 12.3 ದಶ ಲಕ್ಷ ಬ್ಯಾರೆಲ್ ಅನ್ನು ಮಾರುಕಟ್ಟೆಗೆ ಪೂರೈಕೆ ಮಾಡಲು ತಯಾರಿ ನಡೆಸಿರುವುದು. ಇದರಿಂದಾಗಿ, ಒಂದು ಕಡೆ ಬೃಹತ್ ಪೂರೈಕೆ, ಮತ್ತೊಂದೆಡೆ, ಕೋವಿಡ್–19 ರಿಂದಾಗಿ, ಲಾಕ್ ಡೌನ್ ಮತ್ತು ಪ್ರಪಂಚದ ಕೈಗಾರಿಕೆಗಳ ಬೀಗ ಮುದ್ರೆಗಳು. ಇದು ವಿಶ್ವ ಆರ್ಥಿಕತೆಯ ಮೇಲೆ ಆಳವಾದ ಹಿಂಜರಿತದ ಅಕ್ಷರಶಃ ಅಪಾಯದ ವಾಸ್ತವವಾಗಿದೆ. ಇಂತಹ ಉಲ್ಬಣ ಪರಿಸ್ಥಿತಿಯನ್ನು ಎದುರಿಸುವುದು ಹೇಗೆ? ಎಂಬುದೇ ಟ್ರಂಪ್ ಗೆ ಮೊದಲ ಬಾರಿಗೆ ಆತಂಕವಾಗಿದೆ.

ಯು.ಎಸ್ ಶೇಲ್ ಉದ್ಯಮ ನಾಶದ ಅಂಚಿನಲ್ಲಿದೆ ಮತ್ತು ಇದು ಹತ್ತಾರು ಶತಕೋಟಿಯಷ್ಟು ಡಾಲರ್ ಬಂಡವಾಳವನ್ನು ಅಳಿಸಿ ಹಾಕಬಹುದು. ಅಲ್ಲದೆ ಈ ಉದ್ಯಮದ ಜತೆ ಸಂಬಂಧಿಸಿದ ಇತರ ಉದ್ಯಮಗಳು ಮತ್ತು ಇವುಗಳಿಗೆ ಸಾಲ ಕೊಟ್ಟ ಬ್ಯಾಂಕುಗಳು ಜೊತೆಗೆ ಮುಳುಗಬಹುದು. ಸೌದಿ ರಾಜಕುಮಾರ ಎಮ್.ಬಿ.ಎಸ್ ತೆಗೆದುಕೊಂಡ ಹೊಸ ನಿರ್ಧಾರಗಳು "ಆರ್ಥಿಕ ಯುದ್ಧ"ವನ್ನು ಸಾರಿದೆ ಎಂಬ ಆರೋಪವನ್ನು ಅಮೆರಿಕ ಮಾಡಿದೆ. ಇದಕ್ಕೆ ಸಂಬಂಧಿಸಿದಂತೆ 13 ಸೆನೆಟ್ ಸದಸ್ಯರು ಎಮ್.ಬಿ.ಎಸ್ ಗೆ ಪತ್ರ ಬರೆದಿದ್ದಾರೆ. ಅಮೆರಿಕಾದ ಸ್ನೇಹಿತನಾಗಿರುವ ಎಮ್.ಬಿ.ಎಸ್ ನಡವಳಿಕೆ ತಪ್ಪಾಗಿದೆ. ಸ್ನೇಹಿತನಾಗಿರುವ ದೇಶದ ಲಾಭವನ್ನು ಪಡೆದುಕೊಳ್ಳುತ್ತಿದೆ. ತಮ್ಮ ಈ ನಡವಳಿಕೆಯನ್ನು ಬದಲಾಯಿಸಿಕೊಳ್ಳದಿದ್ದರೆ ಅಥವಾ ಆರ್ಥಿಕ ಯುದ್ಧ ಮುಂದುವರಿಸಿದರೆ, ಅಮೆರಿಕಾದೊಂದಿಗಿನ ಸಂಬಂದ ಮೂಲಭೂತವಾಗಿ ಬದಲಾಗಲಿದೆ ಹಾಗೂ ಸೌದಿ ಅರೇಬಿಯಾ ವಿರುದ್ಧ ಕ್ರಮ ಕೈಗೊಳ್ಳಲಾಗುವುದಾಗಿ ಬೆದರಿಕೆ ಒಡ್ಡಿದ್ದಾರೆ.

ಆದಾಗ್ಯೂ, ಸೌದಿಗಳು ಮಾರುಕಟ್ಟೆ ಪಾಲು ಹೆಚ್ಚಿಸಿಕೊಳ್ಳುವ ನಿರ್ಣಯದಲ್ಲಿ ದೃಢವಾಗಿದ್ದಾರೆ. ತೈಲ ಬೆಲೆಯ ಆರ್ಥಿಕ ಯುದ್ಧದಿಂದ ಹಿಂದೆ ಸರಿಯುತ್ತಿಲ್ಲ ಮತ್ತು ಮೇ ತಿಂಗಳಿನಿಂದ ತನ್ನ ತೈಲ ರಫ್ತು ಹೆಚ್ಚಳಕ್ಕೆ ರೂಪಿಸಿದ ಯೋಜನೆ ಜಾರಿ ಮಾಡುತ್ತಿದೆ. ಎಮ್.ಬಿ.ಎಸ್ ನಿರ್ಧಾರವು ದೇಶದ ಸ್ಥೂಲ ಮತ್ತು ಮೂಲಭೂತ ರಣನೀತಿಯಲ್ಲಿ ಬದಲಾವಣೆಯನ್ನು ಬಿಂಬಿಸುತ್ತದೆ. ತೈಲ ಬೆಲೆಯನ್ನು ನಿಗದಿಪಡಿಸುವ ಬದಲು, ಹೆಚ್ಚಿನ ಮಾರುಕಟ್ಟೆ ಪಾಲನ್ನು ವಶಪಡಿಸಿಕೊಳ್ಳುವ ನೀತಿಯನ್ನು ಹೆಚ್ಚು ಅನುಸರಿಸಲು ಎಮ್.ಬಿ.ಎಸ್ ಬಯಸಿದ್ದಾರೆ ಎಂದು ಸೌದಿ ಸರಕಾರದ ವೀಕ್ಷಕರೊಬ್ಬರು ಇತ್ತೀಚೆಗೆ ತಿಳಿಸಿದ್ದಾರೆ. ಒಟ್ಟಿನ ಮೇಲೆ ಸೌದಿ ಅರೇಬಿಯ ಮತ್ತು ರಶ್ಯಾ ಪ್ರತ್ಯೇಕವಾಗಿ ಅಮೆರಿಕದ ಮೇಲೆ ತೈಲ ಬೆಲೆ ಯುದ್ಧ ಸಾರಿದ್ದು, ಒಂದು ದಶಕದಲ್ಲಿ ಅಮೆರಿಕ ಗಳಿಸಿದ್ದ ತೈಲ ಮಾರುಕಟ್ಟೆ ಪಾಲಿಗೆ ಮಾರಣಾಂತಿಕ ಏಟು ಕೊಟ್ಟಿವೆ. ಅಮೆರಿಕನ್ ಶೇಲ್ ತೈಲ ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದ ಹೊರಗೆ ಹೋಗಿ, ಅದಕ್ಕೆ ಕಳೆದುಕೊಂಡ ತಮ್ಮ ಮಾರುಕಟ್ಟೆ ಪಾಲನ್ನು ಮರಳಿ ಪಡೆಯುವವರೆಗೆ ಅವು ಈ ಸಮರವನ್ನು ಮುಂದುವರೆಸಲಿವೆ ಎಂಬ ಪ್ರಬಲ ಸೂಚನೆಗಳಿವೆ. ಅಮೆರಿಕನ್ ಶೇಲ್ ತೈಲ ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದ ಹೋದ ಮೇಲೆ ತೈಲ ಬೆಲೆ ಬ್ಯಾರಲ್ ಗೆ 60 ಡಾಲರಿಗೆ ಏರಲಿದೆ ಎಂದು ಒಬ್ಬ ಹಿರಿಯ ರಶ್ಯನ್ ಅಧಿಕಾರಿ ಹೇಳಿದ್ದಾರೆಂದು ವರದಿಯಾಗಿದೆ. ರಶ್ಯಾ ಈ ಬೆಲೆ ಸಮರವನ್ನು ಪ್ರಾಕೃತಿಕ ಅನಿಲ ಮಾರುಕಟ್ಟೆಗೂ ವಿಸ್ತರಿಸುವ ಹವಣಿಕೆಯಲ್ಲಿದೆ. ರಶ್ಯದ 'ನಾರ್ಡ್ ಸ್ಟ್ರೀಮ್ 2 ಗ್ಯಾಸ್ ಪೈಪ್ ಲೈನ್' ಯೋಜನೆ ಮೇಲೆ ನಿರ್ಬಂಧ ಹೇರಿ, ಯುರೋಪಿನಲ್ಲಿ ತನ್ನ 'ಫ್ರೀಡಂ ಗ್ಯಾಸ್'ನ ಏಕಸ್ವಾಮ್ಯ ಸ್ಥಾಪಿಸುವ ಅಮೆರಿಕದ ತೈಲ ರಣನೀತಿಯ ವಿರುದ್ಧ ಸಹ ರಶ್ಯ ಕತ್ತಿ ಮಸೆಯುತ್ತಿದೆ.

ಇದು ಅಧ್ಯಕ್ಷ ಟ್ರಂಪ್ ಗೆ ಎಚ್ಚರಿಕೆಯ ಗಂಟೆ. ಟ್ರಂಪ್ ಗೆ ಇದರಿಂದಾಗಿ ಭಾರಿ ರಾಜಕೀಯ ನಷ್ಟ ಆಗಲಿದೆ. ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಯುಎಸ್ ಅತ್ಯಂತ ಮಹತ್ವದ ಆಟಗಾರನಾಗಿ ಮಾರ್ಪಟ್ಟಿದ್ದು ನನ್ನಿಂದಾಗಿ ಎಂಬ ಅವರ ಹೆಗ್ಗಳಿಕೆ ಇದೀಗ ತೀವ್ರವಾಗಿ ಅಸ್ಥಿರಗೊಂಡಿದೆ. ಶೇಲ್ ತೈಲ ಸುಗ್ಗಿಯನ್ನು ಆಧರಿಸಿ ಜಾಗತಿಕ 'ಇಂಧನ ಅಧಿಪತ್ಯ'ವನ್ನು ಗಳಿಸುವ ಅವರ ಕಾರ್ಯ ಸೂಚಿಯೂ ಈಗ ತಿರುಕನ ಕನಸಿನಂತೆ ಕಾಣುತ್ತಿದೆ. ಇದಕ್ಕಿಂತ ಮುಖ್ಯವಾಗಿ, ಇರಾನ್, ವೆನೆಜುವೆಲಾ ಮತ್ತು ರಶ್ಯಾದ ತೈಲ ಉದ್ಯಮದ (ಮತ್ತು ಅದರ ಪ್ರಮುಖ ನಾರ್ಡ್ ಸ್ಟ್ರೀಮ್ 2 ಗ್ಯಾಸ್ ಪೈಪ್ ಲೈನ್ ಯೋಜನೆ) ವಿರುದ್ಧ ನಿರ್ಬಂಧಗಳನ್ನು ಮಿಲಿಟರೀಕರಣಗೊಳಿಸಿ ಈ ದೇಶಗಳ ಮಾರುಕಟ್ಟೆ ಷೇರುಗಳನ್ನು ಪಡೆದುಕೊಂಡ ಟ್ರಂಪ್ ನ ಟ್ರೇಡ್ ಮಾರ್ಕ್ ವಿದೇಶ ನೀತಿ ಬ್ಯೂಮರಾಂಗ್ ಆಗುತ್ತಿದೆ. ತನ್ನ ಈ ಆಕ್ರಾಮಕ ನೀತಿಯ ಬಗ್ಗೆ ಸಹ ಕೊಚ್ಚಿಕೊಳ್ಳುತ್ತಿದ್ದ ಟ್ರಂಪ್, ಈಗ ಅದೂ ಚುನಾವಣೆಯ ಮುನ್ನಾದಿನಗಳಲ್ಲಿ 'ದುರ್ಬಲ' ಮತ್ತು 'ತೈಲ ಸಮರದಲ್ಲಿ ಸೋತ ಸೇನಾನಿ'ಯಾಗಿ ಕಾಣಿಸಿಕೊಳ್ಳುವುದು ರಾಜಕೀಯವಾಗಿ ಅಸಹನೀಯ. ಟ್ರಂಪ್ ಬೆಂಬಲಿಗರಲ್ಲಿ ಗಮನಾರ್ಹ ಭಾಗವು ಶೇಲ್ ತೈಲ ಮತ್ತು ಅನಿಲ ಉತ್ಪಾದನೆಯಲ್ಲಿ ತೊಡಗಿರುವುದರಿಂದ ಇದು ಇನ್ನೂ ಭಾರೀ ರಾಜಕೀಯ ಹೊಡೆತ.

ಟ್ರಂಪ್ ಪುತಿನ್ ರವರಿಗೆ ಮಾಡಿದ ಫೋನ್ ಕರೆ ತೈಲ ಮಾರುಕಟ್ಟೆ ನಿರ್ವಹಣೆಯಲ್ಲಿ ಸಹಕರಿಸುವ ಐತಿಹಾಸಿಕ ಕ್ರಮದಲ್ಲಿ ವಾಷಿಂಗ್ಟನ್ ನ ಮೊದಲ ಹೆಜ್ಜೆಯನ್ನು ಸೂಚಿಸುತ್ತದೆಯೇ? ಈ ಕರೆಯ ನಂತರ ಅಮೆರಿಕನ್ ವಕ್ತಾರ ತೈಲ ಮಾರುಕಟ್ಟೆ ಸಮತೋಲಿಸುವುದರ ಕುರಿತು ಸ್ಥೂಲ ಒಪ್ಪಂದ ಆಗಿದೆ ಎಂದರು. ಆದರೆ ರಶ್ಯನ್ ವಕ್ತಾರ ತೈಲ ಸಚಿವರುಗಳು ಮಾತುಕತೆ ನಡೆಸಬೇಕು ಎಂದು ಒಪ್ಪಲಾಗಿದೆ ಎಂದು ಮಾತ್ರ ಹೇಳಿದರು. ವಸ್ತುನಿಷ್ಠವಾಗಿ ಹೇಳುವುದಾದರೆ, ತೈಲ ಬಿಕ್ಕಟಿಗೆ ಒಂದು ಅಂತರಾಷ್ಟ್ರೀಯ ಪ್ರತಿಕ್ರಿಯೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ, ಒಪೆಕ್+ ಮೀರಿ ವ್ಯಾಪಕವಾದ ಒಕ್ಕೂಟದಲ್ಲಿ, ಒಪೆಕ್++ (ಇದರಲ್ಲಿ, ಯು.ಎಸ್ ಕೂಡ ಒಳಗೊಂಡಿರಬೇಕು) ಸ್ಥಾಪನೆಯ ಅಗತ್ಯವಿದೆ.

ಒಪೆಕ್+ ಗುಂಪಿನ ಹೊರಗಿನ ಹೆಚ್ಚಿನ ವೆಚ್ಚದ ಉತ್ಪಾದಕರು ಅಂತಿಮವಾಗಿ ತೈಲ ಮಾರುಕಟ್ಟೆ ಯನ್ನು ಸಮತೋಲನ ಗೊಳಿಸುವ ಹೊಣೆಯನ್ನು ಹಂಚಿ ಕೊಳ್ಳಬೇಕು ಎಂಬ ಅಂಶವನ್ನು ಸೌದಿ ಅರೇಬಿಯಾ ಮತ್ತು ರಷ್ಯಾ ಕೂಡಾ ಬೆಂಬಲಿಸುತ್ತವೆ.



JANASHAKTHI KANNADA VARA PATRIKE April 6-12, 2020 Price: Rs. 10/- Date of Publication: 3 April 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

18 ಅಗತ್ಯ ವಸ್ತುಗಳು ಇರವ ಪ್ಯಾಕೆಟ್ಗಳನ್ನು ಅಸಂಘಟಿತ ಬಡ ಕಾರ್ಮಿಕರಿಗೆ ವಿತರಿಸುವ ಯೋಜನೆಯೊಂದನ್ನು ಸಿಐಟಿಯು ರಾಜ್ಯ ಸಮಿತಿ ತೀರ್ಮಾನಿಸಿದೆ. ಬೀದಿ ಬದಿ ಬಡ ವ್ಯಾಪಾರಸ್ತರು, ಆಟೋ ಚಾಲಕರು, ಹಮಾಲರು, ಕಟ್ಟಡ ಕಾರ್ಮಿಕರು, ಮನೆ ಕೆಲಸಗಾರರು, ಬಿಸಿಯೂಟ ಕಾರ್ಮಿಕರು, ಪೌರ ಕಾರ್ಮಿಕರಲ್ಲಿ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ವಿತರಿಸಲಾಗುತ್ತಿದೆ.



ಮಾರ್ಚ್ 31 ಅಸಂಘಟಿತ ಕಾರ್ಮಿಕರಿಗೆ "ಅನ್ನಪೂರ್ಣ ಸಂಕಲ್ಪ ನಿಮ್ಮೊಂದಿಗೆ ನಾವು" ಪ್ರಚಾರಾಭಿಯಾನವನ್ನು CITU, AIEEA ಯಿಂದ ಆರಂಭಿಸಲಾಯಿತು. ಬೆಂಗಳೂರಿನ ಯಶವಂತಪುರದ ಎಪಿಎಂಸಿ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳನ್ನು ಹಮಾಲಿ ಕಾರ್ಮಿಕರಿಗೆ ವಿತರಿಸಲಾಯಿತು. ಈ ವೇಳೆ ಕಾರ್ಮಿಕ ಮುಖಂಡರು ಹಾಜರಿದ್ದರು.



ಬಸವನಗುಡಿಯಲ್ಲಿರುವ ಜ್ಯೋತಿಬಸು ಭವನದಲ್ಲಿ ಅಸಂಘಟಿತ ಕಾರ್ಮಿಕರಿಗೆ, ಬೀದಿಬದಿ ವ್ಯಾಪಾರಿಗಳಿಗೆ, ಮನೆ ಕೆಲಸಗಾರರಿಗೆ ಹಾಗೂ ಅಟೋ ಚಾಲಕರುಗಳಿಗೆ ಆಹಾರ ಪ್ಯಾಕೇಟ್‌ಗಳನ್ನು CITU ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯಿಂದ ವಿತರಿಸಲಾಯಿತು. ಈ ವೇಳೆ ಸಂಘಟನೆಯ ಮುಖಂಡರು ಹಾಜರಿದ್ದರು.



ಬೆಂಗಳೂರು ಪೂರ್ವ ವಲಯದಲ್ಲಿ ಸಿಐಟಿಯು ಸಂಘಟನೆಯಿಂದ ವಲಸೆ ಕಾರ್ಮಿಕರಿಗೆ ನೀಡಲು ತಂದ ರೇಷನ್ ನನ್ನು ಉದಯನಗರ ಕಚೇರಿಯಲ್ಲಿ ಪ್ಯಾಕ್ ಮಾಡುತ್ತಿರುವ ಜನವಾದಿ ಮಹಿಳಾ ಸಂಘಟನೆಯ ಸಂಗಾತಿಗಳು



ವೈಟ್‌ಫೀಲ್ಡ್ ತೂಬರಹಳ್ಳಿಯಲ್ಲಿರುವ ಪಶ್ಚಿಮ ಬಂಗಾಳ ಮೂಲದ ಜನರು ವಾಸಿಸಿತ್ತಿದ್ದು ಇವರಿಗೆ ಊಟಕ್ಕೆ ಸಾಕಷ್ಟು ಅನಾನುಕೂಲವಾಗಿತ್ತು. ಜನವಾದಿ ಹಾಗೂ ಕಾರ್ಮಿಕರ ರಂಗದ ಪ್ರಯತ್ನದಿಂದಾಗಿ ಊಟದ ವ್ಯವಸ್ಥೆಯನ್ನು ಮಾಡಲಾಯಿತು.



ಕುತ್ತಾರಿನ dyfi ಘಟಕ ವತಿಯಿಂದ ವಲಸೆ ಕಾರ್ಮಿಕರು, ಊರು ತಲುಪಲಾಗದೆ ಸಿಕ್ಕಿಬಿದ್ದಿರುವ ದಾರಿಹೋಕರಿಗಾಗಿ ಸಾಮುದಾಯಿಕ ಕಿಚನ್ ಮೂಲಕ ಆಹಾರದ ಪೊಟ್ಟಣವನ್ನು ವಿತರಿಸಲಾಯಿತು.




ಬೀದರ ಜಿಲ್ಲೆಯ ಜನವಾದಿ ಮಹಿಳಾ ಸಂಘಟನೆಯಿಂದ ನೀರು ಮತ್ತು ರೇಷನ್‌ನನ್ನು ವಿತರಿಸಲಾಯಿತು.



SFI ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ತಾಲೂಕ ಸಮಿತಿಯಿಂದ ನಿರ್ಗತಿಕರಿಗೆ, ಅನಾಥರಿಗೆ ಪೋಲಿಸರಿಗೆ, ಪೌರ ಕಾರ್ಮಿಕರಿಗೆ ಊಟ ಮತ್ತು ನೀರಿನ ಪಾಕೆಟ್ ವಿತರಣೆ ಮಾಡಲಾಯಿತು.



ವಿಜನಾಪುರದಲ್ಲಿ Dyfi - JMS ನಿಂದ ಬಡವರಿಗೆ ರೇಷನ್ ವಿತರಣೆ ಮಾಡಲಾಯಿತು.



ಮಂಡ್ಯ ಕಾರ್ಮಿಕ ಅಧಿಕಾರಿ – 1, ರಾಜೇಶ್ ಜಾಧವ್ ರವರು ಭೇಟಿ ನೀಡಿ ಕನಿಷ್ಠ ಆರೋಗ್ಯ ಸುರಕ್ಷೆ ಬಗ್ಗೆ ಸ್ಯಾನಿಟೈಸರ್, ಸೋಪ್ ಹಾಗು ಮಾಸ್ಕ್ ಗಳನ್ನ ಕಾರ್ಮಿಕ ಇಲಾಖೆ, ರೆಡ್ ಕ್ರಾಸ್ ಸಂಸ್ಥೆಗಳ ಸಹಯೋಗದಲ್ಲಿ ವಿತರಿಸಲಾಯಿತು. ಈ ಸಂದರ್ಭದಲ್ಲಿ CITU ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ. ಕುಮಾರಿ, CWFIನ ಜಿಲ್ಲಾ ಅಧ್ಯಕ್ಷ ಶ್ರೀನಿವಾಸ್, ಮುಖಂಡರಾದ ನಿಂಗರಾಜು, ಗ್ರಾಮ ಪಂಚಾಯತ್ ಸದಸ್ಯರಾದ ಚಿಕ್ಕಸಿದ್ದಯ್ಯ, ಎಲೆಕ್ಟ್ರೀಷಿಯನ್ ಯೋಗೇಶ್.





ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 39 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಕೊರೊನಾ ಬಿಕ್ಕಟ್ಟು ಚೀನಿ ಪಿತೂರಿಯೇ? (ಎ.3)
* ಕೊರೊನಾಕ್ಕೆ ಸ್ವಾಗತ ಕೋರುತ್ತಿರುವ ಮಾಧ್ಯಮಗಳು – ಡಾ. ನಾಗೇಶ್ ಹೆಗಡೆ (ಎ.2)
* ಕೊರೊನಾ ಎದುರಿಸಲು ಮೋದಿ ಸರಕಾರ ಮಾಡುತ್ತಿರುವುದೇನು? ಮಾಡಬೇಕಾದದ್ದೇನು?(ಎ.1)
* ಕೊರೊನಾ ವೈರಸ್ ಕುರಿತು ಡಾ. ಶ್ರೀನಿವಾಸ ಕಕ್ಕಿಲ್ಲಾಯರವರ ಧೈರ್ಯ ತುಂಬುವ ಮಾತುಗಳು (ಎ.1)
* ಕೂಲಿಕಾರರನ್ನು ಬೀದಿಗೆ ತಳ್ಳಿದ ಲಾಕ್ಡೌನ್ (ಮಾ.31)
* ಕೊರೊನಾದಿಂದ 32; ಲಾಕ್‌ಡಾನ್ ಗೆ 27 ಜನ ಸಾವಿಗೀಡಾಗಿದ್ದಾರೆ. (ಮಾ. 30)
* ಸಾಮಾಜಿಕ ಒಗ್ಗಟ್ಟಿನ ಮೂಲಕ ಕೊರಾನೆಗೆ ಉತ್ತರ ನೀಡಿದ ಕೇರಳಿಗರು (ಮಾ. 30)
* ದಿಗ್ಬಂಧನವೇನೋ ಸರಿ! ಆದರೆ ಜನಗಳ ಪಾಡೇನು!? (ಮಾ.29)
* ಸಂಕಷ್ಟದಲ್ಲಿದ್ದ ಕಾರ್ಮಿಕರಿಗೆ ಹೆಗಲು ನೀಡಿದ CITU (ಮಾ.29)
* ಈ ನಾಡ ಕಟ್ಟಿದವರು ನಾವೆಲ್ಲಿಗೋಗಬೇಕು?!! (ಮಾ.28)

ಯೂಟ್ಯೂಬ್ ನಲ್ಲಿ 'Janashakthi Media' ಎಂದು ಸರ್ಚ್‌ಕೊಡಿ.
ನಂತರ ಅಲ್ಲಿ ಕಾಣುವ 'Subscribe'ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್‌ನ್ನು ಪ್ರೋತ್ಸಾಹಿಸಿ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**